# ನೀನಾಸಮ್ ಸಂಸ್ಕೃತಿ ಶಿಬಿರ:

## ಅಕ್ಟೋಬರ್ ೨೦೦೦

ಕಳೆದ ೧೮ ವರ್ಷಗಳಿಂದ ನೀನಾಸಮ್ ಪ್ರತಿ ಅಕ್ಟೋಬರ್‌ನಲ್ಲಿ ಚಲನಚಿತ್ರ-ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದೆ. ಈ ವರ್ಷದ ಸಂಸ್ಕೃತಿ ಶಿಬಿರವೂ ಅದೇ ಮಾದರಿಯಲ್ಲಿ ಯೋಜಿತವಾಗಿದ್ದು, **ಅಕ್ಟೋಬರ್ ೧೫ರಿಂದ ೨೨ರ ವರೆಗೆ** ನಡೆಯುತ್ತದೆ.

ಈ ಶಿಬಿರದಲ್ಲಿ ರಂಗಭೂಮಿ, ಸಾಹಿತ್ಯ, ಸಂಗೀತ, ನೃತ್ಯ, ಚಲನಚಿತ್ರ ಮುಂತಾದ ಸಾಂಸ್ಕೃತಿಕ ಮಾಧ್ಯಮಗಳ ಸ್ವರೂಪ, ವೈವಿಧ್ಯ, ಮೀಮಾಂಸೆ, ವಿಮರ್ಶೆ, ಈ ಮಾಧ್ಯಮಗಳ ಪರಸ್ಪರ ಸಂಬಂಧ ಹಾಗೂ ಒಟ್ಟೂ ಸಮಾಜದೊಂದಿಗೆ ಸಂಸ್ಕೃತಿಯ ಸಂಪರ್ಕ – ಈ ವಿಷಯಗಳ ಬಗ್ಗೆ ಅಭ್ಯಾಸ, ಚರ್ಚೆ, ವಿಚಾರವಿನಿಮಯ ನಡೆಯುತ್ತದೆ. ಜತೆಗೆ ಪ್ರತಿದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉತ್ಸವ ನಡೆಯುತ್ತದೆ. ಶಿಬಿರ ಪ್ರಾರಂಭವಾಗುವುದು ಒಟ್ಟೂ ಕಾರ್ಯಕ್ರಮದ ಸ್ಥೂಲ ಸ್ವರೂಪವನ್ನು ಪರಿಚಯಿಸುವ ಕಿರು ಅಧಿವೇಶನದಿಂದ. ಆಮೇಲಿನ ದಿನಗಳಲ್ಲಿ ರಂಗಭೂಮಿಯ ಬಗ್ಗೆ, ಸಂಗೀತ-ನೃತ್ಯ ಮಾಧ್ಯಮಗಳ ಬಗ್ಗೆ, ಸಾಹಿತ್ಯದ ವಿವಿಧ ಪ್ರಕಾರಗಳ ಬಗ್ಗೆ, ಚಲನಚಿತ್ರ ಸಹೃದಯತೆಯ ಬಗ್ಗೆ ಮತ್ತು ಒಟ್ಟೂ ಸಂಸ್ಕೃತಿ-ಸಂವಹನದ ಪ್ರಕ್ರಿಯೆಯ ಬಗ್ಗೆ ಉಪನ್ಯಾಸ ಪ್ರಾತ್ಯಕ್ಷಿಕೆ-ಚರ್ಚೆಗಳು ನಡೆಯುತ್ತವೆ. ಪ್ರತಿಯೊಂದು ವಿಷಯದ ಬಗ್ಗೆ ಶಿಬಿರದಲ್ಲಿ ಆಯಾ ಮಾಧ್ಯಮದ ಆಯ್ದ ಕೃತಿಗಳನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳಲಾಗುತ್ತದೆ. ಶಿಬಿರ ಪ್ರತಿನಿತ್ಯ ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಹಾಗೂ ಮಧ್ಯಾಹ್ನ ೨-೩೦ರಿಂದ ೬ರತನಕ ನಡೆಯುತ್ತದೆ. ಇದಲ್ಲದೆ ಪ್ರತಿದಿನ ಸಂಜೆ ರಂಗ ಪ್ರದರ್ಶನಗಳು (ತಿರುಗಾಟ ೨೦೦೦ದ ಪ್ರಥಮ ಪ್ರದರ್ಶನಗಳು), ಸಂಗೀತ, ನೃತ್ಯ ಇತ್ಯಾದಿ ಕಾರ್ಯಕ್ರಮಗಳು – ಶಿಬಿರಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಡೆಯುತ್ತವೆ. ಡಾ. ಯು.ಆರ್. ಅನಂತಮೂರ್ತಿಯವರು ಶಿಬಿರದ ನಿರ್ದೇಶಕರಾಗಿರುತ್ತಾರೆ.

---

ಶಿಬಿರಾರ್ಥಿಗಳ ಊಟೋಪಚಾರಗಳಿಗಾಗಿ ನಿಗದಿಪಡಿಸಿದ ಶುಲ್ಕ ರೂ. ೭೦೦=೦೦
ಆಸಕ್ತರು **ತಾ.೩೦ ಸೆಪ್ಟೆಂಬರ್ ೨೦೦೦ದೊಳಗೆ** ಅಭ್ಯರ್ಥಿಪತ್ರ ಕಳಿಸಬೇಕು.

**ಸಂಪರ್ಕಿಸಬೇಕಾದ ವಿಳಾಸ:**
ನೀನಾಸಮ್ ಸಂಸ್ಕೃತಿ ಶಿಬಿರ, ಹೆಗ್ಗೋಡು, ಸಾಗರ ಕರ್ನಾಟಕ ೫೭೭ ೪೧೭

# ನೀನಾಸಮ್ ತಿರುಗಾಟ ೨೦೦೦

## ಈ ವರ್ಷದ ನಾಟಕಗಳು

೧. **ಶ್ಮಶಾನ ಕುರುಕ್ಷೇತ್ರಂ** (ನಿರ್ದೇಶನ: ಅಕ್ಷರ ಕೆ.ವಿ.) ಕುವೆಂಪು ಅವರ ಪ್ರಮುಖ ನಾಟಕವನ್ನಾಧರಿಸಿದ ಪ್ರಯೋಗ. ಮಹಾಭಾರತ ಯುದ್ಧದ ಬಳಿಕ ಕುರುಕ್ಷೇತ್ರದಲ್ಲಿ ನಡೆಯುವ ಘಟನೆಗಳನ್ನು ಎದುರಿಗಿಟ್ಟುಕೊಂಡು ಆ ಮೂಲಕ ಯುದ್ಧದ ಭೀಕರತೆಯನ್ನೂ ಹಾಗೂ ಮಾನವ ಚರಿತ್ರೆಯ ಹರಿವಿನಲ್ಲಿ ವಿನಾಶ ಮತ್ತು ಪುನರ್‌ಸೃಷ್ಟಿಯ ವಿದ್ಯಮಾನಗಳನ್ನೂ ಕುರಿತು ಚಿಂತಿಸುವ ನಾಟಕ. ಛಂದೋಬದ್ಧವಾದ ಹಳಗನ್ನಡದ ವಾಚಿಕವನ್ನೂ ಮತ್ತು ಸಂಗೀತವನ್ನೂ ಒಳಗೊಂಡ ಪ್ರಯೋಗ.

೨. **ಭಗವದಜ್ಜುಕೀಯಮ್** (ನಿರ್ದೇಶನ: ಕಾವಾಲಮ್ ನಾರಾಯಣ ಪಣಿಕ್ಕರ್) ಶಾಸ್ತ್ರೀಯ ಸಂಸ್ಕೃತ ನಾಟಕಗಳಲ್ಲಿಯೇ ವಿಶಿಷ್ಟವಾದ ಪ್ರಹಸನ ಪ್ರಕಾರದ ಪ್ರಮುಖ ಉದಾಹರಣೆ– ಈ ನಾಟಕ. ತನ್ನ ಕಾಲದ ಧಾರ್ಮಿಕ ಡಾಂಭಿಕತೆಯನ್ನು ಮೊನಚಾದ ವ್ಯಂಗ್ಯದಿಂದ ಚುಚ್ಚುವ ಈ ಕೃತಿ ಎಲ್ಲ ಕಾಲಕ್ಕೂ ಪ್ರಸ್ತುತವೂ ರಂಜನೀಯವೂ ಆಗಿರುವಂಥದು. ರಚನೆ: ಮಹೇಂದ್ರ ವಿಕ್ರಮವರ್ಮ; ಕನ್ನಡಕ್ಕೆ: ಕೆ.ವಿ. ಸುಬ್ಬಣ್ಣ.

೩. **ಅಕ್ಕತಂಗಿಯರು** (ನಿರ್ದೇಶನ: ಚಿದಂಬರರಾವ್ ಜಂಬೆ) ರಷಿಯಾದ ಪ್ರಸಿದ್ಧ ನಾಟಕಕಾರ ಆ್ಯಂಟನ್ ಚೆಕಾಫ್‌ನ 'ಥ್ರೀ ಸಿಸ್ಟರ್ಸ್' ಕೃತಿಯ ಕನ್ನಡ ಅವತರಣಿಕೆ. ನಗರಕ್ಕೆ ಹೋಗುವ ಹಂಬಲ ಹೊತ್ತು ಹಳ್ಳಿಯಲ್ಲಿ ಸಿಲುಕಿ ಕಾಯುವ ಮೂವರು ಅಕ್ಕತಂಗಿಯರನ್ನು ಕೇಂದ್ರವಾಗಿಟ್ಟುಕೊಂಡು ಒಂದು ಯುಗದ ಕಾಲಧರ್ಮವನ್ನೇ ರೂಪಕವಾಗಿ ಬಿಂಬಿಸುವ ಕೃತಿ ಇದು. ಅನುವಾದ: ವೈದೇಹಿ.

ಈ ನಾಟಕಗಳ ತಯಾರಿ ಈಗ ನಡೆದಿದ್ದು ಇದೇ ಅಕ್ಟೋಬರ್ ೧೫, ೧೬, ಮತ್ತು ೧೭ರಂದು ಇವುಗಳ ಪ್ರಥಮ ಪ್ರದರ್ಶನ ನಡೆಯುತ್ತದೆ. ಆಮೇಲೆ ತಿರುಗಾಟದ ಸಂಚಾರ ಪ್ರದರ್ಶನಗಳು ಆರಂಭವಾಗಿ ೨೦೦೧ ಮಾರ್ಚ್ ಅಂತ್ಯದವರೆಗೂ ಕರ್ನಾಟಕದ ಎಲ್ಲ ಭಾಗಗಳಲ್ಲಿ ತಿರುಗಾಟವು ಸಂಚರಿಸುವ ಯೋಜನೆಯಿದೆ.

---

ನೀನಾಸಮ್ ತಿರುಗಾಟ ಪ್ರದರ್ಶನಗಳನ್ನು ಏರ್ಪಡಿಸಬಯಸುವ
ಸಂಘಟಕರು ವಿವರಗಳಿಗೆ ಕೂಡಲೇ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಿ:
**ನೀನಾಸಮ್ ತಿರುಗಾಟ, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭**
ದೂರವಾಣಿ: ೦೮೧೮೩-೬೫೬೪೬ ಫ್ಯಾಕ್ಸ್: ೦೮೧೮೩-೬೫೬೭೩

# ತಂತ್ರಜನ್ಯ ನಾಗರಿಕತೆ ಮತ್ತು ಸಂಸ್ಕೃತಿ ಒಂದು ವೈಜ್ಞಾನಿಕ ನಿರ್ವಾಣ

ಮೂಲ ರಷ್ಯನ್: ವ್ಯಾಚೆಸ್ಲೆವ್ ಸ್ಪಿಯೋಸಿನ್
ಇಂಗ್ಲಿಷ್: ಡಾ.ಹೆಲೆನ್ ಪೆಟ್ರೋವ್‌ಸ್ಕಿ
ಕನ್ನಡಕ್ಕೆ : ಪುಟ್ಟು ಕುಲಕರ್ಣಿ

ಆಧುನಿಕ ಜಗತ್ತಿನ ನಾಗರಿಕತೆಯ ಹಾಗೂ ಅದರ ಅಭಿವೃದ್ಧಿಯಲ್ಲಿ ಅತ್ಯಂತ ತೀವ್ರಗತಿಯಲ್ಲಿ ಸನ್ನಿಹಿತವಾಗುತ್ತಿರುವ ಮುಖ್ಯ ತಿರುವಿನ ವಿಚಾರದ ಬಗೆಗೆ ಈಗ ಜಗತ್ತಿನಾದ್ಯಂತ ಚರ್ಚೆ ನಡೆಯುತ್ತಿದೆ. ಇತಿಹಾಸಕಾರರು, ತತ್ವಜ್ಞಾನಿಗಳು, ಸಮಾಜಶಾಸ್ತ್ರಜ್ಞರೂ ಸಹಿತ ಈ ಶತಮಾನದ ಮುಖ್ಯ ತಿರುವಿನಲ್ಲಿ ಎಲ್ಲಾ ಮೌಲ್ಯಗಳೂ ಪುನರ್ಮೌಲೀಕರಣಗೊಳ್ಳಬೇಕಾದ ಪ್ರಕ್ರಿಯೆಯ ಕುರಿತು ಮೇಲಿಂದ ಮೇಲೆ ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದಾರೆ. ನವೀನ ವಿಚಾರಧಾರೆಯನ್ನು ಹೇಗೆ ಅನುಷ್ಠಾನಗೊಳಿಸಬೇಕು ಮತ್ತು ಹೊಸ ಹೊಸ ಮಾರ್ಗಗಳನ್ನು ಹೇಗೆ ನಿರ್ಮಿಸಬಹುದು ಎನ್ನುವುದರ ಕುರಿತೂ ಕೂಲಂಕಷ ವಿಶ್ಲೇಷಣೆ ಮಾಡಲಾಗುತ್ತಿದೆ.

ಈ ಆಧುನಿಕ ನಾಗರಿಕತೆಯು ಹಲವಾರು ಜಾಗತಿಕ ಬಿಕ್ಕಟ್ಟುಗಳನ್ನು ಉದ್ಭವಿಸುವುದರ ಜೊತೆಗೆ ಈ ತೆರನಾದ ಬಿಕ್ಕಟ್ಟಿನ ಮಧ್ಯದ ಅಭಿವೃದ್ಧಿಯಿಂದಾಗಿ ಮೌಲ್ಯಗಳೂ ಸಹಿತ ಸಮಾಸ್ಯಾತ್ಮಕವಾಗಿ ಪರಿವರ್ತಿತಗೊಂಡ ವ್ಯವಸ್ಥೆ ನಿರ್ಮಾಣಗೊಂಡಿದೆ. ಇದರ ಪ್ರತಿಧ್ವನಿಯಾಗಲಿ, ಪ್ರತಿಬಿಂಬವಾಗಲಿ ಒಂದು ಮೂಲಭೂತ ಪ್ರಶ್ನೆಯನ್ನು ಹುಟ್ಟು ಹಾಕುತ್ತಿದೆ – ''ಇದು ಯಾವ ವಿಧವಾದ ಮೌಲ್ಯ ವ್ಯವಸ್ಥೆ ? '' ಇದಕ್ಕೆ ಸೂಕ್ತ ಉತ್ತರ ದೊರಕಿಸಿಕೊಳ್ಳಬೇಕೆಂದರೆ, ವಿವಿಧ ನಾಗರಿಕತೆಗಳು, ಸಂಸ ತಿಗಳು ಅಭಿವೃದ್ಧಿಹೊಂದಿರುವ ಉದ್ದೇಶದ (Notion) ಬಗೆಗೆ ಮೊದಲು ತಿಳಿದುಕೊಳ್ಳಬೇಕಾಗುತ್ತದೆ.

ಅರ್ನಾಲ್ಡ್ ಟಾಯ್ನ್‌ಬೀಯು ಪ್ರಚುರಪಡಿಸಿದ 'ಜಗತ್ತಿನ ನಾಗರಿಕತೆಗಳ ಜ್ಞಾನ' ಎಲ್ಲರಿಗೂ ಪರಿಚಿತವಿದ್ದ ಸಂಗತಿ. ಮಾನವೇತಿಹಾಸದಲ್ಲಿ ಅಸ್ತಿತ್ವದಲ್ಲಿದ್ದ/ರುವ ೨೧ ಪ್ರಮುಖ ನಾಗರಿಕತೆಗಳನ್ನು ಪಟ್ಟಿ ಮಾಡಿ ಅವುಗಳ ಸವಿವರ ಒದಗಿಸಿದ್ದಾರೆ.



ಈ ಅಗಾಧವಾದ ವಿಭಾಗಗಳನ್ನು ಮುಖ್ಯವಾಗಿ ಎರಡೇ ಎರಡು ಗುಂಪುಗಳಲ್ಲಿ ವಿಂಗಡಿಸಬಹುದು: ೧) ಸಂಪ್ರದಾಯಬದ್ಧ ನಾಗರಿಕತೆ, ೨) ಇತ್ತೀಚಿನವರೆಗೂ ಪರಿಗಣಿಸಲ್ಪಡುತ್ತಿರುವ ಆಧುನಿಕ ಅಥವಾ ಪಾಶ್ಚಾತ್ಯ ಸಂಸ್ಕೃತಿ. ಈ ರೀತಿಯ ವಿಂಗಡಣೆ ಕೇವಲ ಪಾಶ್ಚಮಾತ್ಯ ರಾಷ್ಟ್ರಗಳಲ್ಲಿ ಗುರುತಿಸಲ್ಪಡುತ್ತಿಲ್ಲ. ಇದನ್ನು ಈಗ 'ತಾಂತ್ರಿಕಜನ್ಯ ಸಂಸ್ಕೃತಿ' (Technogenic Culture) ಎಂಬ ಆಧುನಿಕ ಹೆಸರಿನಿಂದ ಗುರುತಿಸಬೇಕಿದೆ. ಇದರ ಅಭಿವೃದ್ಧಿಯನ್ನು ಗುರುತಿಸಲು, ಅತ್ಯಂತ ಅವಶ್ಯವಾದ, ಅವಿರತವಾದ ಸಂಶೋಧನೆ ಮತ್ತು ಈ ಶೋಧನೆಯ ಫಲದಿಂದುತ್ಪನ್ನವಾದ ಆಧುನಿಕ ತಂತ್ರಜ್ಞಾನದ ಅನುಷ್ಠಾನಗಳು ಪ್ರಮುಖ ಪಾತ್ರ ವಹಿಸುತ್ತವೆ. ಕೇವಲ ಆರ್ಥಿಕ ಅಭಿವೃದ್ಧಿಯನ್ನೇ ಗುರಿಯಾಗಿಟ್ಟುಕೊಂಡ ಉತ್ಪಾದನೆಯ ಜೊತೆ ಜೊತೆಗೆ ಸಾಮಾಜಿಕ ನಿರ್ವಹಣೆ ಹಾಗೂ ಸಾಮಾಜಿಕ ಸಮೂಹ ಮಾಧ್ಯಮಗಳಲ್ಲಿಯ ತಾಂತ್ರಿಕ ಬೆಳವಣಿಗೆಯನ್ನು ಅವಲಂಬಿಸಿದೆ.

ಯುರೋಪಿನ ದೇಶಗಳಲ್ಲಿ ಈ ತಾಂತ್ರಿಕಜನ್ಯ ನಾಗರಿಕತೆ-ಸಂಸ್ಕೃತಿಯು ೧೪-೧೬ನೇ ಶತಮಾನದಲ್ಲಿ ಪ್ರಾರಂಭವಾದದ್ದನ್ನು ಕಾಣುತ್ತೇವೆ. ಅದಕ್ಕೂ ಹಿಂದಿನ ಅವಧಿಯಲ್ಲಿದ್ದ ''ಸಾಂಪ್ರದಾಯಿಕ ಸಂಸ್ಕೃತಿಗಳ'' ಜೊತೆಗೆ ನಡೆದ ಉತ್ಪರಿವರ್ತನ ಕ್ರಿಯೆಯಿಂದಾಗಿ ಈ ಸಂಸ್ಕೃತಿ ಮುಂಚೂಣಿಸಿ ಬಂದದ್ದನ್ನೂ ಕಾಣುತ್ತೇವೆ. ಅತ್ಯಂತ ಪ್ರಾಚೀನ ಸಂಸ್ಕೃತಿಯ ಹಾಗೂ ಮಧ್ಯಯುಗದ ಯುರೋಪ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇದನ್ನು ನಿಖರವಾಗಿ ಗಮನಿಸಬಹುದು. ಪುನರುಜ್ಜೀವನದ ಅವಧಿ ಹಾಗೂ ಜ್ಞಾನೋದಯದ ಯುಗದ ಸಾಧನೆಗಳ ಬಗೆಗಿನ ಒಂದು ಅಗಾಧ ಸಂಶ್ಲೇಷಣೆಯು ಈ ತಂತ್ರಜನ್ಯ ನಾಗರಿಕತೆಯ ಹೃದಯ ಸ್ಥಾನದಲ್ಲಿರುವ 'ಮೌಲ್ಯಗಳ ಮೂಲ ಬೀಜಕೇಂದ್ರವನ್ನು' ಹಾಗೂ ಅದರ ವ್ಯವಸ್ಥಾಕ್ರಮವನ್ನು ತೋರಿಸುತ್ತದೆ. ಇಂಥ ಉತ್ಕ್ರಾಂತಿಯ ತಾಯಿ ಬೇರಾಗಿಯೇ ಈ 'ತಂತ್ರಾನ್ವಿತ -ತಾಂತ್ರಿಕತೆ ' (Technogyn-Technology) ಯ ಪ್ರಗತಿಯನ್ನು ಕಾಣಬೇಕಾಗಿದೆ. ಒಂದು ಪೀಳಿಗೆಯ ಬದುಕಿನ ಅವಧಿಯಲ್ಲಿಯೇ ಜರುಗುವ ಈ ತೀವ್ರತಮ ಬದಲಾವಣೆಗಳು, ಭೌತಿಕವಲಯದ ವರ್ತುಲದಲ್ಲಿಯೇ ಬದುಕುತ್ತಿರುವ ಮನುಷ್ಯನ ಜೀವನದ ಗತಿವಿಧಾನದಲ್ಲಿಯೂ ಅಷ್ಟೇ ಅಗಾಧವಾದ ಬದಲಾವಣೆಗೆ ದಾರಿ ಮಾಡಿದವು. ಸಾಮಾಜಿಕ ಸಂಪರ್ಕಗಳು, ವೈಯಕ್ತಿಕ ಸಂಬಂಧಗಳು, ಅಂತರ್ ಸಂಬಂಧಗಳು ಮತ್ತು ಸಾಮಾಜಿಕ ಸಂಸ್ಥೆಗಳಲ್ಲಾಗುತ್ತಿರುವ ಅಗಾಧ ಪಲ್ಲಟಗಳಲ್ಲಿ ಈ ಕ್ರಿಯೆಯನ್ನು ಸುಲಭವಾಗಿ ಗುರುತಿಸಬಹುದು. ಸಾಂಪ್ರದಾಯಿಕ ನಾಗರಿಕತೆಯ ಚೌಕಟ್ಟಿನಲ್ಲಿ ಸಮಾಜದ ರಕ್ಷಣಾತ್ಮಕವಾದ ಚಟುವಟಿಕೆಯ ರೂಪು ರೇಷೆಗಳು, ಮಾರ್ಗ ಮತ್ತು ಗುರಿಗಳು,

ದೀರ್ಘಾಂತರದಲ್ಲಿ ಮಾತ್ರವೇ ಬದಲಾವಣೆಯ ಪರಿವರ್ತನೆ ಹೊಂದುತ್ತಿದ್ದು ಅದು ಕೆಲವೊಮ್ಮೆ ಶತಮಾನಗಳಷ್ಟು ದೀರ್ಘದ ಅವಧಿಯನ್ನು ತೆಗೆದುಕೊಳ್ಳುತ್ತಿದ್ದುದನ್ನು ಗಮನಿಸುತ್ತೇವೆ. ಆದರೆ ಈ ತಂತ್ರಜನ್ಯ ನಾಗರಿಕತೆಯ ಗತಿವಾದವು ಸಾಂಪ್ರದಾಯಿಕ ನಾಗರಿಕತೆಯ ಜೊತೆ ಅತ್ಯಂತ ತೀವ್ರತರದ ತಾರತಮ್ಯತೆಯನ್ನು ಮೂಡಿಸತೊಡಗಿದೆ.

ಹೀಗಾಗಿ ವಿಶಿಷ್ಟವಾದ ಹಾಗೂ ಅಗಾಧವಾದ ಅರ್ಥ ಹೊಂದಿರುವ ತಂತ್ರಜನ್ಯ ಅಭಿವೃದ್ಧಿಯ ನವೀನ ಮೌಲ್ಯದ ಗತಿಯಿಂದಾಗಿ, ಇಂದಿನ ಜಗತ್ತಿನಲ್ಲಿ ಮನುಷ್ಯನ ಬಗೆಗೆ ಅದರಲ್ಲೂ ಅವನ ಸ್ಥಾನದ ಬಗೆಗೇ ಒಂದು ವಿಶೇಷ ಅರ್ಥದೊಡನೆ ನೋಡಬೇಕಾದ ಅವಶ್ಯಕತೆಯನ್ನು ರೂಪಿಸಿದೆ.

ಭೂಮಿಯ ಮೇಲೆ ಬುದ್ಧಿವಂತ ಜೀವಿಯೆಂದು ಪರಿಗಣಿಸಿಕೊಂಡ ಮನುಷ್ಯ ಇಂದು ಪ್ರಕೃತಿಯನ್ನು ವಿರೋಧಿಸುವುದರ ಜೊತೆಜೊತೆಗೆ ತನ್ನ ಇಚ್ಛೆಯಂತೆಯೆ ಪ್ರಕೃತಿಯೂ ಪರಿವರ್ತನೆ ಹೊಂದಲೇಬೇಕು ಎಂದು ತನ್ನ ವಶದಲ್ಲಿ ಇಟ್ಟುಕೊಳ್ಳಲು ಹೊರಟನು. ಮನುಷ್ಯನ ಈ ತೆರನ ಮನೋಭೂಮಿಕೆಯಲ್ಲಿ ಪ್ರತಿಯೊಂದು ಪರಿವರ್ತನೆಯಾಗಲಿ ಅಥವಾ ಅದರ ಪ್ರಕ್ರಿಯೆಯಾಗಲಿ ಎಲ್ಲವೂ ತನ್ನನ್ನು ಓಲೈಸಲೆಂದೇ ಇರಬೇಕೆಂದು ವ್ಯವಸ್ಥಿತವಾಗಿ ರೂಪಿಸಿಕೊಂಡ ಬೆಳವಣಿಗೆಯ ಹಂತವನ್ನು ನಿಚ್ಚಳವಾಗಿ ಗುರುತಿಸಬಹುದು. ಅದರಲ್ಲೂ ತಂತ್ರಜನ್ಯ ನಾಗರಿಕತೆಯ ಹಂತದಲ್ಲಿ ಅಂತಹ ಸ್ವ-ಉಪಯೋಗ ಪರಿವರ್ತನೆಯು ತುಂಬಾ ಅಭಿವೃದ್ಧಿಯಾದ್ದನ್ನು ಕಾಣುತ್ತೇವೆ. ಇಂತಹ ಸಂಗತಿಗಳನ್ನು ಈಗಲೂ ಅಸ್ತಿತ್ವದಲ್ಲಿರುವ ಸಾಂಪ್ರದಾಯಿಕ ನಾಗರಿಕತೆಗಳಲ್ಲಿ ಕಾಣಲೂ ಸಾಧ್ಯವಿಲ್ಲವೆನ್ನುವುದು ಅಷ್ಟೇ ಪ್ರಾಮುಖ್ಯ ಪಡೆದ ಸಂಗತಿಯಾಗುತ್ತದೆ. ಪುರಾತನ ಚೀನಿ ಸಂಸ್ಕೃತಿಯ ‘Wu-Wei’ ತತ್ವದಲ್ಲಿ ನಮೂದಿಸಿದಂತೆ ಒಂದು ವಿಶಿಷ್ಟವಾದ ಹಾಗೂ ವಿಭಿನ್ನವಾದ ನಂಬಿಕೆಗಳನ್ನು ಪ್ರದರ್ಶಿಸುವುದನ್ನು ಗಮನಿಸುತ್ತೇವೆ. ವಿಶ್ವದ ಸಂವೇದನಾಶೀಲ ತರಂಗಗಳನ್ನು ಒಂದು ಸಹಜ ಲಯಬದ್ಧ ಕ್ರಿಯೆಗೆ ಪುನರ್ಜೋಡಣೆ ಮಾಡುತ್ತಲೇ ಸಾಗುವ ಅತ್ಯಂತ ಸೂಕ್ಷ್ಮ ಹೂಗೂ ನಿಗದಿತವಾದ ಚಟುವಟಿಕೆಗಳ ಮೂಲಕವೇ ಈ ತತ್ವವು ಘೋಷಿಸಲ್ಪಟ್ಟಿರುವುದನ್ನು ಗುರುತಿಸಬಹುದು. ( ಉಪನಿಷತ್ತುಗಳೂ ಸಹಿತ ಇದನ್ನೇ ಸಾರುತ್ತಿವೆ.) ಚೀನಾದ ಪ್ರಾಚೀನ ದೃಷ್ಟಾಂತ ಕಥೆಗಳಲ್ಲಿ ಒಂದಾದ ‘ಜಾಣ ಮನುಷ್ಯ’ ದಲ್ಲಿ ಬೆಳೆಯ ಬೆಳವಣಿಗೆಯನ್ನು ಅತ್ಯಂತ ಶೀಘ್ರಗೊಳಿಸಲು ಯೋಚಿಸುತ್ತಾ, ಆ ಮನುಷ್ಯ ಗಿಡ ತೆನೆಯಿಂದ ಎಲ್ಲ ಬೀಜವನ್ನು ನೆಲದ ಮೇಲೆ ಉದುರಿಸುತ್ತಾ, ಮೊಳಕೆಯೊಡೆಯುತ್ತದೆ ಎಂದು ಕಾಯುತ್ತಾ ಕುಳಿತನಂತೆ. ಈ Wu-Wei ತತ್ವದಲ್ಲಿ, ನಿಯಮಗಳನ್ನು ಉಲ್ಲಂಘಿಸುವುದರಿಂದಾಗುವ ಅಭಿವೃದ್ಧಿಯ ಚಿತ್ರಣದ ವಿವರಗಳಿವೆ.



ಈ ‘Wu-Wei’ ತತ್ವವು ಪ್ರಾಕೃತಿಕ ಹಾಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಕ್ರಿಯಾಶೀಲ ಮಧ್ಯಸ್ಥಿಕೆಯನ್ನು ವಹಿಸುತ್ತ, ಪರಿವರ್ತನಾ ಚಟುವಟಿಕೆಗಳ ವಿಚಾರದ ಪರ್ಯಾಯವೊಂದನ್ನು ರೂಪಿಸುತ್ತದೆ. ಜೋಸೆಫ್ ನೀಡ್‌ಹ್ಯಾಮ್ ಪ್ರಕಾರ, ಈ ‘ವೂ-ಯಿ’ ತತ್ವವು ಯಾವುದೇ ಒಂದು ನಿಗದಿತ ಉದ್ದೇಶಕ್ಕಾಗಿ ಮಾತ್ರವೇ ಉತ್ಪಾದಿಸುವುದನ್ನು ಮತ್ತು ಉತ್ಪಾದನಾ ಕ್ರಿಯೆಯನ್ನು ಅದೂ ಪ್ರಭುತ್ವದ ಒತ್ತಾಯದಲ್ಲಿ ನಡೆಯುವುದನ್ನು ಒಪ್ಪುವದಿಲ್ಲ. ಜೊತೆಗೆ ಮನುಷ್ಯ ಕೇವಲ ‘ತನ್ನ ರಕ್ಷಣೆ’ಗಾಗಿ ಕೈಕೊಳ್ಳುವ ಕಾರ್ಯವನ್ನೂ ಮನ್ನಿಸುವುದಿಲ್ಲ. ಹಾಗೆ ನೋಡಿದರೆ ಸಾಂಪ್ರದಾಯಿಕ ಸಂಸ್ಕೃತಿಗಳಾವುವೂ, ಪ್ರಕೃತಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮನುಷ್ಯ ಶಕ್ತಿಯ ಕಡೆಗೆ ಸೃಷ್ಟಿಯನ್ನು ತಿರುಗಿಸುವುದರ ಕುರಿತು ಗುರಿ ಹೊಂದಿರಲಿಲ್ಲ. ಹೊಂದಿಲ್ಲ. ಅದಕ್ಕೆ ವಿರುದ್ಧವಾಗಿ ಈ ತಂತ್ರಜನ್ಯ ಸಂಸ್ಕೃತಿಯು ಸಂಪೂರ್ಣ ವಿಭಿನ್ನ ವಾದ ನೀತಿಯಾಗಿಯೇ ಮೇಲುಗೈ ಪಡೆದಿದೆ. ಜೊತೆಗೆ ಸಾಮಾಜಿಕ ತಾಂತ್ರಿಕ ಸಂಬಂಧ ದ ವಸ್ತುಗಳನ್ನು, ವಿಷಯಗಳನ್ನು ಸಹಿತ ತನ್ನ ಕಕ್ಷೆಯಲ್ಲಿ ಹಿಡದಿಟ್ಟುಕೊಂಡಿದೆ.

ತಂತ್ರಜನ್ಯ ಸಂಸ್ಕೃತಿಯ ಮೂಲ ಮೌಲ್ಯಗಳ ಗುಣವಿಶೇಷಕರಣದ ಹೊತ್ತಿನಲ್ಲಿ, ಮತ್ತೂ ಒಂದು ವಿಶೇಷ ವಿಭಾಗದ ಮೂಲಕ, ಅದನ್ನು ಅದರದೇ ಆದ ಒಂದು ವೈಯಕ್ತಿಕ ಮಟ್ಟಕ್ಕೆ ಒಯ್ಯುವ ಭಾವನೆಯನ್ನು ಪೋಷಿಸಲಾಯಿತು. ಈ ಭಾವನೆಯಲ್ಲಿ ಪ್ರಕೃತಿಯನ್ನು ಒಂದು ಚೈತನ್ಯರಹಿತ (Non-organic) ವಿಶ್ವವೆಂದು ಪರಿಗಣಿಸಿ, ಮಾನವನ ದೈನಂದಿನ ಚಟುವಟಿಕೆಗಳಿಗೆ ಸದಾ ಮೂಲದ್ರವ್ಯಗಳನ್ನು ವ್ಯವಸ್ಥಿತವಾಗಿ, ನಿರಂತರವಾಗಿ ಒದಗಿಸುವ ಒಂದು ನಿಗದಿತವಾದ ಸಂಪನ್ಮೂಲ ನೆಲೆಯೆಂದೇ ಭಾವಿಸಲಾಯಿತು. ಇಂಥ ಸಂಪನ್ಮೂಲಗಳನ್ನೂ ಅಕ್ಷಯವೆಂದೇ ಊಹಿಸುತ್ತ ನಿರಂತರವಾಗಿ ಇವುಗಳ ಬಳಕೆಯ ಪ್ರಮಾಣ ಹೆಚ್ಚುತ್ತಲೇ ಇರುವಂತೆ ನೋಡಿಕೊಳ್ಳ ಲಾಯಿತು. ಆದರೆ ಪರಂಪರಾಗತ ಸಂಸ್ಕೃತಿಯ ಭಾವನೆಯ ನೆಲೆಯಲ್ಲಿ ಈ ಪ್ರಕೃತಿಯನ್ನು ಒಂದು ಜೈವಿಕ ಘಟಕವೆಂದು ಪರಿಗಣಿಸಿ, ಆರಾಧಿಸಿ, ಮಾನವನ ಅಗಣಿತದ ಬೇಡಿಕೆಯ ಪೂರೈಕೆಯಲ್ಲಿ, ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ ಈ ಪ್ರಕೃತಿಯನ್ನು ಬಳಸಬೇಕೆಂಬ ನೀತಿಯೇ ಮುಂದುವರೆಯಿತು.

ನಂತರದ ಹಂತದಲ್ಲಿ ವ್ಯಕ್ತಿಯ ಸಾರ್ವಭೌಮಿಕ, ಮಾನಸಿಕ ಪಾತಳಿಯ ಪರಮಾಧಿಕಾರ ಹಾಗೂ ಕರ್ತೃತ್ವ ಮೌಲ್ಯದ ಹಿನ್ನಲೆಯಲ್ಲಿ ಗಮನಿಸಿದರೆ, ಸಾಂಪ್ರದಾಯಿಕ ನಾಗರಿಕತೆ ಹಾಗೂ ಸಂಸ್ಕೃತಿಗಳಲ್ಲಿ ಮನುಷ್ಯನನ್ನು ಒಂದು ವ್ಯವಸ್ಥೀಕೃತವಾದ ಕುಟುಂಬ, ವಂಶ, ಪಂಗಡ, ವರ್ಗಸಂಬಂಧಗಳಲ್ಲಿ (ಇಲ್ಲಿ ಜನ್ಮಜಾತದಿಂದಾಗಿ ಬರುವ ಜಾತಿ ಬರುವುದಿಲ್ಲ) ಸಾಮೂಹಿಕ ಹೊಣೆಗಾರಿಕೆಯ

ಬಿಗಿಬಂಧದಲ್ಲಿ ಗುರುತಿಸಲಾಗುತ್ತದೆ. ಆದರೆ ತಂತ್ರಜನ್ಯ ಸಂಸ್ಕೃತಿಯ ವ್ಯಾಪ್ತಿಯಲ್ಲಿ ಮನುಷ್ಯ ಸರ್ವತಂತ್ರಸ್ವತಂತ್ರ ವ್ಯಕ್ತಿತ್ವದ ಆದರ್ಶದಲ್ಲಿಯೇ ಪರಿಗಣಿಸಲ್ಪಡುತ್ತಾನೆ. ಜೊತೆಗೆ ಅದನ್ನೇ ಸ್ವಾಯತ್ತಾಧಿಕಾರದ ವ್ಯಕ್ತಿತ್ವ ವಿಶೇಷವೆಂದು ಕಲ್ಪಿಸಿಕೊಂಡು ಉಳಿದ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಪ್ರವೇಶಿಸಿ, ಅಲ್ಲಿಯೂ 'ತಮ್ಮ ಸಮಾನತೆಯ' ಹಕ್ಕನ್ನು ಪ್ರತಿಪಾದಿಸುವುದರ ಕಡೆಗೇ ಲಕ್ಷ್ಯ ಕೇಂದ್ರೀಕೃತವಾಯಿತು. ಇಂಥ ವ್ಯಕ್ತಿಗತ ಸ್ವಾತಂತ್ರ್ಯದ ಪ್ರಾಮುಖ್ಯತೆ ಹಾಗೂ ಮಾನವಹಕ್ಕುಗಳಿಗಾಗಿ ಹೋರಾಟಗಳು (!?) ಸಾಂಪ್ರದಾಯಿಕ ಸಂಸ್ಕೃತಿಯ ಅರಿವಿಗೇ ಬಾರದ ವಿಷಯಗಳಾಗಿದ್ದವು.

ತಂತ್ರಜನ್ಯ ಸಂಸ್ಕೃತಿಯ ಪ್ರಧಾನಗುಣಗಳಲ್ಲಿ ಅತ್ಯಂತ ವಿಶೇಷವಾಗಿ ಗಮನಿಸುವ ಹಾಗೂ ಪ್ರಾಮುಖ್ಯ ಸ್ಥಾನಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿರುವ ಒಂದು ಸಂಗತಿಯೆಂದರೆ – ಇಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯ ಮಹತ್ವದ ಬಗೆಗಿನ ಒತ್ತು. ಇಂಥ ಒತ್ತನ್ನು ಸಾಂಪ್ರದಾಯಿಕ ಸಂಸ್ಕೃತಿಗಳಲ್ಲಿ ನಾವು ಕಾಣುವುದಿಲ್ಲ. ಈ ಸಂದರ್ಭಕ್ಕೆಂದೇ ಬರೆದಂತಿರುವ ಚೀನಾದೇಶದ ಜಾಣ್ನುಡಿಯೊಂದು ಹೀಗಿದೆ, ''ಬದಲಾವಣೆಗೊಳ್ಳುತ್ತಿರುವ ಅವಧಿಯಲ್ಲಿ ಬದುಕುವುದು ಅತ್ಯಂತ ಕಠಿಣತಮವಾಗಲಿದೆ. ಸಂಸ್ಕೃತಿಯ ಪರಿವರ್ತನೆ ಹಾಗೂ ಅಭಿವೃದ್ಧಿಗಳೇ ಇದರ ಆಂತರಿಕ ಮೌಲ್ಯಗಳಾಗುತ್ತವೆ. ಒಂದು ಬೈಸಿಕಲ್ಲಿನ ಗುರುತ್ವ ಹಾಗೂ ಅದರ ಸ್ಥಿರತೆ ಯಾವಾಗಲೂ ಆ ಬೈಸಿಕಲ್‌ನ ಚಲನೆಯನ್ನು ಅವಲಂಬಿಸಿದೆ. ಚಲನೆ ನಿಂತಿತೆಂದರೆ ಅದು ಬಿದ್ದು ಹೋಗುತ್ತದೆ.'' ಹೀಗಾಗಿ ನವೀನತೆಯ ಅನುಷ್ಠಾನವೇ ಪ್ರಮುಖ ಮೌಲ್ಯವಾಗಿ ಪರಿಗಣಿಸಲ್ಪಡುತ್ತಿರುವ ತಂತ್ರಜನ್ಯ ಸಂಸ್ಕೃತಿಯ ಈ ನಿಲುವು ಪಾರಂಪರಿಕ ಸಂಸ್ಕೃತಿಗಳಲ್ಲಿ ಮಾತ್ರ ಪರಂಪರೆಯ ಪರಿಕಲ್ಪನೆಯಲ್ಲಿಯೇ ಪರಿಶೋಧಿಸಲ್ಪಡುತ್ತಾ ಯಾವಾಗಲೂ ಅಂತರ್ಗತವಾಗಿಯೇ ಇರುತ್ತದೆ.

ಈ ರೀತಿಯ ರೂಪಪರಿವರ್ತನೆಯ ಚಟುವಟಿಕೆಯ ಯಶಸ್ಸು ಒಂದು ಗುಣಾತ್ಮಕ ಫಲಿತಾಂಶದೆಡೆಗೆ, ಮಾನವನ ಕಾರ್ಯಕ್ಷೇತ್ರ ಹಾಗೂ ಸಾಮಾಜಿಕ ಅಭಿವೃದ್ಧಿಗಳೂ ಸದಾ ಮುಂಚೂಣಿಯಲ್ಲಿರುವಂತೆ ತಂತ್ರಜನ್ಯ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಪರಿಗಣಿಸುವಂತಾಯಿತು. ಈ ತಂತ್ರಜನ್ಯ ಸಂಸ್ಕೃತಿಯ ಹಿನ್ನೆಲೆಯೂ ಸಹಿತ ವಿಶ್ವದ ಭೌತಿಕವಲಯದಲ್ಲಿ ಅಡಗಿರುವ ನಿಯಾಮಕ ಶಕ್ತಿಯ ಮೂಲಕವೇ ಎಂದೂ ತೋರಿಸಲಾಯಿತು. ಇಂಥ ನಂಬಿಕೆಗಳು ವಿಜ್ಞಾನದ ಮೂಲ ಮೌಲ್ಯದ ಜೊತೆ ಸಾವಯವ ಸಂಪರ್ಕ ಹೊಂದಿಕೊಂಡು ಅದರ ನಿಯಮಗಳ ಬಗೆಗಿನ ಪರಿಜ್ಞಾನವನ್ನು ದೊರಕಿಸಿಕೊಡುವಂತೆ ಎತ್ತಿ ಹಿಡಿಯಲಾಯಿತು. ಹೀಗಾಗಿ ಇಂಥ ಸಂಸ್ಕೃತಿಯ ಪದ್ಧತಿಯಲ್ಲಿ ವೈಜ್ಞಾನಿಕ ತರ್ಕಪಾರಮ್ಯತೆಯೇ ಪ್ರಬಲವಾಗಿ



ಪ್ರತಿಪಾದಿಸುವಂತಾಗಿ, ಜ್ಞಾನದ ಮತ್ತು ಶೋಧನೆಗಳ ಬಗೆಗಿನ ಪ್ರಭಾವಗಳ ಕ್ರಿಯಾತ್ಮಕತೆಗಳು ಗೌಣವಾಗುವಂತಾಯಿತು.

ಕೊನೆಯದಾಗಿ, ಆದರೆ, ತಂತ್ರಜನ್ಯ ಸಂಸ್ಕೃತಿಯಲ್ಲಿ ಅಷ್ಟೇ ವಿಶೇಷವಾಗಿ ಚರ್ಚೆಯಾಗುತ್ತಿರುವುದೆಂದರೆ – ಅಧಿಕಾರ ಮತ್ತು ಬಲ. ಇಲ್ಲಿ ಅಧಿಕಾರವೆಂದರೆ ಮನುಷ್ಯ ಮನುಷ್ಯನ ಮೇಲೆಯೇ ಚಲಾಯಿಸುವ ಕ್ರಿಯೆಯಷ್ಟೇ ಅಲ್ಲ, ಜೊತೆಗೆ ಪ್ರಾಕೃತಿಕ ಸ್ಥಿತಿಯ ಮೇಲೆ ಅಧಿಕಾರ ಸ್ಥಾಪಿಸಹೊರಟಿರುವುದು ಕೂಡ. ಈ ರೀತಿ ಅಧಿಕಾರ ಸ್ಥಾಪಿಸಿದ ಪ್ರಾಕೃತಿಕ ಸ್ಥಿತಿಯ ಮೇಲೆಯೇ ತನ್ನ ಹಕ್ಕು ಹಾಗೂ ಪ್ರಭಾವವನ್ನು ಪ್ರತಿಪಾದಿಸುವುದರತ್ತ ಬೆಳೆವಣಿಗೆಯಾಯಿತು. ಇದಕ್ಕಾಗಿ ಸಾಮಾಜಿಕ - ವಾಸ್ತವಿಕ ವ್ಯವಸ್ಥೆಯನ್ನೂ ದುರುಪಯೋಗಪಡಿಸಿಕೊಳ್ಳಲಾಗಿರುವದನ್ನು ನಮೂದಿಸಲೇ ಬೇಕಾಗುತ್ತದೆ. ಇವುಗಳ ಹಿನ್ನೆಲೆಯಲ್ಲಿ ತಾಂತ್ರಿಕತೆಯನ್ನು ಯುಕ್ತಿಯಿಂದ ನಿರ್ವಹಿಸುವ ಕೈಚಳಕಗಳೂ ಮುಖ್ಯ ವಿಷಯಗಳಾಗಿ ಪರಿವರ್ತನಗೊಂಡವು.

ಇಂಥ ಮೌಲ್ಯದ ಗುಣವಿಶೇಷದ ವ್ಯವಸ್ಥೆಯಲ್ಲಿ, ತಂತ್ರಜನ್ಯ ಸಂಸ್ಕೃತಿಯು ತನ್ನ ನಿರಂಕುಶಾಧಿಕಾರದಲ್ಲಿ ಸರ್ವಸ್ವವನ್ನೂ ನಿಯಂತ್ರಿಸಹೊರಟಿದೆ. ಈ ವಾಹಿನಿಯೇ ತಂತ್ರಜನ್ಯ ಸಂಸ್ಕೃತಿಯ ವಿಶೇಷ ವಂಶವಾಹಿಯೆಂದು (Genome) ಪರಿಗಣಿಸಲ್ಪಟ್ಟು, ಅದರದೇ ವ್ಯವಸ್ಥೆಯ ಸಾಂಸ್ಕೃತಿಕ ಹಾಗೂ ಅನುವಂಶಿಕ ನಿಯಮದ ರೀತ್ಯಾ ತನ್ನನ್ನು ತಾನು ಪುನರುತ್ಪಾದನೆಗೊಳಿಸಿಕೊಂಡು ಅಭಿವೃದ್ಧಿಯಾಗುವ ಕ್ರಿಯೆಯನ್ನು ಕಾಣುತ್ತೇವೆ.

ತಂತ್ರಜನ್ಯೋತ್ಪನ್ನ ವರ್ಗಗಳು ಅಸ್ತಿತ್ವಕ್ಕೆ ಬಂದಕ್ಷಣದಿಂದಲೇ ಸಾಂಪ್ರದಾಯಿಕ ಸಂಸ್ಕೃತಿಗಳನ್ನು ವ್ಯತ್ಯಸ್ತಗೊಳ್ಳುವಂತೆ ಪುಸಲಾಯಿಸತೊಡಗಿದವು. ಇಂಥ ಬದಲಾವಣೆಗಳನ್ನು ರಕ್ಷಣಾ ಉದ್ಯೋಗಗಳ ಸೃಷ್ಟಿಯಲ್ಲಿ (ಮಿಲಿಟರಿ ಹುದ್ದೆಗಳಲ್ಲಿ), ವಸಾಹತೀಕರಣಗಳಲ್ಲಿ ಹಾಗೂ ಪ್ರಾಮುಖ್ಯವಾಗಿ ತಂತ್ರಜನ್ಯ ನಾಗರಿಕತೆಯ ಒತ್ತಡದೊಂದಿಗೆ ಸಾಂಪ್ರದಾಯಿಕ ಸಂಸ್ಕೃತಿಗಳು ಅಳವಡಿಸಿಕೊಂಡ ನವೀಕರಣದ ಪ್ರಕ್ರಿಯೆಯಲ್ಲಿ ಕಾಣುತ್ತೇವೆ. ಮೆಯ್‌ಜಿಯ ಸುಧಾರಣಾ (Meiji's Reformation) ನೀತಿಯ ನಂತರದಲ್ಲಿ ಜಪಾನು ಸಹಿತ ತಂತ್ರಜನ್ಯ ಅಭಿವೃದ್ಧಿಯತ್ತ ತನ್ನ ಗತಿ ಬದಲಿಸಿತು. ರಶಿಯಾವೂ ಸಹಿತ ಇದೇ ಹಾದಿಯಲ್ಲಿ ನಡೆದು, ಪಾಶ್ಯಾತ್ಯ ಅನುಭವಗಳ ಕಸಿಯೊಡನೆ, ನವೀಕರಣದ ಪ್ರಕ್ರಿಯಾ ಹಂತದಲ್ಲಿ ತೊಡಗಿತು.

ಹೀಗಾಗಿ ತಂತ್ರಜನ್ಯಾಧಾರಿತ ಅಭಿವೃದ್ಧಿಯ ಸಮಾಜದಲ್ಲಿ, ಸಾಂಪ್ರದಾಯಿಕ ರಂಗದ ಸಹಜ ಅಭಿವೃದ್ಧಿಯನ್ನು ಹಾಗೂ ವೈವಿಧ್ಯತೆಯನ್ನು ಉಚ್ಚಾಟಿಸಿ, ಏಕರೂಪತೆಯನ್ನು ತಂದಿರಿಸಿತು. ವಿಜ್ಞಾನದಲ್ಲಿ, ಶೈಕ್ಷಣಿಕ ರಂಗದಲ್ಲಿ ಈ ತಾಂತ್ರಿಕ ಬೆಳವಣಿಗೆ ಹಾಗೂ ಅಭಿವೃದ್ಧಿಯಾಗುತ್ತಿರುವ ಮಾರುಕಟ್ಟೆಗಳಿಂದಾಗಿ ಒಂದು ನವೀನ ವಿಚಾರ ನೀತಿ

ಹಾಗೂ ಬದುಕಿನ ರೀತಿಯನ್ನೇ ರೂಪಿಸುವಂತೆ, ಸಾಂಪ್ರದಾಯಿಕ ಸಂಸ್ಕೃತಿಗಳನ್ನು ಪರಿವರ್ತನೆಗೊಳಿಸತೊಡಗಿತು. ನಾವಿಂದು ಜಾಗತೀಕರಣವೆಂದು ಕರೆಯುತ್ತಿರುವುದು, ಈ ತಂತ್ರಜನ್ಯ ನಾಗರಿಕತೆಯ ಅಭಿವೃದ್ಧಿಯಾದ ಫಲಿತಾಂಶವೇ ವಿನಾ ಬೇರೆಯಲ್ಲ. ಇದು ಜಗತ್ತಿನ ವಿವಿಧ ಭಾಗಗಳಲ್ಲಿನ ವ್ಯವಸ್ಥೆಯನ್ನು 'ತಂತ್ರಾನ್ವಿತ -ತಾಂತ್ರಿಕ ವಿಸ್ತರಣೆ' ಯ (Techic-Technological Expansion ) ಮೂಲಕ ಛೇದಿಸುತ್ತಾ ಜೊತೆಗೆ ನವೀನತೆಯ ಯುಗವನ್ನೇ – ಪರ್ವಗಳನ್ನೇ ಸೃಷ್ಟಿಸುತ್ತಾ ಹೋಗಿ ಸಾಂಪ್ರದಾಯಿಕ ಸಂಸ್ಕೃತಿಯಲ್ಲೂ ಈ ತಂತ್ರಜನ್ಯ ಅಭಿವೃದ್ಧಿಯನ್ನು ಒಪ್ಪಿಕೊಳ್ಳುವಂತೆ ಮಾಡತೊಡಗಿದವು.

ತಂತ್ರಜನ್ಯ ನಾಗರಿಕತೆಯಿಂದಾಗಿ ಮಾನವಕುಲಕ್ಕೆ ಹಲವಾರು ಸಾಧನೆಗಳೂ ಮೇಲ್ನೋಟಕ್ಕೆ ಕಂಡು ಬಂದವು. ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿ, ಆರ್ಥಿಕ ಸಬಲತೆಗಳು ಬದುಕಿನಲ್ಲಿ ನವೀನತೆಯನ್ನು ಮೂಡಿಸಿದವು. ಜನರಲ್ಲಿ 'ಕೊಳ್ಳುಬಾಕ ಸಂಸ್ಕೃತಿ' ಎಂದು ಗುರುತಿಸುವಷ್ಟರ ಮಟ್ಟಿಗೆ ಬದಲಾವಣೆ ತಂದಿತು. ಉತ್ತಮ ವೈದ್ಯಕೀಯ ಸೌಲಭ್ಯದಿಂದಾಗಿ ಹೆಚ್ಚಿದ ಆಯುಃಪ್ರಮಾಣವೂ ಏರಿಕೆಯತ್ತ ಸಾಗುವಂತೆ ನೋಡಿಕೊಳ್ಳಲಾಯಿತು. ಈ ಸಂಸ್ಕೃತಿಗೆ ಹೊಂದಿಕೊಂಡ ಜಗತ್ತಿನ ಬಹುತೇಕ ಜನತೆ ಇದರ ಮೂಲಕವೇ ತಮ್ಮ ಭದ್ರ ಭವಿಷ್ಯಕ್ಕಾಗಿ ಈ ತೆರನ ಅಭಿವೃದ್ಧಿಯನ್ನೇ ಬಯಸುವಂತಾಯಿತು. ಕೇವಲ ಅರ್ಧಶತಕದ ಹಿಂದೆ ಕೆಲವೇ ಕೆಲವು ಜನರು, ಈ ತೆರನ ತಂತ್ರಜನ್ಯ ನಾಗರಿಕತೆಯು ಜಾಗತಿಕ ಬಿಕ್ಕಟ್ಟನ್ನು ಸೃಷ್ಟಿ ಮಾಡುವುದು ಎಂಬ ತರ್ಕವನ್ನು ಮಂಡಿಸಿ, ಈ ಬಿಕ್ಕಟ್ಟೇ ಪ್ರತಿಯೊರ್ವನೂ ಅನಿವಾರ್ಯವಾಗಿ ಒಪ್ಪಿಕೊಂಡು ನಿಭಾಯಿಸಲೇಬೇಕಾದ ಕರ್ತವ್ಯದ ಜಾಲದಲ್ಲಿ ಸಿಲುಕಿಸಿ ಕ್ರಮೇಣ 'ಸ್ವಯಂ-ನಾಶ' ವಾಗುವ ಪತನದ ಹಾದಿಯತ್ತ ಒಯ್ಯುತ್ತದೆ ಎಂದೂ ತಿಳಿಸಿದ್ದರು. ಪರಿಸರದ ಅಲ್ಲೋಲ ಕಲ್ಲೋಲಗಳು, ಪುರಾತತ್ವ ಶಾಸ್ತ್ರದ ಅಧ್ಯಯನದ ಅವಧಿಯಲ್ಲಿನ ಬಿಕ್ಕಟ್ಟುಗಳು, ಅಧಿಕಗೊಳ್ಳತೊಡಗಿದ ಸಹವಿಯೋಗ (Alienation) ಹಾಗೂ ಅಸ್ತಿತ್ವ ಕಳೆದುಕೊಳ್ಳುವ ಸಮೂಹಗಳು, ಜೊತೆಗೆ ನವನವೀನ ಶೋಧನೆಗಳ ಜಾಲದಿಂದಾಗಿ ಇಡೀ ಮನುಜಕುಲವೇ ನಿರ್ನಾಮವಾಗುವ ಹಂತಗಳೆಲ್ಲವೂ ಈ ತಂತ್ರಜನ್ಯ ಅಭಿವೃದ್ಧಿಯ ಉಪ-ಉತ್ಪನ್ನಗಳಾಗಿರುವುದನ್ನು ಕಾಣುತ್ತಿದ್ದೇವೆ. ಇಂಥ ತಂತ್ರಜನ್ಯ ಸಂಸ್ಕೃತಿಯ ಮೌಲ್ಯ ವ್ಯವಸ್ಥೆಯ ತಳಹದಿಯನ್ನು ಬದಲಿಸದೇ ಈ ಎಲ್ಲ ಬಿಕ್ಕಟ್ಟುಗಳಿಂದ ಮುಕ್ತರಾಗಲು ಸಾಧ್ಯವೇ? -- ಎಂಬುದು ಈಗ ಎಲ್ಲರೂ ಎದುರಿಸುತ್ತಿರುವ ಜ್ವಲಂತ ಸಮಸ್ಯೆಯಾಗಿದೆ.

ಈ ತೆರನಾದ ಮೌಲ್ಯ ನಿರ್ಧಾರದ ವ್ಯವಸ್ಥೆಯನ್ನು ಬದಲಿಸಬೇಕಾದ್ದು ಹಾಗೂ



ಜಾಗತಿಕ ಬಿಕ್ಕಟ್ಟಿನಿಂದ ಮುಕ್ತರಾಗಬೇಕಾದುದು ಎಲ್ಲರ ಬಯಕೆಯಾಗಿದೆ. ಅದಕ್ಕಾಗಿ ಮಾನವ ಸಮುದಾಯದ ಚಟುವಟಿಕೆಯ ಗುರಿ ಹಾಗೂ ನೈತಿಕ ತತ್ವಗಳ ಅನುಷ್ಠಾನದಲ್ಲಿ ಬದಲಾವಣೆ ತರುವ ಮೂಲಕ ಬಿಕ್ಕಟ್ಟಿನ ನಿವಾರಣೆಯನ್ನು ಸಾಧಿಸಬಹುದಾಗಿದೆ.

ಈಗಾಗಲೇ ಕೈಕೊಳ್ಳಲಾಗಿರುವ ಸಮಸಾಮಯಿಕ ತಾತ್ವಿಕ-ಸಾಮಾಜಿಕ ಚಿಂತನೆಗಳು, ತನಿಖೆಗಳು, ನಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳುವಂತೆ ಪ್ರೇರೇಪಿಸುತ್ತಲೇ ಪ್ರಕೃತಿಯ ಬಗೆಗೆ ಗಂಭೀರ ಚಿಂತನವನ್ನು ನಡೆಯಿಸುವಂತೆಯೂ ಹಾಗೂ ಮನುಜಕುಲದ ಅಸ್ತಿತ್ವದ ಬಗೆಗೆ ಯೋಚಿಸುವಂತೆಯೂ ಮಾಡಿವೆ; ಪರಿಸರ ಸಂರಕ್ಷಣದ ಜೊತೆಯಲ್ಲಿಯೇ ಮನುಷ್ಯನ ಬದುಕು ಈ ಭೂಗ್ರಹದಲ್ಲಿ ಇರಬೇಕು ಎಂದು ಸಾರಿಹೇಳುತ್ತವೆ. ಹಿಂದೆ ರೋಮನ್ ಕ್ಲಬ್ಬುಗಳಲ್ಲಿ ಕೂಡಾ ಇದೇ ತೆರನಾದ ವಿಚಾರಗಳ ಸಂಶೋಧನಾ ಕಾರ್ಯಗಳು ಅನುಷ್ಠಾನದಲ್ಲಿದ್ದುದನ್ನು ಇತಿಹಾಸ ಸಾರುತ್ತಿದೆ. 'ನೈಸರ್ಗಿಕ ನೈತಿಕತೆ ' ಯನ್ನು ಪ್ರತಿಪಾದಿಸುವ ಪ್ರಬಂಧವೊಂದರಲ್ಲಿ ಪ್ರಕೃತಿಯ ಮೇಲೆ ಮಾನವನ ನಿಯಂತ್ರಣವನ್ನು ನಿರಾಕರಿಸುವ ಹಾಗೂ ತೀವ್ರ ಸುಧಾರಣೆಯಿಂದಾಗಿ ಇಡೀ ಪ್ರಕೃತಿಯನ್ನು ತನ್ನ ವಶದಲ್ಲಿಟ್ಟುಕೊಳ್ಳುವ ಹವ್ಯಾಸವನ್ನು ನಿಲ್ಲಿಸುವ ಬಗೆಗೆ ಘೋಷಿತ ವರದಿಗಳಿವೆ. ಇಲ್ಲಿ ಇನ್ನೊಂದು ಪರ್ಯಾಯವನ್ನು ಗಮನಿಸಬಹುದು: ಸಸ್ಯಗಳಾಗಲಿ ಪ್ರಾಣಿಗಳಾಗಲಿ, ನಮಗಿಂತ ಕೆಳಸ್ತರದಲ್ಲಿವೆ ಎಂದು ಪರಿಗಣಿಸಲ್ಪಟ್ಟಾಗಲೂ ಸಹಿತ, ಇವು ಮನುಷ್ಯನ ಅಸ್ತಿತ್ವಕ್ಕಾಗಿಯೇ ಜನ್ಮ ತಾಳಿವೆ ಎಂಬ ಅಭಿಪ್ರಾಯವನ್ನು ತೊರೆಯಬೇಕು. ಇಂಥ ವಿಚಾರ ಇದೀಗ ಸಾರ್ವತ್ರಿಕವಾಗಿ ಬೆಂಬಲ ಗಳಿಸತೊಡಗಿದೆ. ನಿಷ್ಠುರವಾದ ವಿಧಾಯಕ ಕ್ರಮಗಳನ್ನು ಅಳವಡಿಸುವುದರ ಮೂಲಕ ತಿಳುವಳಿಕೆಯನ್ನು, ಜ್ಞಾನವನ್ನು ವಿಸ್ತರಿಸಿಕೊಳ್ಳುವಲ್ಲಿ ಹಲವಾರು ಪ್ರಯತ್ನಗಳು ನಡೆದಿವೆ. ಇದನ್ನು ಕೇವಲ 'ಮನುಷ್ಯ-ಪ್ರಕೃತಿಯ ಮಧ್ಯದ ನೈತಿಕ ಸಂಬಂಧದ ಜೊತೆ' ಎಂದು ಸೀಮಿತಗೊಳಿಸದೆ, ಪ್ರಕೃತಿಯನ್ನು ಸಚೇತನಗೊಳಿಸುವಲ್ಲಿ ಇರುವ ಮನುಷ್ಯ ಸಂಬಂಧಗಳ ಬಗೆಗೂ ಸಹಿತ ಎಂದು ಪರಿಗಣಿಸಿ ನಡೆಯಬೇಕಿದೆ.

ಇಲ್ಲಿಯೂ ಸಹಿತ ಮತ್ತೊಂದು ಸಮಸ್ಯೆ ಉದ್ಭವಿಸುತ್ತದೆ. ಈ ನವೀನ ವಿಚಾರಧಾರೆ ಜಗತ್ತಿನಾದ್ಯಂತವೂ ಸಾರ್ವತ್ರಿಕವಾಗುವಂತೆ ನೆಲೆಗೊಳಿಸಲು ಅವಶ್ಯವಾದ ವಿವರಣೆಗಳು-ಸಂಗತಿಗಳು ಯಾವುವು ಮತ್ತು ಇವುಗಳೊಡನೆ ಮನುಷ್ಯನು ಹೊಂದಿರಬೇಕಾದ ನೈತಿಕ ಸಾಮರಸ್ಯವನ್ನು ಜನತೆಯ ಮನಸ್ಸಿನಲ್ಲಿ ತುಂಬುವದು ಹೇಗೆ? ಎನ್ನುವುದೂ ಮುಖ್ಯವಾಗುತ್ತದೆ. ಇದಕ್ಕಾಗಿ ಜನತೆ ತಂತ್ರಜನ್ಯ ಸಂಸ್ಕೃತಿಗಿಂತ ಪಾರಂಪರಿಕ ವಿಶಿಷ್ಟತೆಯ ಕಡೆಗೆ ಚಿಂತನಪರ ಮನೋವೃತ್ತಿಯಿಂದ ನವೀನ

ದಿಗಂತವನ್ನು ಅರಸಬೇಕಾಗಿರುವುದು ಅವಶ್ಯವಾಗಿದೆ. ಇನ್ನೇನು ಘಟಿಸಲು ಸರ್ವಸಿದ್ಧತೆಯಲ್ಲಿರುವ ಹಾಗೂ ಅಪಾಯದ ಹಂತದಲ್ಲಿರುವ ಪ್ರಾಕೃತಿಕ ವಿನಾಶಗಳ ಬಗೆಗಿನ ಭಯದಿಂದಾಗಿ, ನವೀನ ನೈತಿಕತೆಯ ವಿಚಾರಗಳು ರೂಪಣೆಗೊಳ್ಳತೊಡಗಿವೆ. ಇಂಥ ವಿಚಾರಗಳನ್ನು ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ವಲಯದಿಂದ ದೂರವಿಡಬೇಕಾಗಿದೆ. ಹಾಗೆಂದುಕೊಂಡು, ಇಂತಹ ಸ್ಥಿತಿಯಲ್ಲಿ ಇವುಗಳನ್ನು ನಿಯಂತ್ರಿಸುವುದರ ಇಲ್ಲವೆ ಒಟ್ಟೊ ಈ ವಿಚಾರ ಬಿಡುವುದರ ಬಗೆಗೂ ಯೋಚಿಸಬೇಕಾಗುತ್ತದೆ. ಅನೇಕ ಜನ ಪ್ರಜ್ಞಾವಂತರು, ಸಂಶೋಧಕರು ಹಾಗೂ ವಿದ್ವಾಂಸರು ಪ್ರತಿಪಾದಿಸುತ್ತಿರುವ ಈ ನವೀನ ನೀತಿಗಳು ಅವರು ಪ್ರಕೃತಿಯೊಡನೆ ಬದಲಿಸಿಕೊಂಡ ಊಹೆಗಳಿಂದಲೇ ಕೂಡಿವೆ, ಜೊತೆಗೆ ಪೌರಾತ್ಯ ಸಂಪ್ರದಾಯದ ಸಂಸ್ಕೃತಿಗಳು ಸಂಪೂರ್ಣ ಇಂಗಿತದಿಂದಲೇ ಉಲ್ಲೇಖಿಸಿದ ಸಂಗತಿಯನ್ನು – ಅಂದರೆ, ಸಾಂಪ್ರದಾಯಿಕ ಸಮಾಜದ ಸ್ತರದಲ್ಲಿ ಅನುವಂಶಿಕವಾಗಿ ಬಂದಿರುವ 'ಪ್ರಕೃತಿಯ ಕಾಳಜಿಯನ್ನೂ ಸಹ' ಒಳಗೊಂಡಿವೆ.

ಇಷ್ಟೆಲ್ಲ ಇದ್ದಾಗ್ಯೂ ಪರಂಪರಾಗತ ಮಾದರಿಯ ಅಭಿವೃದ್ಧಿಯೇ ಪುನಃ ಬರುತ್ತದೆ ಎನ್ನುವುದು ಅಸಾಧ್ಯದ ಮಾತು. ಅದೂ ಅಲ್ಲದೆ ಜಗತ್ತಿನ ಅತ್ಯಂತ ಕಡಿಮೆ ಜನ ಇದರಿಂದ ಲಾಭ ಪಡೆದುಕೊಳ್ಳಲ್ಪಟ್ಟಿದ್ದಾರೆ. ಕಲೆ ಮತ್ತು ಸಾಹಿತ್ಯದ ಪುನರುಜ್ಜೀವನದ ಅವಧಿಯಲ್ಲಿ, ಅಂದರೆ ಈ ತಂತ್ರಜನ್ಯ ಸಂಸ್ಕೃತಿಯನ್ನು ಅನುಷ್ಠಾನಗೊಳಿಸಲು ಯೋಚಿಸುತ್ತಿದ್ದ ಹಂತದಲ್ಲಿ – ಭೂಮಂಡಲದಲ್ಲಿನ ೫೦೦ ಮಿಲಿಯ ಜನತೆ ಇದನ್ನು ಸ್ವೀಕರಿಸಲು ಸಿದ್ಧರಿದ್ದರು. ಆದರೆ ಇದೀಗ ವಿಶ್ವದ ೬ ಬಿಲಿಯನ್ ಜನ ಈ ತಂತ್ರಜನ್ಯ ಸಂಸ್ಕೃತಿಯ ವ್ಯಾಪ್ತಿಗೆ ಒಳಪಟ್ಟಿದ್ದಾರೆ. ಆಧುನಿಕ ತಂತ್ರಜ್ಞಾನವಿಲ್ಲದ ಅತ್ಯಂತ ಚಿಕ್ಕ ಸಮುದಾಯವೂ ಕೂಡಾ ಇಂದು ಭೂಮಂಡಲದಲ್ಲಿ ಅವಾಸ್ತವ ಸಂಗತಿ ಎನಿಸುವಂತಾಗಿದೆ. ಇದಕ್ಕಿಂತ ಮಿಗಿಲಾಗಿ ಪ್ರತಿಯೊಬ್ಬನೂ ಪ್ರಕೃತಿಗೆ ಋಣಿಯಾಗಿರುವ ಕ್ರಿಯೆಯಿಂದ ಉದಾಸೀನರಾಗದಂತೆ ಹಾಗೂ ಪ್ರತೀ ಹಂತದಲ್ಲೂ ತಲೆಮಾರಿಂದ ತಲೆಮಾರಿಗೆ ಅದನ್ನು ಪೂಜ್ಯ ಭಾವನೆಯಿಂದ ಕಾಣುವ ಕ್ರಿಯೆ, ಕ್ರಮೇಣ ಮನುಷ್ಯನ ಅಪರಿಮಿತ ಚಟುವಟಿಕೆಗಳ ಮೌಲ್ಯ ಪ್ರಾಧಾನ್ಯತೆ 'ಯಿಂದಾಗಿ, ಹಿಂದೆ ಬಿದ್ದದ್ದನ್ನು ಕಾಣುತ್ತೇವೆ. ಆದ್ದರಿಂದ ಸಾಂಪ್ರದಾಯಿಕ ಸಂಸ್ಕೃತಿಗಳ ಸಾಧ್ಯವಿದ್ದ ಅಂತಃಸತ್ವದ ಬಗೆಗೆ ಚರ್ಚಿಸುವಲ್ಲಿ, ಅದರದೇ ಆದ ವಿಶಿಷ್ಟ 'ಚಯನ-ಸಾಮರ್ಥ್ಯ' ದ (Selectivity)ಹಂತದಲ್ಲಿ ಗಮನಿಸಲೇಬೇಕಾಗುತ್ತದೆ. ಮನುಷ್ಯನು ಗೌರವಿಸುವ ಉನ್ನತ ಮೌಲ್ಯಗಳು, ಅವನ ಆತ್ಮಶಕ್ತಿ (Spirit) ಹಾಗೂ ಚಟುವಟಿಕೆಗಳು ಆಧುನಿಕ ನಾಗರಿಕತೆಯಂತೆ ಕಂಡು ಬಂದರೂ, ಅವುಗಳನ್ನು



ರಕ್ಷಿಸುವುದಷ್ಟೇ ಅಲ್ಲ, ಜೊತೆಗೆ ಔದ್ಯೋಗಿಕ ಕ್ರಾಂತಿಯ ನಂತರದ ಅಭಿವೃದ್ಧಿಯ ಪ್ರವೃತ್ತಿಯ ಜೊತೆಗೆ ಅಪೂರ್ವ ಆಯಾಮಗಳನ್ನು ಪಡೆದುದನ್ನು ಗುರುತಿಸಲೇಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ಬರಲಿರುವ ಭವಿಷ್ಯದಲ್ಲಿನ ಜನರ ಮನೋವೃತ್ತಿಯನ್ನು ಊಹಿಸಿದರೆ, ಪ್ರಕೃತಿಯ ಬಗೆಗಿನ ಚಿಂತನತತ್ಪರತೆ ಅಥವಾ ಅದನ್ನೇ ಸ್ವೀಕಾರ ಮಾಡಿಕೊಳ್ಳುವ ಕ್ರಿಯೆ ಕಡಿಮೆಯಾಗುವುದಿಲ್ಲ ಎಂದೇ ಕಾಣುವುದು. ಮನುಷ್ಯನು ಪ್ರಕೃತಿಯ ಪರಿವರ್ತನಾ ಕಾರ್ಯವನ್ನು ಮುಂದುವರಿಸುತ್ತಲೇ ಹೋಗುವನು. ಪ್ರಾಕೃತಿಕ ವಿಪತ್ತನ್ನು ನಿರ್ಮಿಸುವ ಪರಂಪರೆಯೇ ಮುಂದುವರಿದು, ಭೂಗ್ರಹದ ಅಸ್ತಿತ್ವಕ್ಕಾಗಿ ಅತ್ಯವಶ್ಯಕವಾಗಿ ಇರಲೇಬೇಕಾದ ಕಾನನದ ಪ್ರಮಾಣವನ್ನು ರಕ್ಷಿಸಲು ಸಾಧ್ಯವಾಗದೇ ಹೋಗುವುದು. (ಈಗಲೂ ಸಹಿತ ಜನಸಂಖ್ಯಾ ಸ್ಫೋಟದ ಹಿನ್ನೆಲೆಯಲ್ಲಿ ಕಾನನದ ರಕ್ಷಣೆ ಸಾಧ್ಯವಾಗುತ್ತಿಲ್ಲ.) ಹಾಗೂ ನೈಸರ್ಗಿಕ ಪರಿಸರಕ್ಕೆ ಉತ್ಸಂಸ್ಕರಣ (Acculturation) ದ ಪ್ರಮಾಣವನ್ನು ಅಧಿಕಗೊಳಿಸುತ್ತಾ ಹೋಗುವ ಕ್ರಿಯೆ ಉಳಿಯುವದು. (ಉತ್ಸಂಸ್ಕರಣವೆಂದರೆ – ಪರಸ್ಪರ ಸಂಪರ್ಕದ ಪರಿಣಾಮದಿಂದ ಒಂದು ಸಂಸ್ಕೃತಿ ಅಥವಾ ಸ್ಥಿತಿ ಇನ್ನೊಂದನ್ನು ಅನುಸರಿಸುತ್ತಾ ಹೋಗಿ, ತನ್ನ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಅಂತರ್ಗತ ಮಾಡಿಕೊಳ್ಳುವ ಕ್ರಿಯೆ). ಈ ಪ್ರಕ್ರಿಯಾ ಹಂತದಲ್ಲಿನ ಜೀವಮಂಡಲದ ಸ್ಥಿರತೆಯ ಸ್ಥಿತಿಗಾಗಿ ನವೀನವಾದ ಜೈವಿಕ ವಿಶ್ವೋತ್ಪನ್ನ ಕ್ರಮಾಂಕ (Biogeocenoses)ದ ಕೃತಕ ಸೃಷ್ಟಿಯಿಂದಾಗಿ ವೈವಿಧ್ಯತೆಯನ್ನು ಉಳಿಸಿಕೊಂಡು, ಸ್ಥಳೀಯ ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಿ ಜೋಪಾಸನೆ ಮಾಡುವಂತೆ ಪ್ರಯತ್ನಿಸುವುದೇ ಅತ್ಯಂತ ಪ್ರಾಮುಖ್ಯವಾದ ಹಂತವಾಗುತ್ತಿದೆ. ಮನುಷ್ಯ ವರ್ಗಕ್ಕೆ ಪೂರಕವಾಗಿ ಇರುವ ಈ ತೆರನಾದ ದೃಶ್ಯದಿಂದಾಗಿ, ನೈಸರ್ಗಿಕ ಪರಿಸರವೂ ಸಹಿತ, ಕೃತಕವಾಗಿ ನಿರ್ಮಿತವಾದ ವ್ಯವಸ್ಥೆಯ ಸಾದೃಶ್ಯವಾಗಿ ಪರಿಣಮಿಸುವುದು, ಇಲ್ಲವೇ ಪುನರ್ ರೂಪಿಸಲ್ಪಡುವದು. ಇಲ್ಲಿಯೂ ಸಹಿತ ಇದು ಮಾನವನ ಸಾರ್ಥಕ ಪೂರ್ಣ ಚಟುವಟಿಕೆಯ ಮೇಲೆಯೇ ಪೂರ್ತಿಯಾಗಿ ಅವಲಂಬಿತ ವಾಗಿರುತ್ತದೆ.

ಈ ರೀತಿಯಾದ ಕಾರ್ಯಕ್ರಮದ ಮೂಲಕ, ಇಡೀ ಪ್ರಕೃತಿಯ ಅಸ್ತಿತ್ವವನ್ನೇ ಬದಲಾಯಿಸಿ ಜೀವಮಂಡಲದ ಸಂರಕ್ಷಣೆಗೆ ನಿರ್ಧರಿತವಾದ ಎಲ್ಲ ಸಂಗತಿಗಳನ್ನು ರೂಪಿಸಿ ಪರಿವರ್ತಿಸುವ ಕ್ರಿಯೆ ಮನುಷ್ಯನದಾಗಬೇಕು. ಇಂಥದೇ ವಿಚಾರಗಳನ್ನು ರಷಿಯನ್ ವಿಶ್ವೋತ್ಪತ್ತಿವಾದ (cosmism) ತತ್ವಜ್ಞಾನಿಗಳಿಂದ ಸುವ್ಯವಸ್ಥಿತ ಸಂಬಂಧ ಜೋಡಣೆಗಳಲ್ಲಿ ಪ್ರತಿಪಾದಿಸಲ್ಪಟ್ಟ ತತ್ವಗಳಲ್ಲಿ ಕಾಣುತ್ತೇವೆ. ಇಂಥ ವಿಚಾರಗಳ ವಿಸ್ತೃತ ಅಧ್ಯಯನವನ್ನು ವೆರಂಡಸ್ಕಿಯ ಕೃತಿಗಳಲ್ಲಿ ಕಾಣಬಹುದು.

ರಶಿಯಾದ ಈ ವಿಶ್ವೋತ್ಪತ್ತಿವಾದದ ತತ್ತ್ವಶಾಸ್ತ್ರದಲ್ಲಿ ಎರಡು ಪ್ರಮುಖ ನೆಲೆಯ ನಿರ್ದೇಶಿತ ಸ್ಥಾನಗಳನ್ನು ಕಾಣುತ್ತೇವೆ. ಧಾರ್ಮಿಕ ನೆಲೆಯಲ್ಲಿ ಎಸ್. ಫ್ಯೊಡೋರೋವ್ ಹಾಗೂ ವೈಜ್ಞಾನಿಕ ನೆಲೆಯಲ್ಲಿ ಎನ್. ಖೋಲೋತ್ನಿಯಂಥವರನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತಿದೆ. ಈ ಎರಡೂ ಪ್ರಕಾರಗಳಲ್ಲಿ ವಿಮರ್ಶಾತ್ಮಕವಾಗಿ ಪ್ರತಿಪಾದಿಸುವ ವಿಷಯವೆಂದರೆ ಈ ಪಾಶ್ಚಾತ್ಯ ತಂತ್ರಜನ್ಯ ನಾಗರಿಕತೆಯಲ್ಲಿ ಅಂತರ್ಜಾತವಾಗಿರುವ ಆದರ್ಶ ಚಟುವಟಿಕೆಗಳ ಮತ್ತು ಅವು ಪ್ರಕೃತಿಯನ್ನು ಶೋಷಿಸುವ ಗುರಿಹೊಂದಿರುವ ಜೊತೆಜೊತೆಗೆ ಅತ್ಯಂತ ನಿಖರವಾಗಿ ಅದಕ್ಕೊಂದು ತಾಂತ್ರಿಕ ರೂಪರೇಷೆ ಕೊಡುವಂತೆ ರೂಪಿಸಿರುವುದು ಕಾಣುತ್ತಿದೆ. ಅದೇ ಕಾಲಕ್ಕೆ ರಷಿಯನ್ ತತ್ತ್ವಜ್ಞಾನಿಗಳೂ ಸಹಿತ ಸಂಭವಿಸಬಹುದಾದ ಪ್ರಳಯಾತ್ಮಕ ಸಂದರ್ಭಗಳ ಬಗೆಗೆ ತಿಳಿಸುತ್ತ ಈ ಘಟನೆಗಳು ಇಡೀ ಭೂಮಂಡಲದಲ್ಲಿಯೇ ಮತ್ತೆ ಮತ್ತೆ ಇಂತಹ ಪ್ರಳಯಕ್ಕೆ ನಾಂದಿಹಾಡಲಿವೆ ಎಂದು, ಅವು ಸಂಭವಿಸುವುದಕ್ಕಿಂತ ಮುಂಚೆಯೇ ಭವಿಷ್ಯ ನುಡಿದಿದ್ದರು. ಆದಾಗ್ಯೂ ರಷಿಯನ್ ವಿಶ್ವೋತ್ಪತ್ತಿವಾದದ ತತ್ತ್ವಜ್ಞಾನಿಗಳಿಂದ ಭವಿಷ್ಯಕ್ಕಾಗಿ ರೂಪಿಸಲ್ಪಟ್ಟ ಯಾವುದೇ ಯೋಜನೆಗಳೂ ಸಹಿತ ಈ ಪಾಶ್ಚಾತ್ಯ ಸಂಪ್ರದಾಯವನ್ನು ತಿರಸ್ಕರಿಸಲಿಲ್ಲ; ಅದರಲ್ಲಿ ಸೃಜನಶೀಲ ವ್ಯಕ್ತಿತ್ವದ ಮೌಲ್ಯ, ವೈಜ್ಞಾನಿಕ ತರ್ಕಸಮ್ಮತಿಗಳನ್ನು ಬಿಡಲಿಲ್ಲ. ಈ ತತ್ತ್ವಜ್ಞಾನಕ್ಕೆ ಆದರ್ಶವಾಗಿದ್ದ ವಿಷಯವೆಂದರೆ -- ಇಡೀ ಭೂಮಂಡಲ ಜೀವನದಲ್ಲಿನ ಮಾನವೀಯತೆಯ ಬಗೆಗೆ ಸಮಾನ ಮನೋಧರ್ಮ, ಮನುಷ್ಯ ಹಾಗೂ ಪ್ರಕೃತಿಯ ಜೈವಿಕ ಶರೀರ ರಚನಾ ನಿಯಂತ್ರಣವನ್ನು ಒಳಗೊಂಡಿತ್ತು. ವರ್ನೇಡಸ್ಕಿಯು ಪ್ರಚುರಪಡಿಸಿದ ಜೀವಮಂಡಳ ಹಾಗೂ Neosphere (ಮಾನವಜನಾಂಗದ 'ಸ್ಮರಣ ಹಾಗೂ ಪ್ರಜ್ಞಾ ಮಂಡಲ')ದ ಬಗೆಗೆ ಪ್ರಚುರಪಡಿಸಿದ ವಿಚಾರಗಳಿಗೂ ಹಾಗೂ ಆ.ರಾಯ್ ಕಾರ್ಡಿನ್ ಹೇಳಿದ ವಿಷಯಗಳಿಗೂ ಸಮಾನ ಲಕ್ಷಣಗಳಿವೆ. ಜೊತೆಗೆ ಪೌರ್ವಾತ್ಯ ಸಂಸ್ಕೃತಿಗಳು ವಿಶದಪಡಿಸಿದ ಸತ್ಯ ಮತ್ತು ನೀತಿಯ ಸಂಬಂಧ, ಸ್ವನಿಯಂತ್ರಣ ಹಾಗೂ ಸ್ವಯಂ ಶಿಕ್ಷಣ ಸಂಬಂಧಗಳು ಮಾನವನ ಕಾರ್ಯ ಚಟುವಟಿಕೆಗಳನ್ನು ಪ್ರಭಾವಶಾಲಿಯಾಗಿಸುವಲ್ಲಿನ ನಿಯಮಗಳೂ ಇಲ್ಲಿ ಪ್ರತಿಪಾದಿಸಲ್ಪಟ್ಟಿವೆ.

**ಪೌರ್ವಾತ್ಯ ಸಂಸ್ಕೃತಿ V/S ಆಧುನಿಕತಾವಾದ**

ಮೌಲ್ಯಗಳ ಪಾತಳಿಯ ವ್ಯವಸ್ಥೆಯಲ್ಲಿ ಹಾಗೂ ಜಗತ್ತಿನಾದ್ಯಂತದ (ಪಾಶ್ಚಾತ್ಯ) ತಂತ್ರಜನ್ಯ ಸಂಸ್ಕೃತಿಯ ಪ್ರತಿಮೆಗಳಲ್ಲಿ ಮನುಷ್ಯನನ್ನು ಸದಾ ಪ್ರಕೃತಿಯ ವಿರೋಧಿ



ಎಂದೇ ಪರಿಗಣಿಸಲಾಗಿದ್ದು, ಅದರ ದಿಗ್ದರ್ಶನವೂ ಸಹಿತ ಬಹಿರ್ಮುಖವಾಗಿಯೇ ನಿರ್ದೇಶನ ಮಾಡುತ್ತ ಈ ಮೂಲಕ ನಿಸರ್ಗವನ್ನು ರೂಪಾಂತರಗೊಳಿಸುತ್ತದೆ ಎಂದು ನಂಬಲಾಗಿದೆ. ಪೌರ್ವಾತ್ಯ ಸಂಪ್ರದಾಯದ ಮೌಲ್ಯ ನಿರ್ಣಯದ ಪ್ರಕಾರ ಮನುಷ್ಯನನ್ನು ಜೀವ ಶರೀರ ರಚನಾ (Organism) ಕ್ರಮದಲ್ಲಿಯೇ ಪ್ರತಿಷ್ಠಾಪಿಸುವುದರ ಜೊತೆಗೆ ಅದರಲ್ಲಿಯೇ ವಿಲೀನಗೊಳ್ಳುವ (Dissolve) ಹಾಗೆ ರೂಪಿಸಲಾಗಿದೆ. ಹೀಗಾಗಿ ಮನುಷ್ಯ ಚಟುವಟಿಕೆಗಳ ದಿಗ್ದೆಸೆ ಅಂತರ್ಯದಲ್ಲಿ ನಿರ್ದೇಶಿಸಲ್ಪಟ್ಟಂತೆ, ಸ್ವಯಂ ಶಿಕ್ಷಣ ಪಡೆವಂತೆ, ಸ್ವನಿಯಂತ್ರಣಕ್ಕೆ ಅಳವಡುವಂತೆ ಮತ್ತು ಸಂಪ್ರದಾಯದಲ್ಲಿ ತನ್ಮಯಗೊಳ್ಳುವಂತೆ ನಿರ್ದೇಶಿಸಲ್ಪಟ್ಟಿಲ್ಲ.

ಈ ಎರಡೂ ವೈರುಧ್ಯದ ಹೇಳಿಕೆಗಳ ಸಂಶ್ಲೇಷಣೆಯ ಮೂಲಕ ಇವೆರಡೂ ಗತಿನಿರ್ದೇಶನಗಳ ಪರಸ್ಪರಾವಲಂಬನೆ ಅಥವಾ ಸಹಸಂಬಂಧಗಳ ಬಗೆಗೆ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಪಾಶ್ಚಾತ್ಯ ಅಥವಾ ಪೌರ್ವಾತ್ಯ ಸಂಸ್ಕೃತಿಯ ಸಾಂಪ್ರದಾಯಿಕ ವಿಚಾರಗಳನ್ನು ಮತ್ತು ಸಾಧನೆಗಳನ್ನು ಸಂಶ್ಲೇಷಣಾ ಕ್ರಿಯೆಗೆ ಒಳಪಡಿಸುವುದರ ಮೂಲಕ ಮಾನವನ ಜೀವನಕ್ಕೆ ಹಾಗೂ ಸ್ವಾತಂತ್ರ್ಯಕ್ಕೆ ಒಂದು ನವೀನ ಅರ್ಥವನ್ನುಕಲ್ಪಸಬಹುದಾಗಿದೆ. ಇದೇ ವೈಜ್ಞಾನಿಕ ನಿರ್ವಾಣ. (ನಿರ್ವಾಣವೆಂದರೆ – ಜೀವನದಲ್ಲಿ ಅನುಸರಿಸಿಕೊಂಡು, ಹೋರಾಡಿ, ಬದುಕುವ ಆಶೋತ್ತರವನ್ನು ತೊರೆದು, ಸನ್ಯಾಸ ಸ್ವೀಕರಿಸಿ, ಸಮಾಧಿ ಸ್ಥಿತಿ ಮುಟ್ಟಿ, ಅಂತಿಮವಾಗಿ ಪಂಚಭೂತಗಳಲ್ಲಿ ಐಕ್ಯಗೊಳ್ಳುವ ಶಾಶ್ವದ ಸ್ಥಿತಿ.)

ಇಂಥ ಸಂಶ್ಲೇಷಣಾ ಕ್ರಿಯೆಯ ಪೂರ್ವಾವಶಕ್ಯ ಸಂಗತಿಗಳು ಜಾಗತಿಕ ಪರಿಸರದ ಹಾಗೂ ಮಾನವ ಶರೀರ ರಚನಾ ಶಾಸ್ತ್ರದ ಅಧ್ಯಯನದಲ್ಲಿ ಉದ್ಭವಿಸುವ ವಿನಾಶಗಳನ್ನಷ್ಟೇ ಅಲ್ಲ, ಭವಿಷ್ಯದಲ್ಲಿ ಮತ್ತೊಂದು ಎಪಾಕಲಿಪ್ಸ್ (ಬೈಬಲ್ಲಿನಲ್ಲಿ ನಮೂದಿಸಲಾಗಿರುವ ಸೇಂಟ್ ಜಾನ್ ಎನ್ನುವವನಿಗೆ ಆದ ಭವಿಷ್ಯದರ್ಶನದ ಗ್ರಂಥ) ಆಘಾತ ನೀಡುವ ಘಟನೆಗಳು, ನವೀನ ಮೌಲ್ಯಗಳು ಮತ್ತು ನೈತಿಕ ತತ್ತ್ವಗಳು ಮನುಷ್ಯನ ಚಟುವಟಿಕೆಗಳನ್ನು ವ್ಯವಸ್ಥೀಕೃತಗೊಳಿಸುವುದಕ್ಕೋಸ್ಕರವಾಗಿರುವ ತುಡಿತದ ಉದ್ದೀಪನೆಯ ಭಾವನೆಯೂ ಸಹಿತ, ವೇಗವಾಗಿ ಮುನ್ನುಗ್ಗುವ ಸಂಭವವಿರುತ್ತದೆ. ಇಂಥ ಪೂರ್ವಾವಶ್ಯಕ ಸಂಗತಿಗಳೇ ಇಂದಿನ ಸಂಪೂರ್ಣ ಆಧುನಿಕ ಸಂಸ್ಕೃತಿಯ ಅಂಶಗಳಲ್ಲಿಅಡಗಿರುವ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಅಭಿವೃದ್ಧಿಯ ವಿಚಾರಗಳಿಂದ ರೂಪಿಸಲ್ಪಡುತ್ತಿವೆ.

ಆದ್ದರಿಂದ, ಆಧುನಿಕ ಕಾಲದ ನೈತಿಕ ಮೌಲ್ಯದ ವಿಚಾರಗಳನ್ನು ಅವಗಣನೆ ಮಾಡದೇ, ಮತ್ತೊಂದು ನೂತನ ದಾರಿಯನ್ನು ಅರಸಬಹುದು. ತಂತ್ರಜನ್ಯ

ಉತ್ಕ್ರಾಂತಿಯ ಹಂತದಲ್ಲಿನ ತಾಂತ್ರಿಕ ಚಟುವಟಿಕೆಗಳ ರೂಪು-ರೇಷೆಗಳಲ್ಲಿ ಹಾಗೂ ವೈಜ್ಞಾನಿಕ ವೈಚಾರಿಕತೆಯಲ್ಲಿನ ಬದಲಾವಣೆಗಳ ಕಣ್ಣೆಲೆ (Perspective)ಯಲ್ಲಿ ನೋಡಬೇಕಾಗುವುದು. ಇಂಥ ರೂಪು ರೇಷೆಗಳು ಅತ್ಯಂತ 'ತೀವ್ರಗತಿಯಲ್ಲಿ (Radically) ಬದಲಾವಣೆಗೆ ತುಡಿಯುತ್ತಿರುವ ಸಂಕೀರ್ಣಮಯ ಸ್ವಯಂಭೂ' ತತ್ತ್ವದಿಂದ ನಿಯಂತ್ರಿಸಲ್ಪಟ್ಟೇ ಸಂಬಂಧ ರೂಪಿಸಿಕೊಳ್ಳುತ್ತವೆ. ಇದರ ಜ್ವಲಂತ ಉದಾಹರಣೆಯನ್ನು ''ಮನುಷ್ಯನನ್ನು ಒಂದು ವಿಶೇಷ ಪ್ರಮಾಣದ ಘಟಕಾವಯವ'' ಎಂದು ಪರಿಗಣಿಸಿಯೇ ನಡೆದಿರುವ ಮಾನವವಿಜ್ಞಾನ (ಅಂಥ್ರೋಪೋಲಾಜಿ)ದ ನವೀನ ಆಯಾಮದಲ್ಲಿ ಕಾಣುತ್ತೇವೆ. ಇಂಥದೇ ವ್ಯವಸ್ಥೆಯನ್ನು ಜಾಗತಿಕ ಪರಿಸರದ ಜೈವಕ ಜೀವ-ತಾಂತ್ರಿಕ ವಿಷಯದಲ್ಲಿ ಸಾಮಾಜಿಕ ವಿಷಯದಲ್ಲಿ ಹಾಗೂ ಆಧುನಿಕ ತಾಂತ್ರಿಕ ಯೋಜನೆಗಳನ್ನು ರೂಪಿಸುವಲ್ಲಿ ಕಾಣುತ್ತೇವೆ. ಇಂದು ಸಾಮಾಜಿಕ ಹಾಗೂ ಉತ್ಪಾದಕ ವಲಯದ ತಾಂತ್ರಿಕತೆಗಳು ಪುಂಖಾನುಪುಂಖವಾಗಿ 'ತಾಂತ್ರಿಕ ತಂತ್ರ' ವನ್ನು ತರುತ್ತಿರುವುದಷ್ಟೇ ಅಲ್ಲ, ಜೊತೆಗೆ 'ತಾಂತ್ರಿಕ - ತಂತ್ರದ ಮನುಷ್ಯ ವರ್ಗ' ವನ್ನು ನಿರ್ಮಿಸುತ್ತಿರುವ ವ್ಯವಸ್ಥೆಯಾಗುತ್ತ ಆಗುತ್ತಲೇ ಅಂತರ್ಯದ ಸಂಕೀರ್ಣತೆಯೊಡನೆಯೇ ಸುವ್ಯವಸ್ಥಿತವಾಗಿ ಅಭಿವೃದ್ಧಿಯಾಗುತ್ತಿರುವ ಹಂತಕ್ಕೆ ಬಂದಿದೆ.

ಇಂತಹ ಅಭಿವೃದ್ಧಿಯ ವಿಷಯ ಪ್ರತಿಪಾದನೆಯಲ್ಲಿ ಇರುವ ಚಟುವಟಿಕೆಗಳ ಕೌಶಲ್ಯಪೂರ್ಣ ನಿರ್ವಹಣೆಯೆ, ಪಾಶ್ಯಾತ್ಯ ನಾಗರಿಕತೆಗಳ ಸಂಸ್ಕೃತಿ ಹಾಗೂ ಪೌರ್ವಾತ್ಯ ಸಂಸ್ಕೃತಿಗಳ ಮಧ್ಯೆ ಅನಿರೀಕ್ಷಿತವಾದ ಸಂಬಂಧವನ್ನು ತರುತ್ತಿದೆ. ಇದೂ ಸಹಿತ ಅತ್ಯಂತ ಮಹತ್ವದ್ದಾಗಿದ್ದು, ಈ ಕ್ರಿಯೆಯನ್ನು ಸಂಸ್ಕೃತಿ - ಸಂಸ್ಕೃತಿಗಳ ಮಧ್ಯದ ಸಂಭಾಷಣೆಯೆಂದು ಪರಿಗಣಿಸಬೇಕಾಗಿದೆ. ಈ ಸಂಭಾಷಣೆಯು ಸಂಸ್ಕೃತಿ ಅಭಿವೃದ್ಧಿಗೆ ಅವಶ್ಯವಾದ ನವೀನ ಮೌಲ್ಯವನ್ನು ಮತ್ತು ಕುಶಲತೆಯನ್ನು ತರುತ್ತದೆ. ಯುರೋಪಿಯನ್ ಆಧುನಿಕತಾವಾದದ ಪ್ರಕಾರ, ಸಾಂಸ್ಕೃತಿಕ ಸಂಪ್ರದಾಯದಲ್ಲಿ ಬಹು ದೀರ್ಘಕಾಲದ ವರೆಗೆ ವಿಜ್ಞಾನ ಹಾಗೂ ತಾಂತ್ರಿಕತೆಗಳು, ವಿಜ್ಞಾನ ಹಾಗೂ ತಂತ್ರಜ್ಞಾನಗಳು ಪಾಶ್ಚಾತ್ಯ ಮೌಲ್ಯಗಳೊಡನೆ ಅನುರೂಪವಾಗಿಯೇ ರೂಪಿತಗೊಂಡಿದ್ದವು. ಆದರೆ ಇದೀಗ ಆಧುನಿಕ ವಿಜ್ಞಾನದ ಅತ್ಯಾಧುನಿಕ ತಾಂತ್ರಿಕ ಪ್ರಗತಿಗಳು, ಜಗತ್ತಿನಾದ್ಯಂತ ಪೌರ್ವಾತ್ಯ ಸಂಸ್ಕೃತಿಯ ವಿಚಾರಗಳೊಡನೆ ತಮ್ಮ ಶ್ರುತಿ ಮೇಳವಿಸತೊಡಗಿವೆ ಎಂದು ಕಂಡು ಬರುತ್ತಾ ಇದೆ (ವೆಬ್‌ಸೈಟ್‌ಗೆ ಗಣೇಶನನ್ನು ಪ್ರಥಮ ಪ್ರಾಶಸ್ತ್ಯವಿತ್ತು ಗೌರವಿಸಿದ್ದು). ಆದರೆ ಈ ಶ್ರುತಿ ಸಮ್ಮೇಳನವು ಪಾಶ್ಯಾತ್ಯ ಸಂಸ್ಕೃತಿಗೆ ಸಹವಿಯೋಗವಾಗುತ್ತಿರುವಂತೆ ಕಾಣುತ್ತಿದೆ. ಈ ವಿಷಯವನ್ನು ಈ ಕೆಳಕಂಡ ಮೂರು ಪ್ರಮುಖ ಸ್ತರಗಳಲ್ಲಿ ಕಾಣಬಹುದು:



ಪ್ರಥಮವಾಗಿ, ಪೌರ್ವಾತ್ಯ ಸಂಸ್ಕೃತಿಗಳಲ್ಲಿ ಅಳವಟ್ಟ ವಿಚಾರವೆಂದರೆ – ಮನುಷ್ಯನೂ ಸಹಿತ ತಲೆತಲಾಂತರದಿಂದ ಇಲ್ಲಿ ಬದುಕಿರುವ ಜೀವಿಯಾಗಿಯೇ ಪರಿಗಣಿಸಲ್ಪಟ್ಟಿದ್ದಾನೆ ವಿನಾ ಪದೇ ಪದೇ ಉತ್ತು-ಬಿತ್ತಿ ಪರಿಷ್ಕರಿಸುತ್ತಾ ಸಾಗಿದಂತೆ ರೂಪಪರಿವರ್ತನೆ ಹೊಂದುತ್ತಿರುವ ಅಜೈವಿಕ ವಸ್ತುವಿನಂತಲ್ಲ. ಕೆಲವೊಂದು ಹಂತದ ವರೆಗೆ ಆಧುನಿಕ ವಿಜ್ಞಾನವು ಈ ವಿಚಾರಗಳನ್ನು 'ದಂತಕತೆಯೊಂದರ ಹೆಜ್ಜೆಗುರುತು' ಹಾಗೂ ರಹಸ್ಯವಾದ (ಆಧ್ಯಾತ್ಮವಾದ) ವೆಂದು ಪರಿಗಣಿಸಿತ್ತು. ಇಡೀ ಭೂಮಂಡಲದ ಜೈವಿಕ ವ್ಯವಸ್ಥೆಯ ಸಮಕಾಲೀನ ಉದ್ದೇಶಗಳು ಸಂಪೂರ್ಣವಾಗಿ ವಿಶದೀಕರಿಸಲ್ಪಟ್ಟ ನಂತರದಲ್ಲಿ, ಮನುಷ್ಯನೂ ಒಂದು ಪ್ರಮುಖ ಜೈವಿಕ ಭಾಗವಾಗಿರುವ ಹಂತಕ್ಕೆ, ನಮ್ಮ ವಾತಾವರಣವನ್ನು ತುರ್ತಿನಲ್ಲಿ ಪುನರ್ ರೂಪಿಸಿಕೊಳ್ಳುವಂತೆ ಬದಲಾವಣೆ ಹೊಂದಿತು. ಆದರೆ ಈ ರೀತಿಯ ಬದಲಾವಣೆಯ ಚಿಂತನಗಳು ಪ್ರಾಚೀನ ಸಂಸ್ಕೃತಿಗಳಲ್ಲಿದ್ದ ಹಾಗೆ ''ಪ್ರಕೃತಿ ಒಂದು ಜೈವಿಕ ಸಮೃದ್ಧತೆಯ ತಾಣವಾಗಿದ್ದು, ಮನುಷ್ಯನ ವಿಚಾರಗಳಿಗೆ, ಕೃತಿಗಳಿಗೆ ಸದಾ ಸಹಸಂಬಂಧ ಹೊಂದಿಕೊಂಡೇ ಇರುತ್ತದೆ'' ಎನ್ನುವುದನ್ನು ರೂಪಿಸಿತು.

ಎರಡನೆಯದಾಗಿ, ಅಭಿವೃದ್ಧಿ ಪರವಾದ ವಿಷಯಗಳಲ್ಲಿ ಪ್ರತಿಪಾದಿತವಾಗುತ್ತಿರುವುದೆಂದರೆ – ಮಾನವಶಾಸ್ತ್ರದ ಆಯಾಮದ ಬೇಡಿಕೆಯೇ ವಿಶೇಷ ಕೌಶಲ್ಯಪೂರ್ಣ ಕ್ರಿಯೆ ಎಂದು ಪ್ರತಿನಿಧಿಸುತ್ತಾ ಬೆಳೆಯಿತು.

ಈ ವ್ಯವಸ್ಥೆಗಳು ಸಹಕ್ರಿಯಾತ್ಮಕ (Synergetic) ಪರಿಣಾಮಗಳು, ಅಂದರೆ – ಯಾವುದೇ ಒತ್ತಡ ಬಯಸದ ಸಹಕಾರಿ ಪರಿಣಾಮಗಳಾಗಿ, ಅತ್ಯಂತ ಪ್ರಮುಖ ಪಾತ್ರವನ್ನು ಅಂತರ್ಯದಲ್ಲಿ ಒಳಗೊಂಡ ಕ್ರಿಯೆಯಾಗಿ ವರ್ಗೀಕರಿಸಲ್ಪಟ್ಟಿದೆ. ಇದನ್ನು ವಿಭಾಗೀಕರಣ ಮಾಡುವಲ್ಲಿ, ಇಲ್ಲಿನ ಅತ್ಯಂತ ಸೂಕ್ಷ್ಮ ಪ್ರಭಾವವೂ, ಒಟ್ಟೂ ವ್ಯವಸ್ಥೆಯಲ್ಲಿ ತೀವ್ರ ಬದಲಾವಣೆಯನ್ನು ತಂದು ಉತ್ಕ್ರಾಂತಿಯ ನವೀನ ಸಾಧ್ಯತೆಗಳ ರಹದಾರಿಯನ್ನು ಹುಟ್ಟು ಹಾಕುತ್ತದೆ. ಈ ಹಂತದಲ್ಲಿ ಬಲವಂತದ, ಒತ್ತಡದ ಹಾಗೂ ಪಕ್ಷಪಾತದ ದೃಷ್ಟಿಕೋನದಿಂದಾಗಿ ಒಂದು ಕ್ರಿಯಾಶೀಲ ಪರಿವರ್ತನಾ ವಿಷಯವೂ ಕೂಡಾ ಅದರ ತೀವ್ರತೆಯ ಪರಿಣಾಮ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಒಂದು ವೇಳೆ ಬಾಹ್ಯ ಒತ್ತಡವನ್ನು ಇಲ್ಲಿ ಉಪಯೋಗಿಸಿದ್ದಾದರೆ, ಆಗ ಈ ವ್ಯವಸ್ಥೆಯಲ್ಲಿ ನವೀನ ಸೃಷ್ಟಿ ಸಂಪೂರ್ಣ ವಿಫಲವಾಗಿ ಬಿಡಬಹುದು. ಆದರೆ ಇಂತಹ ಕ್ಲಿಷ್ಟ ಅವಧಿಯಲ್ಲೂ ಮೊದಲಿದ್ದ ಸ್ಥಿತಿಯನ್ನೇ ಪುನರಾವರ್ತನೆಗೊಳಿಸುತ್ತಾ ಹೋಗುವ ರಚನಾ ವ್ಯವಸ್ಥೆಯನ್ನು ಖಾಯಂಗೊಳಿಸಬಹುದು. ಆದರೆ ಅಸ್ಥಿರತೆಯ ಸಂದರ್ಭದಲ್ಲಿ ವಿಭಾಗೀಕರಣ ಹಂತದಲ್ಲಿ, ಆಗಾಗ ಸಂಭವಿಸಬಹುದಾದ ಚಿಕ್ಕ-ಪುಟ್ಟ ಪ್ರಮಾಣದ

ಅಡೆತಡೆಗಳೆಲ್ಲವೂ ಹೊಸ ರೂಪು-ರೇಷೆಗಳ ಹಾಗೂ ಒಕ್ಕೂಟದ ಹಂತಗಳನ್ನು ಸೃಷ್ಟಿಸಲು ಶಕ್ತವಾಗುತ್ತವೆ. ಈ ಪ್ರಭಾವದ ಮಾರ್ಗವು, ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ ಅಹಿಂಸಾ-ತತ್ತ್ವದ ಕೌಶಲ್ಯವನ್ನು ವಿಶದೀಕರಿಸುವಂತೆ; ಹಾಗೂ 'Wu-Wei ' ತತ್ತ್ವದ ಕ್ರಿಯೆಗಳನ್ನು ಸಹಿತ ಜ್ಞಾಪಕಕ್ಕೆ ತರುತ್ತದೆ.

ಮೂರನೆಯದಾಗಿ, ಈ ರೀತಿಯ ಸಂಕೀರ್ಣ ವ್ಯವಸ್ಥೆಯಲ್ಲಿ ಮಾನವ-ವೈಜ್ಞಾನಿಕ ವಿಷಯದ ಆಯಾಮದಲ್ಲಿನ ಕಾರ್ಯಕುಶಲತೆಗಳು ನಿರ್ದೇಶಿಸಲ್ಪಟ್ಟು ಅಲ್ಲಿ ಹೊಸದೊಂದು ಅನುಕಲಿತ ಸತ್ಯ (Integrating Truth) ಹಾಗೂ ನೈತಿಕತೆಯನ್ನು, ಮೌಲ್ಯಧಾರಿತವಾದ ತೀವ್ರ ಚಟುವಟಿಕೆಗಳನ್ನು ಕಾಣಬಹುದು. ವೈಜ್ಞಾನಿಕ ಅರಿವು ಮತ್ತು ತಾಂತ್ರಿಕ ಚಟುವಟಿಕೆಗಳು ಇಂಥ ವ್ಯವಸ್ಥೆಯನ್ನು ಪೂರಕಮಾಡಿಕೊಂಡೇ ಶಾಖೆಗಳ ವಿಂಗಡಿಕರಣದ ವಿಕಾಸವಾದದ ವ್ಯವಸ್ಥೆಯ ರೋಹಿತ ಮಾಲೆಯ ವರ್ಣಗಳನ್ನು ಪ್ರದರ್ಶಿಸುತ್ತವೆ. ಇಲ್ಲಿ ಪ್ರತಿಫಲಿತವಾಗುವ ಅವಕಾಶಗಳ ಪೂರ್ವಕಲ್ಪನೆಯೂ ಅತ್ಯಂತ ಮುಖ್ಯವಾಗಿರುತ್ತದೆ. ಆದರೆ ಪ್ರತ್ಯಕ್ಷ ಪ್ರಭಾವವು, ಜ್ಞಾನದ ಉದ್ದೇಶ ಅಥವಾ ತಾಂತ್ರಿಕ ಬದಲಾವಣೆಯ ರೂಪದಲ್ಲಿ ಇದರ ಮೇಲೆ ನಿಯಂತ್ರಣವನ್ನು ತೋರುವುದರ ಜೊತೆಗೆ, ಲಭ್ಯವಿರುವ ಹಲವಾರು ಸಾಧ್ಯತೆಗಳಲ್ಲಿ ಅತ್ಯಾವಶ್ಯವಾಗಿರುವುದನ್ನು ಆಯ್ಕೆ ಮಾಡಿಕೊಳ್ಳುವ ಕ್ರಿಯೆಗೆ ಯಾವಾಗಲೂ ಮುಖಾಬಿಲೆಯಾಗಿಯೇ ಉಳಿಯುತ್ತದೆ. ಇಲ್ಲಿನ ಆಯ್ಕೆ ಕೇವಲ ಜ್ಞಾನದಿಂದಷ್ಟೇ ನಿರ್ಧರಿಸಲ್ಪಡುವುದಿಲ್ಲ. ನೈತಿಕ ತತ್ತ್ವಗಳ ಜೊತೆಗೆ ಮನುಷ್ಯಕುಲಕ್ಕೆ ಮಾರಕವಾಗುವ ಯಾವುದೇ ಪ್ರಯೋಗಶೀಲತೆಯನ್ನು ಸಂಪೂರ್ಣನಿಷೇಧ ಮಾಡುವ ಮೂಲಕ ನಿರ್ದೇಶಿಸಲ್ಪಡುತ್ತದೆ.

ಸಹಕಾರದೊಡನೆ ಏರ್ಪಡುವ ಸಂಶೋಧನೆಗಳು ಹಾಗೂ ತಾಂತ್ರಿಕ ಯೋಜನೆಗಳು ಸಾಮಾಜಿಕ ಪರಿಣತಿಯೊಡನೆ, ಮತ್ತು ನೈತಿಕ ಅಂಶಗಳನ್ನು ಮಹತ್ವದ್ದಾಗಿ ಪರಿಗಣಿಸಿಕೊಂಡು ಅನುಷ್ಠಾನಿಸುವಂತೆ ಇಂದು ರೂಪಿಸಲ್ಪಡ ಬೇಕಾಗಿದೆ. ಇಂಥ ಪ್ರಕ್ರಿಯೆಯು ಕ್ರಮೇಣ ನವನವೀನ ಕ್ರಾಂತಿಕಾರಕ ಬದಲಾವಣೆ ಯೊಡನೆ, ಈ ಪೂರ್ವದ ಸ್ಥಿತಿಯನ್ನು ಪರಿವರ್ತಿಸಿ, ಸತ್ಯ ಹಾಗೂ ನೈತಿಕತೆಯ ಮಧ್ಯದಲ್ಲಿ ವ್ಯವಸ್ಥಿತ ಸಂಪರ್ಕವನ್ನು ರೂಪಿಸುವಲ್ಲಿ ಮಾರ್ಗ ನಿರ್ಮಿಸುತ್ತದೆ.

ಸುದೀರ್ಘ ಅವಧಿಯಿಂದಲೂ ಪಾಶ್ಚಾತ್ಯ ಸಂಸ್ಕೃತಿಯ ಸಂಪ್ರದಾಯವೂ ಕೇವಲ 'ಪರಿಶುದ್ಧ ಜ್ಞಾನ' ದ ವೈಚಾರಿಕತೆಯ ಹಂತದಲ್ಲಿಯೇ ನಿಯಂತ್ರಿಸಲ್ಪಟ್ಟಿತ್ತು. ಇಲ್ಲಿ ನೈತಿಕ ವ್ಯವಸ್ಥೆ ಒಂದು ಬೇರಯದೇ ಆದ ಸಂಗತಿಯಾಗಿತ್ತು. ಅದಕ್ಕಿಂತ ಮಿಗಿಲಾಗಿ ನೈತಿಕತೆಯ ಹಿನ್ನೆಲೆಯಲ್ಲಿ ತಾರ್ಕಿಕ ನೆಲೆಗಟ್ಟೇ ಬುನಾದಿಯಾಗಿರಬೇಕು



ಎಂದೂ ಪರಿಗಣಿಸಲ್ಪಟ್ಟಿತ್ತು. ಗ್ರೀಕ್ ತತ್ತ್ವಜ್ಞಾನಿ ಸಾಕ್ರೆಟೀಸನಿಗೆ ಒಮ್ಮೆ ''ಜೀವನವನ್ನು ಹೇಗೆ ಉತ್ತಮವಾಗಿ ರೂಪಿಸಿಕೊಳ್ಳಬಹುದು ?'' ಎಂದು ಪ್ರಶ್ನೆ ಕೇಳಿದಾಗ, ಮೊದಲು ''ಉತ್ತಮವೆಂದರೇನು ?'' ಎಂದು ತಿಳಿದುಕೊಳ್ಳಬೇಕು ಎಂದು ಉತ್ತರಿಸಿದನು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ನೈಜ ಜ್ಞಾನವೆಂದರೆ ನೈತಿಕ ಭಾವನೆಗಳೊಂದಿಗೆ ರೂಪಿಸಲ್ಪಟ್ಟ ಅನುಭವದ ವ್ಯವಸ್ಥೆಯಾಗಿರುತ್ತದೆ.

ಇದೇ ಅವಧಿಯಲ್ಲಿ ಪೌರ್ವಾತ್ಯ ಸಂಸ್ಕೃತಿಯ ಸಂಪ್ರದಾಯದಲ್ಲಿ ಬೇರೆಯದೇ ಆದ ಗತಿವಿಧಾನವೊಂದು ಪರಿಗಣಿಸಲ್ಪಡುತ್ತಿತ್ತು . ಇಲ್ಲಿ ಸತ್ಯವನ್ನು ನೀತಿಯಿಂದ ಬೇರ್ಪಡಿಸಿಲ್ಲ (ಸತ್ಯವೇ ಧರ್ಮ). ಸತ್ಯದ ಸಾಕ್ಷಾತ್ಕಾರಕ್ಕಾಗಿ ನೈತಿಕ ನಿಷ್ಠೆಯ ಅನುಷ್ಠಾನ ಕಡ್ಡಾಯವಾಗಿತ್ತು. ಚೀನಾ ದೇಶದ ಚಿತ್ರ ಲಿಪಿ 'ತಾವೋ' (Tao) ದಲ್ಲೂ ಇದೇ ತೆರನಾದ ವಿಷಯ ಪ್ರತಿಪಾದಿಸಲ್ಪಟ್ಟಿದೆ. ನ್ಯಾಯ ನೀತಿ ಹಾಗೂ ಸತ್ಯವೇ ಜೀವನ ಸಾರವೆಂದು ರೂಪಿಸಲ್ಪಟ್ಟಿದೆ. ಈ ರಹಸ್ಯಲಿಪಿಯ ಬಗೆಗೆ ಚೀನಾ ದೇಶದ ತತ್ತ್ವಜ್ಞಾನಿ ಕನ್‌ಫ್ಯೂಸಿಯಸ್‌ನನ್ನು ಶಿಷ್ಯರು ಪ್ರಶ್ನಿಸಿದಾಗ, ಪ್ರತಿಯೊಬ್ಬ ಶಿಷ್ಯನಿಗೂ ಬೇರೆಬೇರೆ ಯದೇ ಅರ್ಥವಿವರಣೆಯನ್ನು ಕೊಟ್ಟನಂತೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಅನುಭವದ ಹಿನ್ನೆಲೆಯಲ್ಲಿ ನೈತಿಕತೆಯ ದರ್ಶನವನ್ನು ಹಾಗೂ ಸತ್ಯದ ಸಾಕ್ಷಾತ್ಕಾರವನ್ನು ಕಾಣಬೇಕಾಗುತ್ತದೆ.

ಆಧುನಿಕ ಪರಿಸ್ಥಿತಿಯಲ್ಲಿ ವೈಜ್ಞಾನಿಕ ಹಾಗೂ ತಾಂತ್ರಿಕ ಚಟುವಟಿಕೆಗಳನ್ನು ಒಂದು ನವೀನ ತರ್ಕಪಾರಮ್ಯತಾವಾದವು ನಿರ್ದೇಶಿಸುತ್ತಿರುವುದನ್ನು ಕಾಣತ್ತೇವೆ. ಸತ್ಯ ಮತ್ತು ನೈತಿಕತೆಗಳ ಜೋಡಣೆಗಳಿಗಾಗಿ ಪ್ರಾಚೀನ ಪೌರ್ವಾತ್ಯವಾದದ ಜೊತೆಗೆ ಮಾನವ ವಿಜ್ಞಾನದ ಆಯಾಮವನ್ನೂ ಸಹಸಂಬಂಧಿಯಾಗಿ ಪರಿಗಣಿಸುವ ಮೂಲಕ ನಿರ್ಮಾಣವಾಗುತ್ತಿರುವ, ಸಂಕೀರ್ಣ ಪ್ರಗತಿಯ ಹಂತದಲ್ಲಿ ಗುರುತಿಸಬಹುದು. ಹೀಗೆಂದು ಪಾಶ್ಚಾತ್ಯ ಸಂಸ್ಕೃತಿಗಳಲ್ಲಿ ಈ ತರ್ಕಪಾರಮ್ಯತೆಯು ಒಂದು ವಿಶಿಷ್ಟ ಹಂತವಾಗಿದ್ದು, ಕ್ರಮೇಣ ನಶಿಸುತ್ತಿರುವ ಸಂಕೇತವೆಂದು ಭಾವಿಸುವಂತಿಲ್ಲ. ಆದರೆ ಈಗಿನ ವೈಜ್ಞಾನಿಕ ತರ್ಕಪಾರಮ್ಯತಾವಾದ ಬದಲಾವಣೆ ಹೊಂದುತ್ತಿದೆ ಎನ್ನುವುದು ಮುಖ್ಯ ಸಂಗತಿಯಾಗಿದ್ದರೂ, ಇದನ್ನು ತ್ಯಜಿಸಲು ಸಾಧ್ಯವಿಲ್ಲದಂತೆ ಉಳಿದು, ವಿವಿಧ ಸಂಸ್ಕೃತಿಗಳ ಮಧ್ಯೆ ಪರಸ್ಪರ ತಿಳುವಳಿಕೆ ಹಾಗೂ ವಿನಿಮಯದ ಜೊತೆ ಸಂಪರ್ಕವನ್ನು ಸಾಧಿಸಿತು. ಈ ರೀತಿಯ ಸಂಪರ್ಕದಲ್ಲಿ ಪ್ರತಿಯೊಂದು ಸಂಸ್ಕೃತಿಯ ಮೂಲಭೂತ ನೈತಿಕ ಮೌಲ್ಯಗಳೇ ಹಾಗೂ ಅವುಗಳ ಪ್ರತಿಬಿಂಬಗಳೇ ಪ್ರಮುಖ ಪಾತ್ರವಹಿಸುತ್ತವೆ.

ಈ ರೀತಿಯ ಪರಿಶುದ್ಧ ತಿಳುವಳಿಕೆಗಳು ಎಲ್ಲ ಸಂಸ್ಕೃತಿಗಳ ಮಧ್ಯೆ ಒಂದು ಸಮಾನತೆ (Equality) ಯನ್ನು ಹಾಗೂ ಮುಕ್ತತೆಯ ಮೂಲಕ ಸಾಂಸ್ಕೃತಿಕ

ವಲಯಗಳ ಮಧ್ಯೆ ಸಂಪರ್ಕಸೇತುವನ್ನು ಏರ್ಪಡಿಸುತ್ತವೆ. ಈ ಅರ್ಥದಲ್ಲಿ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಆಂತರಿಕವಾಗಿ ಬೆಳೆದ ವೈಜ್ಞಾನಿಕ ತರ್ಕಪಾರಮ್ಯತೆಯ ವಿಶೇಷ ಮೌಲ್ಯದ ಉದ್ದೇಶವು ಈಗಲೂ ಪ್ರಮುಖ ಸ್ಥಾನದಲ್ಲಿದ್ದು ಜಗತ್ತಿನಾದ್ಯಂತ ರೂಪಗೊಳ್ಳುತ್ತಿರುವ (Orientation) ಪೌರ್ವಾತ್ಯ ವಿಚಾರಧಾರೆಯನ್ನು ಗುರುತಿಸುವಲ್ಲಿ ಸಹಕಾರಿಯಾಗಿದೆ. (ಸಮಕಾಲೀನ ಬೆಳವಣಿಗೆಯ ಹಂತದಲ್ಲಿ ಅರಿವಿಗೆ ಬಾರದ ನವೀಕರಣಗಳನ್ನು ಒಳಗೊಂಡಿದ್ದರೂ ಸಹಿತ ಈ ತರ್ಕಪಾರಮ್ಯತೆ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ).

ಪ್ರಚಲಿತದಲ್ಲಿ, ಸಾಂಪ್ರದಾಯಿಕ ಸಂಸ್ಕೃತಿಯ ವೈಚಾರಿಕ ವೈವಿಧ್ಯತೆಯನ್ನು ವಿರೋಧಿಸುವುದು ಒಂದು ಅಸಮಂಜಸ ಕಾರ್ಯವಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯು ನಿಜವಾಗಿಯೂ ಒಂದು ಅಭೂತಪೂರ್ವ ತಳಹದಿಯ ಮೇಲೆ ಉಳಿದ ಸಂಸ್ಕೃತಿಗಳ ಸಂಗಡ ವಿಚಾರ ವಿನಿಮಯದ ಸೃಷ್ಟಿ ಮಾಡುತ್ತಿದೆ ಎಂದು ಪರಿಗಣಿಸುವುದು ನವೀನ ಸಂಗತಿಯಾಗಿದೆ. ಜಾಗತಿಕ ಬಿಕ್ಕಟ್ಟಿನ ಮಧ್ಯದಲ್ಲಿಯೂ, ಬಿಕ್ಕಟ್ಟನ್ನು ಪರಿಹರಿಸಲು 'ಮಾನವೀಯತೆಯ ನೆಲೆ' ಅವಕಾಶ ಮಾಡಿ ಕೊಡುತ್ತದೆ. ಆದರೆ ಇದು ಪ್ರಜ್ಞಾ ಮಟ್ಟದ ಪರಿವರ್ತನೆಯೊಂದಿಗೆ ಹೊಸ ಮೌಲ್ಯಗಳ ವ್ಯವಸ್ಥೆಯನ್ನು ವಿಶದೀಕರಿಸುವ ಸಂಪೂರ್ಣ ಅವಧಿಯ ಕ್ರಿಯೆಯನ್ನು ಅವಲಂಬಿಸಿದೆ.

ಇವನ್ನೆಲ್ಲ ಒಪ್ಪಿಕೊಂಡು, ನಾಗರಿಕತೆಯ ಸುಸಂಬದ್ಧ ಬೆಳವಣಿಗೆಗಾಗಿ ಅನುಷ್ಠಾನಗೊಳಿಸುವಲ್ಲಿ ಕಷ್ಟವಿಲ್ಲ. ಮತ್ತೂ ಬೇರೆಯದೇ ಆದ ಪರಿಹಾರ ಮಾರ್ಗಗಳೂ ಇಲ್ಲಿ ದೊರಕಬಹುದು. ಆದರೆ ಇವು ಸಮುದಾಯಕ್ಕೆ ಪೂರಕವಾಗದೆ, ಮೇಲ್ನೋಟಕ್ಕೆ ವಿಪತ್ತುಗಳನ್ನು ಆಹ್ವಾನಿಸುವಂತೆ ತೋರುತ್ತಿವೆ. ಜಾಗತೀಕರಣದ ಹಂತಗಳು, ಬರಲಿರುವ ಭವಿಷ್ಯದಲ್ಲಿ ಈ ಸ್ಥಾನವನ್ನು ಆಕ್ರಮಿಸುವ ಸಂಭವವಿದೆ. ಹೀಗಾಗಿ ಸಂಸ್ಕೃತಿಗಳ ಮಧ್ಯೆ ಸಮಾನ ವಿನಿಮಯ ನಡೆಯದೇ, ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಮೌಲ್ಯಗಳು ಮತ್ತು ವಿಚಾರಗಳೇ ಏಕಮುಖವಾಗಿ ಪ್ರಭಾವ ಬೀರುವ ಹಂತ ಬಂದು 'ಕೊಳ್ಳುಬಾಕ ಸಂಸ್ಕೃತಿಯ' ವಲಯವನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಳ್ಳುತ್ತಿದೆ. ಅಭಿವೃದ್ಧಿ ದೇಶಗಳು ಅದರಲ್ಲೂ ಪಾಶ್ಚಾತ್ಯ ದೇಶಗಳಲ್ಲಿ ನೆಲ - ಜಲ - ಗಗನಗಳ ಮೇಲೂ ತಮ್ಮ ಆಧಿಪತ್ಯವನ್ನು ಗಟ್ಟಿಗೊಳಿಸುವುದರ ಜೊತೆಗೆ ಜಾಗತಿಕ ಮಾರುಕಟ್ಟೆಯ 'ಯಥಾ ಸ್ಥಿತಿ' ಯನ್ನು (status-quo) ಸಂರಕ್ಷಿಸಿಕೊಳ್ಳಲು ರಕ್ಷಣಾತ್ಮಕ ಧೋರಣೆಯನ್ನು ರೂಪಿಸುತ್ತಿವೆ. ಇಂಥ ತಂತ್ರಜನ್ಯ ಸಂಸ್ಕೃತಿಯೇ ಪ್ರಕೃತಿಯ ಶೋಷಣೆಯನ್ನು ತನ್ನ ಪ್ರಥಮ ಪ್ರಾಶಸ್ತ್ಯವಾಗಿಸಿಕೊಳ್ಳುತ್ತದೆ.

ಈ ಎಲ್ಲಾ ಸಂದರ್ಭಗಳ ಹಿನ್ನೆಲೆಯಲ್ಲಿ ಇಂದಿನ ಜಾಗತಿಕ ದೃಷ್ಟಿಕೋನವು,



ಜಗತ್ತಿನ ಆರ್ಥಿಕ ಮತ್ತು ರಾಜಕೀಯ ಶಕ್ತಿಗಳ ಹಸ್ತದಲ್ಲಿ ಸಿಲುಕಿ ಅಸ್ತವ್ಯಸ್ತಗೊಳ್ಳುತ್ತಿದೆ. ಇಡೀ ಭೂಮಂಡಲವನ್ನಾವರಿಸಿ ಆಧಿಪತ್ಯ ಸ್ಥಾಪಿಸಿರುವ ಹಂತದಲ್ಲಿ ಗ್ರಾಹಕವಾದದ (consumerism) ಸಂಸ್ಕೃತಿಯ ವಿಚಾರದ ಜನಸಮೂಹವು ಸಹಿತ ಪರಿಸರದ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ತಂತ್ರಜ್ಞಾನದ ವಲಯಗಳಲ್ಲಿ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಲೇ ಉಳಿಯಬೇಕಾಗಿದೆ.

ಶೀತಲ ಯುದ್ಧದ ಪರಿಸಮಾಪ್ತಿಯಾಗುತ್ತಿರುವ ಇಂದಿನ ಸಂದರ್ಭದಲ್ಲಿ, ಇಡೀ ಜಗತ್ತಿನ ನಾಗರಿಕತೆಯನ್ನು ರಕ್ಷಿಸುವ ಮಹತ್ವದ ಹೊಣೆಗಾರಿಕೆ ಅಭಿವೃದ್ಧಿಯ ಮುಂಚೂಣಿಯಲ್ಲಿರುವ ಪಾಶ್ಚಾತ್ಯ ರಾಷ್ಟ್ರಗಳ ಮೇಲಿದೆ. ಹೀಗಾಗಿ ಆ ರಾಷ್ಟ್ರಗಳಿಗೆ ದೊರೆತ ಸದ್ಯದ ವಿಜಯ ಇಡೀ ಮನುಜಕುಲವನ್ನೇ ನಾಶಮಾಡುವ ಹಂತಕ್ಕೆ ಪರಿವರ್ತನೆಗೊಳ್ಳದಿರಲೆಂದು ಎಲ್ಲರೂ ಆಶಿಸೋಣ.

(Philosophy and Social Action - (quarterly) Jan-June 2000 ಪತ್ರಿಕೆಯ ಸಂಪಾದಕರಿಂದ ಪರವಾನಿಗೆ ಪಡೆದು ಅನುವಾದಿಸಿದ ಲೇಖನ)

ಇತ್ತೀಚೆಗೆ ನಮ್ಮನ್ನಗಲಿದ

ಜಾನಪದ ಸಂಘಟಕ, ಶಿಕ್ಷಣ ತಜ್ಞ ಮತ್ತು ನೀನಾಸಮ್‌ನ ಹಿತೈಷಿ

**ಪ್ರೊ. ಕು.ಶಿ. ಹರಿದಾಸ ಭಟ್ಟ**

ಹಾಗೂ

ರಂಗಕರ್ಮಿ ಮತ್ತು ನೀನಾಸಮ್‌ರಂಗಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿ

**ಶ್ರೀ ಧ್ರುವರಾಜ ದೇಶಪಾಂಡೆ**

ಇವರಿಗೆ ನೀನಾಸಮ್ ಶ್ರದ್ಧಾಂಜಲಿ

# ಅಣ್ವಸ್ತ್ರೀಕರಣ, ಮಾನವಹಕ್ಕು ಮತ್ತು ನೈತಿಕತೆ

ಡಾ. ಅಮೂಲ್ಯ ಕೆ.ಎನ್. ರೆಡ್ಡಿ
ಅನು: ಮಾಧವ ಐತಾಳ

*ಲೇಖಕ ಡಾ. ಅಮೂಲ್ಯ ಕೆ.ಎನ್. ರೆಡ್ಡಿ ಅವರು ಇಂಟರ್ ನ್ಯಾಷನಲ್ ಎನರ್ಜಿ ಇನಿಶಿಯೇಟಿವ್‌ನ ಅಧ್ಯಕ್ಷರು. ಆನ್ವಯಿಕ ಭೌತರಸಾಯನ ಶಾಸ್ತ್ರದಲ್ಲಿ ಲಂಡನ್ ವಿ.ವಿ.ಯಿಂದ ಡಾಕ್ಟೋರೇಟ್ ಪಡೆದಿರುವ ಅವರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರೊಫೆಸರ್ ಆಗಿದ್ದರು. ಅಮೆರಿಕಾದ ಪ್ರಿನ್ಸ್‌ಟನ್ ಹಾಗೂ ಪೆನ್ಸಿಲ್ವೇನಿಯಾ ವಿ.ವಿ.ಯಲ್ಲೂ ಕೆಲಸ ಮಾಡಿರುವ ಅವರು ವಿಜ್ಞಾನ ಮತ್ತು ತಂತ್ರಜ್ಞಾನ, ಶಕ್ತಿ ಹಾಗೂ ಎಲೆಕ್ಟ್ರಾನಿಕ್ ರಸಾಯನ ಶಾಸ್ತ್ರದ ಬಗ್ಗೆ ನೂರಾರು ಪ್ರಬಂಧ ಮಂಡಿಸಿದ್ದಾರೆ. ಮಾನವ ಹಕ್ಕು, ನೈತಿಕತೆ ಹಾಗೂ ವೈಜ್ಞಾನಿಕ ಶ್ರೇಷ್ಠತೆಯ ಸಂಯೋಗವಾಗಿರುವ ಡಾ. ರೆಡ್ಡಿ ವೈಜ್ಞಾನಿಕ ಕ್ಷೇತ್ರದಲ್ಲಿ ಅಪರೂಪದವರು. ೨೦ನೇ ಜೆಪಿ ಸ್ಮಾ ರಕ ಉಪನ್ಯಾಸದ ಭಾಷಾಂತರ ಪ್ರಸ್ತುತ ಲೇಖನ.*

ಅಣ್ವಸ್ತ್ರಗಳು ಹೋರಾಡಲಾರದ ಮುಗ್ಧ ನಾಗರಿಕರನ್ನು ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ಬಾಧಿಸುತ್ತವೆ. ಅವನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಭೂಮಿಯ ಚರಿತ್ರೆಯಲ್ಲಿ ಸರಿಸಾಟಿಯಿಲ್ಲದ ಸಮೂಹನಾಶದ ಉಪಕರಣಗಳು ಅವು. ಅಣ್ವಸ್ತ್ರಗಳಿಗೆ ರಕ್ಷಣೆ, ಆರ್ಥಿಕ ಮತ್ತು ರಾಜಕೀಯ ಮುಖಗಳಿದ್ದರೂ, ಕಟ್ಟಕಡೆಯ ವಿಶ್ಲೇಷಣೆಯ ಪ್ರಕಾರ ಅವುಗಳದ್ದು ನೈತಿಕ ಪ್ರಶ್ನೆ. ಅದು ಸರಿ, ತಪ್ಪು, ಒಳ್ಳೆಯದು ಮತ್ತು ಕೆಟ್ಟದ್ದು ಹಾಗೂ ನೀತಿಯ ಪ್ರಶ್ನೆ.

ವಿಜ್ಞಾನಿಗಳಲ್ಲಿ ನೈತಿಕ ಪ್ರಶ್ನೆಗಳ ಕುರಿತು ರ್ಚಿಸುವುದು ಫ್ಯಾಷನ್ ಅಲ್ಲವಾದರೂ ಇತ್ತೀಚಿಗೆ ಈ ಕುರಿತಂತೆ ಆಸಕ್ತಿ ಹೆಚ್ಚುತ್ತಿದೆ ಎನ್ನುವ ಸುಳಿವು 'ಕರೆಂಟ್ ಸೈನ್ಸ್ ' ಪತ್ರಿಕೆಯಲ್ಲಿಕಾಣಬಹುದು. ಪೊಖರಾನ್ ಸ್ಫೋಟದ ನಂತರ ಅತೀ ಕಡಿಮೆ ಸಂಖ್ಯೆಯ ಭಾರತೀಯ ವಿಜ್ಞಾನಿಗಳು, ಅಣ್ವಸ್ತ್ರ ಪರೀಕ್ಷೆಯ ವಿರುದ್ಧ ದನಿ ಎತ್ತಿದರು. ಅವರಲ್ಲಿ ನಾನೂ ಒಬ್ಬ. ೧೯೯೯ರ ಸೆಪ್ಟೆಂಬರ್‌ನಲ್ಲಿ ಪೋಲ್ಯಾಂಡ್ ಭೇಟಿಯ ನಂತರ



ನನ್ನ ಈ ವಿರೋಧಿ ಮನೋಭಾವ ಇನ್ನಷ್ಟು ಗಟ್ಟಿಯಾಯಿತು. ವಿಶ್ವ ಶಕ್ತಿ ಕರ ಸಮಾವೇಶಕ್ಕೆ ಪೋಲ್ಯಾಂಡ್‌ಗೆ ಹೋಗಿದ್ದ ನಾನು, ಇಂದು ವಸ್ತು ಸಂಗ್ರಹಾಲಯಗಳಾಗಿ ಉಳಿದಿರುವ ಕುಖ್ಯಾತ ಆಶ್ವಿಜ್ ಮತ್ತು ಬಿರ್ಕೆನಾದ ನಾಜಿ ಹತ್ಯಾ ಕೇಂದ್ರಗಳಿಗೆ ಭೇಟಿಕೊಟ್ಟಿದ್ದೆ. ೨ನೇ ಮಹಾಯುದ್ಧದ ಸಮಯದಲ್ಲಿ ಸುಮಾರು ೧೫ ಲಕ್ಷಜನ ಯಹೂದಿಗಳು ಈ ಕೇಂದ್ರಗಳಲ್ಲಿ ಅನಿಲ ಕುಡಿದು ಉಸಿರುಕಟ್ಟಿ ಸತ್ತರು ಇಲ್ಲವೇ ಕೆಲಸಮಾಡಲಾರದಷ್ಟು ದುರ್ಬಲರಾಗಿ ಸತ್ತರು.

ಈ ಹತ್ಯಾಕೇಂದ್ರಗಳ ಭೇಟಿ ನನ್ನಲ್ಲಿ ಅನಿರೀಕ್ಷಿತ ಭಾವನೆಯನ್ನು ಹುಟ್ಟುಹಾಕಿತು. ೧೯೪೪ರ ನಂತರ ಇಲ್ಲಿ ಯಾವುದೇ ಜನವಸತಿ ಇಲ್ಲ. ಇಲ್ಲಿ ಮನುಷ್ಯರ ಹತ್ಯೆಯ ಪ್ರಮಾಣ ಎಷ್ಟು ಅಗಾಧವಾದದ್ದೆಂದರೆ, ಹತ್ಯೆಗೊಳಗಾದವರು ಬಳಸುತ್ತಿದ್ದ ಚಪ್ಪಲಿ, ಸೂಟ್‌ಕೇಸ್... ಒಂದೊಂದನ್ನೂ ಬೇರೆ ಬೇರೆ ಕೊಠಡಿಗಳಲ್ಲಿ ತುಂಬಿಟ್ಟಿದ್ದಾರೆ. ಆ ವಸ್ತುಗಳ ಅಗಾಧ ಸಂಖ್ಯೆ ನೋಡದರೆ ಅವು ಕಾರ್ಖಾನೆಗೆ ಒದಗಿಸುವ ಕಚ್ಚಾವಸ್ತುಗಳಂತೆ ಭಾಸವಾದವು. ಮನುಷ್ಯರ ತಲೆಕೂದಲು ತುಂಬಿರುವ ಕೊಠಡಿ ಕೂಡಾ ಕಚ್ಚಾವಸ್ತು ತುಂಬಿಟ್ಟಿರುವ ಕೊಠಡಿಯಂತೆ ಕಾಣಿಸಿತು. ಆಶ್ವಿಜ್‌ನ ಪ್ರಕರಣದಲ್ಲಿ ದರ್ಜಿಯ ಲೈನಿಂಗ್ ಬಟ್ಟೆಗಾಗಿ ಅದನ್ನು ಬಳಸಲಾಗುತ್ತಿತ್ತು.

ಆಶ್ವಿಜ್ ಅನ್ನು ನಂಬುವುದು ಅಸಾಧ್ಯವಾಗಿದ್ದರೆ, ಅದರಿಂದ ೩ ಕಿಮೀ ದೂರದ ಬಿರ್ಕೆನಾ ನನ್ನ ಕಲ್ಪನೆಗಳನ್ನೆಲ್ಲ ಬರಿದುಮಾಡಿಬಿಟ್ಟಿತು. ೧೭೫ ಹೆಕ್ಟೇರ್ ವಿಸ್ತಾರವುಳ್ಳ ಈ ಊರಿನ ೩೦೦ ಕಟ್ಟಡಗಳಲ್ಲಿ ಪ್ರತಿಯೊಂದರಲ್ಲೂ ೧೦೦೦ ಜನ ಇರಬಹುದು. ಸಾಮೂಹಿಕ ಕೊಲೆಗಡುಕ ತಂತ್ರಜ್ಞಾನ ಬಳಸಿ ಆಶ್ವಿಜ್‌ನಲ್ಲಿ ಒಮ್ಮೆಗೇ ೨೦೦೦೦ ಜನರನ್ನು ಕೊಲ್ಲಬಹುದಾಗಿದ್ದರೆ, ಬಿರ್ಕೆನಾದಲ್ಲಿ ಆ ಪ್ರಮಾಣ ಒಂದು ಲಕ್ಷ. ಅತ್ಯಂತ ಸೂಕ್ಷ್ಮವಾಗಿ, ವಿವರವಾಗಿ, ಎಲ್ಲವನ್ನೂ ಯೋಚಿಸಿ ''ಮನುಷ್ಯರನ್ನು ಕೊಲ್ಲುವುದಕ್ಕಾಗಿ ಕಟ್ಟಿದ ಈ ಕಟ್ಟಡಗಳು'' ಸುದೀರ್ಘ ಯೋಜನೆಯ ನಂತರ ಸ್ಥಾಪಿಸಿದ ಭಾರೀ ಕೈಗಾರಿಕೆಗಳನ್ನು ನೆನಪಿಸುತ್ತವೆ. 'ಭಾರೀ ಮತ್ತು ಭೀತಿ ಹುಟ್ಟಿಸುವ ಈ ಸಾವಿನ ಕಾರ್ಖಾನೆಗಳು' ಯೋಜಿತ ಮತ್ತು ನಿರಂತರ ನಿರ್ವಹಣೆಯ ಮಾದರಿಗಳಂತಿವೆ. ಆಶ್ವಜ್‌ನ ಮುಖ್ಯ ಬಾಗಿಲಿನ ಮೇಲೆ ಕೆತ್ತಿರುವ ಬರಹ 'ಕೆಲಸ ಸ್ವಾತಂತ್ರ್ಯವನ್ನು ತಂದುಕೊಡುತ್ತದೆ'. ಇದರ ಬದಲು ಇರಬಹುದಾಗಿದ್ದ ಸೂಕ್ತ ಬರಹ 'ಇಲ್ಲಿ ತಂತ್ರಜ್ಞಾನ ಸಂಪೂರ್ಣವಾಗಿ ನೈತಿಕತೆಯಿಂದ ಕಳಚಿಕೊಂಡಿದೆ.'

ಕೊಲೆಗಡುಕತನದ ಪ್ರಮಾಣ ಹೆಚ್ಚಿದಂತೆ, ತಂತ್ರಜ್ಞಾನ ಹೆಚ್ಚು ಹೆಚ್ಚು ಆಧುನಿಕಗೊಳ್ಳುತ್ತದೆ – ಬಾಕುವಿನಿಂದ ಬಂದೂಕು, ಬಂದೂಕಿನಿಂತ ಮೆಷಿನ್‌ಗನ್, ನಂತರ ಬಾಂಬ್, ಅನಿಲ ಕೊಠಡಿ, ನಂತರ ಅಣುಬಾಂಬ್. ಸಂಖ್ಯೆ ಹೆಚ್ಚಿದಂತೆ,

ಬಲಿಪಶುಗಳಿಂದ ದೂರವೂ ಹೆಚ್ಚುತ್ತದೆ, ಆದರೆ ವಿಧಾನ ಹೆಚ್ಚೆಚ್ಚು ತಾಂತ್ರಿಕವಾಗುತ್ತದೆ. ಒಂದು ದೇಹವಾದರೆ ಸುಡುವುದು ಸೂಕ್ತ, ಆದರೆ ದೇಹಗಳ ಸಂಖ್ಯೆ ಹೆಚ್ಚಿದಂತೆ 'ಸುಡುವ ಸಾಮರ್ಥ್ಯ' 'ಗಾಳಿ-ಇಂಧನದ ಅನುಪಾತ' ವೇ ಮೊದಲಾದ ತಾಂತ್ರಿಕ ಅಂಶಗಳನ್ನು ಯೋಚಿಸಬೇಕಾಗುತ್ತದೆ.

ಆಶ್ವಿಜ್‌ನಲ್ಲಿ ನಡೆದದ್ದು ತತ್‌ಕ್ಷಣ ನಡೆದ ಘಟನೆಗಳಲ್ಲ. ಅಲ್ಲಿ ಎಲ್ಲವನ್ನೂ ವ್ಯವಸ್ಥಿತವಾಗಿ ಯೋಜಿಸಲಾಗಿತ್ತು. ನೊಬೆಲ್ ವಿಜೇತ ಫ್ರಿಟ್ಜ್ ಹೇಬರ್ ವಿಷ 'ಸೈಕ್ಲೋನ್-ಬಿ' ಯನ್ನು ಶೋಧಿಸಿದರೆ, ಜರ್ಮನಿಯ ದೊಡ್ಡ ರಸಾಯನಿಕ ಸಂಸ್ಥೆ ಐಜಿ ಫಾರ್ಬೆನ್ ಈ ವಿಷವನ್ನು ಅನಿಲಕೊಠಡಿಗಳಲ್ಲಿ ಬಳಸಲೆಂದು ಉತ್ಪಾದಿಸಿತು. ವ್ಯಕ್ತಿಯೊಬ್ಬನಿಗೆ ಎಷ್ಟು ವಿಷಾನಿಲ ಬೇಕಾಗುತ್ತದೆ ಎಂದು ಎಚ್ಚರಿಕೆಯಿಂದ ಕಂಡುಹಿಡಿಯಲಾಯಿತು. ಆಶ್ವಿಜ್ ಒಂದರಲ್ಲಿ ದಿನವೊಂದಕ್ಕೆ ೩೫೦ ದೇಹಗಳನ್ನು ಸುಡಬಲ್ಲ ಸಾಮರ್ಥ್ಯವುಳ್ಳ ಕುಲುಮೆಯನ್ನು ಇಂಜಿನಿಯರಿಂಗ್ ಸಂಸ್ಥೆಯೊಂದು ರೂಪಿಸಿತು. ಓಪನ್ ಹೈಮರ್ ಅಣುಬಾಂಬ್ ಕುರಿತು ಚಿಂತಿಸಿದಂತೆ, ಕೆಲವರು ಈ ಸಮಸ್ಯೆಯನ್ನು 'ತಾಂತ್ರಿಕವಾಗಿ ಸಿಹಿಯಾದದ್ದು' ಎಂದು ಯೋಚಿಸಿದರೇನೋ, ಅಥವಾ ೧೯೮೯ರಲ್ಲಿ ಬೆಂಗಳೂರಿನಲ್ಲಿ ನಡೆದ ಕೈಗಾ ಕುರಿತ ಸೆಮಿನಾರ್‌ನಲ್ಲಿ ಬಾಬಾ ಅಣುಶಕ್ತಿ ಸಂಸ್ಥೆಯ ವಿಜ್ಞಾನಿಯೊಬ್ಬ ಹೇಳಿದಂತೆ ''ಹಿರೋಶಿಮಾ ನಮಗೆ ವಿಕಿರಣದ ಪರಿಣಾಮ ಕುರಿತು ಅಧ್ಯಯಿಸಲು ಅದೃಷ್ಟವಶಾತ್ ಸಿಕ್ಕ ಅವಕಾಶ'' ಎಂದುಕೊಂಡರೇನೋ?

ಒಂದು ಸಲ ದಿನವೊಂದಕ್ಕೆ ಸಾವಿರಾರು ಜನರನ್ನು ಕೊಲ್ಲುವ ಯೋಜನೆ ಸೂಕ್ತವಾಗಿ ವಿವರಿಸಲ್ಪಟ್ಟಿತೋ, ನಂತರ ಹತ್ಯಾಕಾಂಡ ಖಂಡಿತವಾಗಿಬಿಟ್ಟಿತು. ಆದರೆ ಯಾರು ಸಮಸ್ಯೆಯನ್ನು ವಿವರಿಸಿ, ಆದೇಶ ನೀಡಿದ್ದು? ರಾಜಕಾರಣಿಗಳು. ಜನವರಿ ೨೦, ೧೯೪೨ರಂದು ಬರ್ಲಿನ್ನಿನ ಹೊರ ಆವರಣದ ವ್ಯಾನ್‌ಸಿಯ ಸಮಾವೇಶವೊಂದರಲ್ಲಿ 'ಕೊನೆಯ ಪರಿಹಾರ' ವೆಂದು ಯಹೂದಿಗಳ ಹತ್ಯೆಯನ್ನು ನಿರ್ಧರಿಸಲಾಯಿತು. ಜನಾಂಗೀಯ ಶ್ರೇಷ್ಠತೆ, ಕುಲಸಂಬಂಧಿ/ ಧಾರ್ಮಿಕ ದ್ವೇಷ ಮತ್ತು ಮೂಲಭೂತವಾದಿ ನಿಲುವುಗಳು ಮನುಷ್ಯನ ವಿನಾಶಕ್ಕಾಗಿ ಮಾಡುವ ನಿರ್ಧಾರಗಳ ಮೂಲವಾಗಿರುತ್ತವೆ.

ಜನ ಈ ಕೊಲೆಗಡುಕತನವನ್ನು ಹೇಗೆ ಒಪ್ಪಿದರು? ಅದಕ್ಕೆ ಅನೇಕ ಕಾರಣಗಳಿವೆ. ನೈತಿಕ ಪ್ರಶ್ನೆಗಳನ್ನೆತ್ತದಂತಹ ಪರಿಸ್ಥಿತಿ ಸೃಷ್ಟಿಯಾಗಿತ್ತು. ಈ ಬಗ್ಗೆ ಗೊತ್ತಿದ್ದವರ ಬಾಯಿ ಮುಚ್ಚಿಸಲಾಯಿತು. ಅಭಿಪ್ರಾಯ ಭೇದ ವ್ಯಕ್ತಪಡಿಸಿದವರು ಕೊಲೆಗಡುಕ ಕ್ಯಾಂಪ್‌ಗೆ ತಳ್ಳಲ್ಪಟ್ಟರು . ಪತ್ರಿಕೆ ಮತ್ತು ಮಾಧ್ಯಮಗಳಿಗೆ ಸತ್ಯ



ಹೊರಚೆಲ್ಲಲು ಬಿಡಲಿಲ್ಲ. ಇದೆಲ್ಲದರಿಂದಾಗಿ ಜನರು ತಮಗೇನೂ ಗೊತ್ತಿರಲಿಲ್ಲ ಎಂದು ನೆಪ ಹೂಡಿದರು.

ಇಲ್ಲಿ ಮುಖ್ಯವಾದ ಅಂಶವೊಂದನ್ನು ಹೇಳಬೇಕು. ಫೆಬ್ರವರಿ ೧೩, ೨೦೦೦, ಭಾನುವಾರದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪೀಟರ್ ಷ್ನೈ ಡರ್ ಬರೆದ 'ದಿ ಗುಡ್ ಜರ್ಮನ್' ಎಂಬ ಲೇಖನದಲ್ಲಿ ನಾಜಿಗಳ ಆತಂಕಕಾಲದಲ್ಲೂ, ಅನೇಕ ಜರ್ಮನ್ನರು ಯಹೂದಿಗಳನ್ನು ರಕ್ಷಿಸಿದ್ದರ ಬಗ್ಗೆ ಉಲ್ಲೇಖವಿದೆ. ನಾಜಿಗಳು ಯೋಜಿಸಿದ ಈ ಹತ್ಯಾಕಾಂಡವನ್ನು ಒಪ್ಪಿಕೊಂಡಿದ್ದಕ್ಕೆ ಎಲ್ಲರೂ ಕೊಡುವ ವಿವರಣೆ 'ಆದೇಶದ ಜಾರಿ ಮತ್ತು ಕರ್ತವ್ಯ ನಿಷ್ಠೆ'. 'ಜಡ್ಜ್‌ಮೆಂಟ್ ಎಟ್ ನ್ಯೂರೆಂಬರ್ಗ್' ಚಲನಚಿತ್ರದಲ್ಲಿ ನ್ಯಾಯಾಧೀಶ ಸ್ಪೆನ್ಸರ್ ಟ್ರೇಸಿ ಯಹೂದಿಗಳ ಕೊಲೆಗೆ ಅವಕಾಶ ನೀಡಿದ್ದಕ್ಕಾಗಿ ನಾಜಿ ನ್ಯಾಯಾಧೀಶರ ವಿಚಾರಣೆ ನಡೆಸುವ ದೃಶ್ಯ ನೆನಪಿಗೆ ತಂದುಕೊಳ್ಳಿ. ನಾಜಿ ನ್ಯಾಯಾಧೀಶರು ತಾವು ಮೇಲಿನವರ ಆದೇಶ ಪಾಲಿಸಿದೆವು ಎಂದು ವಾದಿಸುತ್ತಾರೆ. ಆದರೆ ನ್ಯೂರೆಂಬರ್ಗ್ ವಿಚಾರಣೆಯ ಆದೇಶ ಸ್ಪಷ್ಟವಾಗಿ ಹೇಳಿತು: ''ಮನುಷ್ಯ ತನ್ನ ನಿರ್ಧಾರಗಳ ಜವಾಬ್ದಾರಿ ತಾನೇ ಹೊರಬೇಕು. ಆದೇಶ ಪಾಲನೆಯ ನೆಪ ಹೇಳಿ ತನ್ನ ಪಾಪವನ್ನು ತೊಳೆದುಕೊಳ್ಳುವುದು ಸಾಧ್ಯವಿಲ್ಲ''.

ಮೇಲಿನ ಎಲ್ಲ ಅಂಶಗಳಲ್ಲದೆ ರಾಷ್ಟ್ರದ ಸಂರಕ್ಷಣೆ, ಭೌಗೋಳಿಕ ರಾಜಕೀಯ ಅಗತ್ಯಗಳು ಮತ್ತು ಆಕ್ರಮಣದ ತಡೆಯೇ ಮೊದಲಾದ ವಾದಗಳನ್ನೂ ನಾಜಿಗಳು ಹೂಡಿದರು. ಇಂತಹ ಸ್ಥೂಲ ನೋಟವು ಮನುಷ್ಯರನ್ನು ಸಂಖ್ಯೆಗಳಿಂದ ಸ್ಥಳಾಂತರಿಸುತ್ತದೆ, 'ಸುಟ್ಟ ಶವಗಳ ಸಂಖ್ಯೆ' ಯನ್ನು 'ಸುಡುವ ಸಾಮರ್ಥ್ಯ' ವೂ, 'ನೂರು ಸಾವು' ಗಳನ್ನು 'ಕಿಲೋಟನ್ ಉತ್ಪನ್ನ' ವೂ ಸ್ಥಳಾಂತರಿಸುತ್ತದೆ. ವ್ಯವಸ್ಥೆ ನಡೆಯುತ್ತ ಇರಬೇಕೆಂದರೆ, ಅಧಿಕಾರಿಗಳು ಸೆರೆವಾಸಿಗಳು ಮತ್ತು ಬಲಿಪಶುಗಳ ಸಂಪರ್ಕವನ್ನು ತಪ್ಪಿಸುವುದು ಸಾಧ್ಯವಿಲ್ಲ. ಆಶ್ವಿಜ್ ಮತ್ತು ಬಿರ್ಕೆನಾದಲ್ಲಿ ಭೀಕರ ಕೊಲೆಗಳು ನಡೆದ ರೀತಿ ಆಶ್ಚರ್ಯ ಹುಟ್ಟಿಸುವಂಥದ್ದು ಹಾಗೂ ದಿಙ್ಮೂಢಗೊಳಿಸುವಂಥದ್ದು. ಜೇಲಿನ ಕಾವಲುಗಾರರು ಸೆರೆವಾಸಿಗಳನ್ನು ಮನುಷ್ಯರೆಂದೇ ಪರಿಗಣಿಸುತ್ತಿರಲಿಲ್ಲ. ಇಂತಹ ನಂಬಿಕೆ ಎಲ್ಲೆಡೆ ಹರಡುತ್ತಿದೆ ಮತ್ತು ಸ್ವೀಕಾರಾರ್ಹವಾಗಿಬಿಟ್ಟಿದೆ. ಇಂದು ಇಂತಹ ಉದಾಹರಣೆಗಳನ್ನು, ಜನಾಂಗ ನಾಶವನ್ನು (ಮೂಲವಾಸಿ ಅಮೆರಿಕನ್ನರು, ದೇಶವಿಭಜನೆಯ ಕಾಲದಲ್ಲಿ ಹಿಂದೂ ಮುಸ್ಲಿಮರು, ರ್‍ವಾಂಡಾ, ಕೊಸೋವೋ, ಬೊಸ್ನಿಯಾ ಮತ್ತು ಈಸ್ಟ್ ಟೈಮೋರ್, ಮುಂತಾಗಿ) ಹಲವೆಡೆ ಕಾಣಬಹುದು.

ಆಶ್ವಿಜ್‌ನ ಜನಾಂಗಹತ್ಯೆಯ ಸ್ಥಳದಲ್ಲಿ ನಡೆಯುತ್ತಾ, ಚರಿತ್ರೆಯಲ್ಲಿ ನಡೆದ

ಇಂತಹ ಘಟನೆಗಳನ್ನು ನೆನೆಸಿಕೊಂಡೆ. ನಾಜಿ ಹತ್ಯಾ ಕೇಂದ್ರಗಳಿಗೂ, ಲಾಸ್ ಅಲಮೋಸ್‌ನಲ್ಲಿ ನಡೆದ ಅಣುಬಾಂಬ್‌ನ ತಯಾರಿ, ಅಲಮೋಗಾರ್ಡೋನಲ್ಲಿ ನಡೆದ ಪ್ರಯೋಗಾರ್ಥ ಪರಿಶೀಲನೆ ಹಾಗೂ ಹಿರೋಷಿಮಾ - ನಾಗಸಾಕಿಯಲ್ಲಿ ಆ ಬಾಂಬ್ ಬಳಸಿ ಲಕ್ಷಾಂತರ ಕೊಂದದ್ದಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎನ್ನುವುದು ನನ್ನ ಯೋಚನೆಯಾಗಿತ್ತು. ೨ನೇ ವಿಶ್ವಯುದ್ಧದಲ್ಲಿ ಜರ್ಮನ್ ವಿರೋಧಿಗಳ ಗುಂಪು ಜನಾಂಗೀಯ ದ್ವೇಷದಿಂದ ಅಥವಾ ಯಾವುದೇ ಧಾರ್ಮಿಕ ಗುಂಪೊದರ ವಿನಾಶದ ಪಣ ತೊಟ್ಟಿರಲಿಲ್ಲ ಎನ್ನುವುದು ನಿಜ. ಆದರೆ ವಿನಾಶದ ಅಗಾಧತೆ, ಅದಕ್ಕಾಗಿ ನಡೆದ ಸಿದ್ಧತೆ, ಇದಕ್ಕಾಗಿ ವಿಜ್ಞಾನ - ತಂತ್ರಜ್ಞಾನದ ಬಳಕೆ, ಪರಸ್ಪರ ಹೊಂದಾಣಿಕೆಯ ಅಗಾಧತೆ, ಜಪಾನಿಯರ ಆಯ್ಕೆ, ಮ್ಯಾನ್‌ಹಟ್ಟನ್ ಯೋಜನೆ ಹಾಗೂ ಅದರ ಮುಂದುವರಿಕೆ – ಇವೆಲ್ಲವೂ ನಾಜಿ ಹತ್ಯೆಗಳನ್ನು ಮೀರಿಸುವಷ್ಟು ವ್ಯವಸ್ಥಿತವಾಗಿ ನಡೆಯಿತು.

ಹಾಗೆಯೇ ನಡೆಯುತ್ತಾ, ಭಾರತದ ಪರಿಸ್ಥಿತಿ ಬಗ್ಗೆ ಯೋಚಿಸಿದೆ. ಮೇ ೯೮ರ ನಂತರ, ದೇಶದ ವಿಜ್ಞಾನಿ-ರಾಜಕಾರಣಿಗಳ ಕೂಟ ನಡೆಸಿದ ಪೊಖ್ರಾನ್ ಸ್ಫೋಟದ ನಂತರ, ರಾಷ್ಟ್ರ ಸುಭದ್ರತೆಯ ನೆಪದಲ್ಲಿ ರಾಜಕೀಯ ಪಕ್ಷಗಳು ತಮ್ಮ ಕಾರ್ಯಸೂಚಿಯನ್ನು ಮುನ್ನಡೆಸಿದ್ದು ಹಾಗೂ ವಿಜ್ಞಾನಿಗಳ ದೇಶಪ್ರೇಮದ ಕೂಗನ್ನು ನಾವೆಲ್ಲ ಕಂಡಿದ್ದೇವೆ. ಇದಕ್ಕಿಂತ ಮುಖ್ಯವಾದದ್ದು ಕೆಲವೇ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿದರೆ, ಮಾಧ್ಯಮದ ಮೌನ, ವಾಸ್ತವದ ಮರೆಮಾಚುವಿಕೆ ಹಾಗೂ ಬೌದ್ಧಿಕ ಅಭಿಪ್ರಾಯಭೇದದ ನಾಪತ್ತೆ. ಈ ಎಲ್ಲವೂ ಹೆಚ್ಚಿನ ವಿಶ್ಲೇಷಣೆಗೆ ಒಳಪಡಬೇಕಾಗಿದೆ.

ಮೊದಲು ಸುಮ್ಮನಿದ್ದ 'ಕರೆಂಟ್ ಸೈನ್ಸ್' ಪತ್ರಿಕೆ ನಂತರ ಆಶ್ಚರ್ಯ ಹುಟ್ಟಿಸುವಂತೆ ಅಣುಪರೀಕ್ಷೆಯನ್ನು ಕುರಿತು ವಿಶ್ಲೇಷಿಸಿತು. ಸ್ಫೋಟದ 'ಕಿಲೋಟನ್' ಸಾಮರ್ಥ್ಯದ ಬಗ್ಗೆ ಸರ್ಕಾರದ ಹೇಳಿಕೆಯನ್ನು ಉದ್ಧರಿಸಿದ ಅದು, ಒಂದು ವೇಳೆ ಕರಾಚಿ ಅಥವಾ ಮುಂಬೈಯಲ್ಲಿ ಬಾಂಬ್ ಸ್ಫೋಟಿಸಿದರೆ ಆಗಬಹುದಾದ ಲಕ್ಷಾಂತರ ಸಾವುಗಳ ಬಗ್ಗೆ ಏನನ್ನೂ ಹೇಳಲಿಲ್ಲ. ಇದು ಮಾನವ ಹತ್ಯೆಯ ಕುರಿತಾದ ಚರ್ಚೆಯಿಂದ ವಿಷಯವನ್ನು 'ಕಿಲೋಟನ್ ಸಾಮರ್ಥ್ಯದ ಸ್ಫೋಟ' ದೆಡೆಗೆ ತಿರುಗಿಸಿತು. ಪೊಖ್ರಾನ್ ೨ನೇ ಸ್ಫೋಟದ ಸಾಮರ್ಥ್ಯದ ಸರ್ಕಾರಿ ಅಂದಾಜನ್ನು ಪ್ರಶ್ನಿಸಿದವರ ವಾದವನ್ನು ಅದು ಗಣಿಸಲಿಲ್ಲ. ಸರ್ಕಾರದ ಮುಖವಾಣಿಯಂತೆ ವರ್ತಿಸಿದ 'ಕರೆಂಟ್ ಸೈನ್ಸ್' ಸಂವಾದ -ಚರ್ಚೆಗೆ ದಾರಿಮಾಡಿಕೊಡಲಿಲ್ಲ. ಬದಲಿಗೆ ಆ ಕೆಲಸ ಮಾಡಿದ್ದು 'ಫ್ರಂಟ್ ಲೈನ್' ಪತ್ರಿಕೆ.



ಭಾರತೀಯ ಅಣು ಕಾರ್ಯಕ್ರಮವನ್ನು ವಿನಾಶದ ದುರ್ಬೀನಿನಿಂದ ನೋಡಿದರೆ ಇನ್ನಷ್ಟು ಪ್ರಶ್ನೆಗಳು ಏಳುತ್ತವೆ. ೧೯೩೦-೪೦ರ ಜರ್ಮನಿಯ ಸಂಸ್ಥೆಗಳಿಗಿಂತ ನಮ್ಮ ಸಂಸ್ಥೆಗಳು ನೈತಿಕ ಬಲ ಹೊಂದಿವೆಯೇ?, ಭಾರತದ ರಾಜಕಾರಣಿ ಮತ್ತು ರಾಜಕೀಯ ಪಕ್ಷಗಳು ಧಾರ್ಮಿಕ ದ್ವೇಷವನ್ನು ಬಳಸಿಕೊಳ್ಳ ದಿರುವ ಖಾತ್ರಿ ಇದೆಯೇ? ಭಾರತದ ವಿಜ್ಞಾನಿ ಹಾಗೂ ಇಂಜನಿಯರ್‌ಗಳು ತಮ್ಮ ಮುಂದಿನ ಯೋಜನೆಗೆ ರಾಜಕಾರಣಿಗಳ ಬೆಂಬಲ ಗಳಿಸಿಕೊಳ್ಳಲು ಆತುರಪಡುವುದಿಲ್ಲ ಎಂದು ಹೇಗೆ ನಂಬುವುದು? (ಉದಾಹರಣೆಗೆ, ಕೊಲ್ಲುವ ಆದರೆ ನಾಶಮಾಡದ ನ್ಯೂಟ್ರಾನ್ ಬಾಂಬ್ ತಯಾರಿ ಯೋಜನೆ). ಒಮ್ಮೆ ಅಣು ಬಾಂಬ್ ಸಿದ್ಧವಾದ ನಂತರ ಯಾವನಾದರೊಬ್ಬ ತಲೆತಿರುಕ ಹುಚ್ಚು ಕೆಲಸ ಮಾಡುವುದಿಲ್ಲ ಎನ್ನಲು ಖಾತ್ರಿ ಏನಿದೆ? ಆಲ್ಮಗಾರ್ಡೋ ಹಿರೋಷಿಮಾಕ್ಕೆ ಒಯ್ದಂತೆ, ಪೋಖ್ರಾನ್ ಲಾಹೋರ್‌ಗೆ, ಚಾಗೈ ಮುಂಬೈಗೆ ದಾರಿ ಮಾಡಿಕೊಡುವುದಿಲ್ಲ ಎಂದು ಹೇಗೆ ನಂಬುವುದು?

ಪರಮಾಣು ಸ್ಫೋಟವು ಭಾರತೀಯ ವಿಜ್ಞಾನದ ಆಂತರಿಕ ಪರಿಸ್ಥಿತಿಯನ್ನು ಹೊರಗೆಡವಿದೆ. ಆ ಪರೀಕ್ಷೆ ಎತ್ತಿರುವ ವಿಷಯಗಳ ಸಂಕೀರ್ಣತೆಯನ್ನು ಗಮನಿಸಿದಲ್ಲಿ, ವಿವಿಧ ಅಭಿಪ್ರಾಯಗಳು ಹೊರಹೊಮ್ಮಬೇಕಿತ್ತು. ಬದಲಿಗೆ ಹೊಮ್ಮಿದ ಒಂದೇ ಹರ್ಷೋದ್ಗಾರದ ದನಿ ಸಖೇದಾಶ್ಚರ್ಯಕ್ಕೆ ಕಾರಣವಾಗಿದೆ. ವಿಜ್ಞಾನಿಗಳ ಮೌನ ಕಿವಿಗಡಚುವಂತಿದೆ. ಎಲ್ಲ ವಿಜ್ಞಾನಿಗಳೂ ಒಂದೇ ನಿರ್ಣಯಕ್ಕೆ ಬರುವುದು ಅಸಾಧ್ಯವಾದರೂ, ಸೂಕ್ತ ವಿವರಣೆಗಾಗಿ ಹೆಚ್ಚಿನ ವಿಶ್ಲೇಷಣೆಯ ಅಗತ್ಯವಿದೆ.

ಸ್ವತಂತ್ರ ಭಾರತ ನೆಹರೂ ಪ್ರಣೀತ ವಿಜ್ಞಾನವನ್ನು ಒಪ್ಪಿಕೊಂಡಿತು. ಆಧುನಿಕ ಸಮಾಜಕ್ಕೆ ವಿಜ್ಞಾನ ಅತ್ಯಗತ್ಯ ಎನ್ನುವ ಈ ದೃಷ್ಟಿ ಈಗ, ಭಾರತೀಯ ವಿಜ್ಞಾನ ರಾಜ್ಯ ಮತ್ತು ಆಂತರಿಕ-ಬಾಹ್ಯ ರಾಜಕೀಯದ ಸೇವಕ ಎನ್ನುವ ಪರಿಸ್ಥಿತಿ ಸೃಷ್ಟಿಯಾಗಿದೆ. ವಿಜ್ಞಾನವು ಬಡತನದ ವಿರುದ್ಧ ಜನರ ಅಸ್ತ್ರ ಎನ್ನುವ ಮಾತನ್ನು ಕಿತ್ತೊಗೆಯಲಾಗಿದೆ. 'ಜೈವಿಜ್ಞಾನ್' ಎಂಬ ಘೋಷಣೆ ವಿಜ್ಞಾನಿಗಳನ್ನು ತನ್ನ ಹಿಡಿತದೊಳಗೆ ತಂದುಕೊಳ್ಳುವ ಸರ್ಕಾರದ ಪ್ರಯತ್ನದ ಸಂಕೇತವಷ್ಟೆ.

ಆದರೆ ಸರ್ಕಾರ ಮಾತ್ರ ಈ ಅಪ್ಪುಗೆಗೆ ಕಾತರದಿಂದ ನಿಂತಿರುವುದಲ್ಲ, ಅಧಿಕಾರದ ಮೊಗಸಾಲೆಯಲ್ಲಿ ಇರಲು ವಿಜ್ಞಾನಿಗಳೂ ಈ ಅಪ್ಪುಗೆಗೆ ಹಾತೊರೆಯುತ್ತಿದ್ದಾರೆ. ನರಸಿಂಹರಾವ್ ಸರ್ಕಾರ ವಿಜ್ಞಾನಿಗಳನ್ನು ದೂರ ಇಟ್ಟಿದ್ದಾಗ, ವಿಜ್ಞಾನಿವರ್ಗ ನಿರಾಸೆಯಿಂದಿತ್ತು, ಅವರಲ್ಲಿ ಕಹಿ ಭಾವನೆ ತುಂಬಿಕೊಂಡಿತ್ತು. ಆ ಅವಧಿಯನ್ನು ಸ್ವಾತಂತ್ರ್ಯಾನಂತರ ಭಾರತೀಯ ವಿಜ್ಞಾನ ಪ್ರಪಾತ ಮುಟ್ಟಿದ ಅವಧಿ ಎಂದು ಗಣಿಸಲಾಗಿತ್ತು.

ಇದಕ್ಕೆ ವಿರುದ್ಧವಾಗಿ, ಭಾರತೀಯ ವಿಜ್ಞಾನದ ದಿಗ್ಗಜಗಳೆನಿಸಿದ್ದ ರಾಮನ್ ಮತ್ತು ಸಂತಾ ತಮ್ಮ ಸ್ವಾತಂತ್ರವನ್ನು ಘನತೆಯ ವಿಷಯ ಎಂದುಕೊಂಡಿದ್ದರು. ಆದರೆ ಆನಂತರದ ಕಡಿಮೆ ದರ್ಜೆಯ ವಿಜ್ಞಾನಿಗಳಿಗೆ ಅಧಿಕಾರದ ಆಮಿಷ ತಡೆಯಲಾಗಲಿಲ್ಲ. ಅದಕ್ಕಾಗಿ ಅವರು ವಿಜ್ಞಾನ ಮಂತ್ರಾಲಯ ಮತ್ತು ಅದರ ಕಾರ್ಯದರ್ಶಿಗಳನ್ನು ಓಲೈಸಲಾರಂಭಿಸಿದರು. ಇದರಿಂದಾಗಿ ಅಕಾಡೆಮಿಗಳು ತಮ್ಮ ಸ್ವಾತಂತ್ರ್ಯ ಕಳೆದುಕೊಂಡಿದ್ದರ ಬಗ್ಗೆ ಯಾರಿಗೂ ವಿಷಾದವುಂಟಾಗಲಿಲ್ಲ. ಅವರ ಧ್ವನಿ ಸರ್ಕಾರದ ಧ್ವನಿಯನ್ನು ಹೋಲಲಾರಂಭಿಸಿತು. ಭಾರತದಂತಹ ದೇಶದಲ್ಲಿ ಸರ್ಕಾರದ ದೃಷ್ಟಿಕೋನಕ್ಕೆ ಹೊರತಾದ ದೃಷ್ಟಿಕೋನ ಹೊಂದಿರುವ ಇಂತಹ ಸಂಸ್ಥೆಗಳ ಸಂಖ್ಯೆ ತೀರ ಕಡಿಮೆ. ಪಶ್ಚಿಮದ ದೇಶಗಳಲ್ಲಿ ವಿಶ್ವವಿದ್ಯಾಲಯಗಳು ಸ್ವತಂತ್ರ ಕಾರ್ಯನೀತಿ ಅಧ್ಯಯನಗಳನ್ನು ಪೋಷಿಸುತ್ತವೆ. ಇಂಥದ್ದು ಭಾರತದಲ್ಲಿ ತೀರ ಕಡಿಮೆ.

ಹೀಗೆ, ವಿಜ್ಞಾನಿಗಳು ಒಂದು ಒತ್ತಡ ಹೇರುವ ಗುಂಪಾಗಿ ಬದಲಾದರು ಅಣ್ವಸ್ತ್ರ ಪರೀಕ್ಷೆಯ ನಂತರ ಮಾಜಿ ಪ್ರಧಾನಿಯೊಬ್ಬರು ವಿಜ್ಞಾನಿಗಳು ಅಣ್ವಸ್ತ್ರ ಪರೀಕ್ಷೆಗಾಗಿ ತಮ್ಮೊಡನೆ ಕೇಳಿಕೊಂಡಿದ್ದರು ಎಂದು ಪ್ರಕಟಪಡಿಸಿದಾಗ ಇದು ಸ್ಪಷ್ಟವಾಯಿತು. ವಿಜ್ಞಾನಿಗಳು ಸ್ಫೋಟದ ಲಾಭ-ವೆಚ್ಚದ ವಿಶ್ಲೇಷಣೆ ನಡೆಸಿರಲಿಲ್ಲ ಹಾಗೂ ಅದರ ಪರಿಣಾಮದ ಬಗ್ಗೆ ಅವರಿಗೆ ಅರಿವಿರಲಿಲ್ಲ. ದೇಶೀ ದೃಷ್ಟಿಕೋನದ ಬದಲು ಅವರು ಆಯ್ದುಕೊಂಡದ್ದು ಇಲಾಖೆಯ ಕಾರ್ಯಸೂಚಿಯನ್ನು, ತಮ್ಮ ರಾಜಕೀಯ ನಾಯಕರನ್ನು ಅನುಸರಿಸಿ – ಅವರ ದೃಷ್ಟಿಕೋನವನ್ನು.

ಭಾರತದಲ್ಲಿ ವಿಜ್ಞಾನ ಮತ್ತು ಸಮಾಜಗಳ ಪರಸ್ಪರ ಕಾರ್ಯನಿರ್ವಹಣೆಯನ್ನು ಅರ್ಥೈಸುವಾಗ ಇಬ್ಬಗೆಯ ಸಮಾಜದ ಇರುವಿಕೆ ಹಾಗೂ ಕೈಗಾರಿಕೀಕೃತ ದೇಶಗಳೊಂದಿಗಿನ ಪ್ರಬಲ ಮುಖಾಮುಖಿ – ಇವೆರಡನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಕೈಗಾರಿಕೀಕೃತ ದೇಶಗಳೊಂದಿನ ಸಂಬಂಧದಿಂದ ಆಮದಾದ ತಂತ್ರಜ್ಞಾನವನ್ನು ಆಧರಿಸಿದ ವಿದೇಶಿ ಸಂಸ್ಥೆಗಳು ಮೇಲ್ಗೈ ಹೊಂದಿದ್ದರೆ, ಭಾರತೀಯ ಸಮಾಜದ ಇಬ್ಬಗೆಯ ಗುಣದಿಂದಾಗಿ ಸ್ವದೇಶೀ ತಂತ್ರಜ್ಞಾನ ಮೇಲ್ವರ್ಗಕ್ಕೆ ಮೀಸಲಾಗಿಬಿಟ್ಟಂತಿದೆ. ಈ ಸ್ವದೇಶೀ ತಂತ್ರಜ್ಞಾನ ಕೂಡಾ ಒಂದೋ ವಿದೇಶಿ ತಂತ್ರಜ್ಞಾನದ ನಕಲು ಅಥವಾ ಹೊಂದಾಣಿಕೆಯಾಗಿರುತ್ತದೆಯೇ ಹೊರತು ಮೂಲ ಶೋಧನೆಯಾಗಿರುವುದಿಲ್ಲ.

ಭಾರತದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಈ ವಿಚ್ಛೇದನ ವಿಜ್ಞಾನದ ಮೇಲೆ ಭಾರೀ ಪರಿಣಾಮವುಂಟುಮಾಡಿದೆ ಹಾಗೂ ಅದರ ಮೊದಲ ಅಸಾಮಾನ್ಯತೆಗೆ



ಕಾರಣವಾಗಿದೆ. ಆಮದು, ನಕಲಿ ತಂತ್ರಜ್ಞಾನದಿಂದಾಗಿ ಆವಿಷ್ಕಾರ ಸರಣಿಯ ಮೊದಲ ಕೊಂಡಿ (ಸಂಶೋಧನೆ, ಮಾದರಿ ರಚನೆ ಮತ್ತು ಅಭಿವೃದ್ಧಿ) ಅಸ್ತಿತ್ವದಲ್ಲೇ ಇಲ್ಲದಂತಾಗಿದೆ. ಇದರ ಪರಿಣಾಮವೆಂದರೆ ತಂತ್ರಜ್ಞಾನ ಹೊಮ್ಮಿಸುವ ಮೂಲಭೂತ ಸಮಸ್ಯೆಗಳ ಒತ್ತಡಕ್ಕೆ ವೈಜ್ಞಾನಿಕ ವ್ಯವಸ್ಥೆ ಈಡಾಗಿಲ್ಲ. ತಂತ್ರಜ್ಞಾನದ ಈ ಒತ್ತಡ ಇಲ್ಲದಿರುವುದರಿಂದಾಗಿ, ದೇಶೀಯ ವಿಜ್ಞಾನವು ಪ್ರಭಾವಶಾಲಿಯಾದ ಚಾಲನ ಮೂಲವನ್ನು ಕಳೆದುಕೊಂಡಿದೆ. ಸಮಾಜವೊಂದರಲ್ಲಿ ವಿಜ್ಞಾನದ ಜೀವಂತಿಕೆಯು ತಂತ್ರಜ್ಞಾನವು ಎಸೆಯುವ ಸವಾಲು ಹಾಗೂ ಪರಿಹಾರ ಕಾಣದ ಸಮಸ್ಯೆಗಳಿಂದ ಉದ್ಭವಿಸುವ ಆಂತರಿಕ ಚಲನೆಯ ಫಲ. ಭಾರತೀಯ ವಿಜ್ಞಾನ ಸಮೃದ್ಧವಾಗಬೇಕಿದ್ದಲ್ಲಿ, ಅದು ವಿಜ್ಞಾನಿಗಳ 'ದ್ರವ್ಯರಾಶಿ' ಮತ್ತು ಸಂಶೋಧನೆಯ 'ವೇಗ' ಇವುಗಳ ಉತ್ಪನ್ನವಾದ ಆಂತರಿಕ ಚಲನೆಯನ್ನು ಆಧರಿಸಿರಬೇಕು. ಸಂಶೋಧನಾ ಚಟುವಟಿಕೆ ವೇಗ ಪಡೆದುಕೊಳ್ಳಲು ಉದ್ವೇಗ ಹುಟ್ಟಿಸುವ ವಾತಾವರಣ ಇರಬೇಕು ಹಾಗೂ ಅದನ್ನು ಕಾಯ್ದುಕೊಳ್ಳಬೇಕು. ಇದು ಹೊಸ ಆವಿಷ್ಕಾರವೊಂದು ಸನಿಹದಲ್ಲಿದೆ ಎನ್ನುವ ನಂಬಿಕೆಯನ್ನು ಆಧರಿಸಿದೆ.

ವಿಜ್ಞಾನಿಗಳ ನಡುವೆ ಪರಸ್ಪರ ಸಂಪರ್ಕ, ಸಂವಹನ, ಸೆಮಿನಾರ್‌ಗಳು ಇಂತಹ ವಾತಾವರಣ ಸೃಷ್ಟಿಸುವಲ್ಲಿ ನೆರವಾಗಬಲ್ಲವು. ಸಂಶೋಧನೆಗಳ ಗತಿಯನ್ನು ನಿರ್ಧರಿಸುವವರು ವಿಜ್ಞಾನಿಗಳನ್ನು ಆಕರ್ಷಿಸಬಲ್ಲ ಪ್ರತಿಭಾಶಾಲಿಗಳು. ಈ ನಾಯಕರ ಹಿಂದೆ ವಿಜ್ಞಾನಿಗಳು 'ಗುಂಪಿನಲ್ಲಿ ಬೇಟೆಯಾಡುತ್ತಾರೆ'. ವಿಜ್ಞಾನಿಗಳ 'ದ್ರವ್ಯರಾಶಿ' ವೈಜ್ಞಾನಿಕ ಸಂಸ್ಥೆಗಳ ಗಾತ್ರವನ್ನು ಅವಲಂಬಿಸಿದೆ, ಬರಿಯ ಸಂಖ್ಯೆಯನ್ನಲ್ಲ. ಬೇಕಿರುವುದು ಪರಸ್ಪರ ಜೊತೆಯಾಗಿರುವ ವಿಜ್ಞಾನಿಗಳ ಸಮುದಾಯ. ಇಂತಹ ಸಮುದಾಯವಿಲ್ಲದಿದ್ದಲ್ಲಿ ವೈಜ್ಞಾನಿಕ ಯೋಚನೆಗಳು ಮತ್ತು ಮಾಹಿತಿಗಳ ಸ್ವಾಭಾವಿಕ ಆಯ್ಕೆ ಸಾಧ್ಯವಿಲ್ಲ. ಇವುಗಳಿಲ್ಲದೆ ಸಿದ್ಧಾಂತಗಳು ಮತ್ತು ಪ್ರಯೋಗಗಳು ಉಳಿಯಲಾರವು.

ಆಲೋಚನೆಗಳ ಸ್ವಾಭಾವಿಕ ಆಯ್ಕೆ ಎಂದರೆ ಸ್ಪರ್ಧೆ ಮತ್ತು ವೈವಿಧ್ಯತೆ. ಇದು ದೃಷ್ಟಿಕೋನದ ಏಕತೆ ಇದ್ದಲ್ಲಿ ಸಾಧ್ಯವಿಲ್ಲ. ಅಭಿಪ್ರಾಯ ಭೇದವಿಲ್ಲದಿದ್ದರೆ ಸತ್ಯ ಹೊರಹೊಮ್ಮುವುದಿಲ್ಲ. ಅಭಿಪ್ರಾಯ ಭೇದ ಇರುವವರನ್ನು ವಿಜ್ಞಾನವಿರೋಧಿ ಅಥವಾ ದೇಶವಿರೋಧಿ ಎಂದು ಕರೆದರೆ, ಜಯ ಕೂಡಾ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಇತ್ತೀಚೆಗಿನ ದಶಕಗಳಲ್ಲಿ ಭಾರತದ ವೈಜ್ಞಾನಿಕ ರಂಗದಲ್ಲಿ ಯಾವುದೇ ಮುಖ್ಯ ವೈಜ್ಞಾನಿಕ ವಿವಾದ ಎದ್ದಿಲ್ಲ ಎನ್ನುವುದನ್ನು ಗಮನಿಸಬೇಕು. ಭಾರತೀಯ ವಿಜ್ಞಾನದ ಕೆಲವು ನೇತಾರರ ನಡುವಿನ ಕಹಿ ದ್ವೇಷ ಎಲ್ಲರಿಗೂ ಗೊತ್ತಿರುವಂಥದ್ದೇ, ಆದರೆ ಅದು

ವೈಯಕ್ತಿಕವಾದದ್ದಲ್ಲ, ವೈಜ್ಞಾನಿಕ ತಿಕ್ಕಾಟವಷ್ಟೆ. ಎದ್ದಿರುವ ಬಹುಪಾಲು ವಿವಾದಗಳು – ಭೋಪಾಲ್ ಅನಿಲ ದುರಂತ, ಸರ್ದಾರ್ ಸರೋವರ ಯೋಜನೆ, ಅಣುಶಕ್ತಿ– ಇವೆಲ್ಲ ವ್ಯವಸ್ಥೆಯ ಹೊರಗಿರುವ ವಿಜ್ಞಾನಿಗಳು, ಸ್ವಮತ ಭ್ರಷ್ಟರು ಎತ್ತಿರುವ ವಿವಾದಗಳು, ಆದ್ದರಿಂದಾಗಿ ಅವು ನಿರ್ಲಕ್ಷ್ಯಕ್ಕೊಳಗಾಗಿವೆ.

ನಿಜವಾದ ವಿವಾದವೊಂದನ್ನು ಹತ್ತಿಕ್ಕುವ ಇಲ್ಲವೇ ಪುನರ್ವಿಮರ್ಶೆಗೆ ಒಳಪಡಿಸುವುದನ್ನು ತಡೆಯುವ ವಿಧಾನವೆಂದರೆ ಅವುಗಳನ್ನು ಸಂವಾದ, ಚರ್ಚೆಯಿಂದ ಹೊರಗಿಡುವುದು. ಕೆಲವು ಅಂತಾರಾಷ್ಟ್ರೀಯ ವಿಷಯತಜ್ಞರನ್ನು ಗೋಷ್ಠಿಗೆ ಕರೆಯದಿರಲು ಕಾರಣ ಅವರು ವ್ಯವಸ್ಥೆ ಒಲ್ಲದ ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಸತ್ಯದ ದ್ವಿಮುಖತೆಯು ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ನಿರಾಶೆಗೊಳಿಸುವಂತಿರುತ್ತದೆ. ಪಾರದರ್ಶಕ, ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಇದ್ದಲ್ಲಿ ಈ ವೈಜ್ಞಾನಿಕ ಸಂಪ್ರದಾಯದ ತಿರುಚುವಿಕೆ ಸಾಧ್ಯವಿಲ್ಲ. ಇದರಿಂದಾಗಿಯೇ ಪಾರದರ್ಶಕತೆಯ ಕೊರತೆ, ಪ್ರಜಾಸತ್ತಾತ್ಮಕವಲ್ಲದ ಕಾರ್ಯನಿರ್ವಹಣೆ ಮತ್ತು ಪುನರ್ವಿಮರ್ಶೆಯನ್ನು ತಿರುಚಲಾಗುತ್ತದೆ.

ವೈಜ್ಞಾನಿಕ ಸಂಪ್ರದಾಯ ಉಲ್ಲಂಘನೆಯ ಈ ಎಲ್ಲ ವರ್ತನೆಗಳ ಹಿಂದೆ ಇರುವುದು 'ಕೊಳಲಿರುವಾತ ಬೇಕೆಂದ ರಾಗ ಊದುತ್ತಾನೆ' ಎಂಬ ಸತ್ಯ. ವೈಜ್ಞಾನಿಕ ಸಂಸ್ಥೆಗಳಿಗೆ ಹಣಸಹಾಯ ಮಾಡುವುದು ಸರ್ಕಾರ, ಈ ಹಣ ವೈಜ್ಞಾನಿಕ ಚಟುವಟಿಕೆಯ ಆಧಾರ ಹಾಗೂ ವಿಜ್ಞಾನಿಗಳೆಲ್ಲ ಸರ್ಕಾರದ ನೌಕರರು. ಸಮ್ಮತ ಅಭಿಪ್ರಾಯವುಳ್ಳವರಿಗೆ ಹಣಸಹಾಯದ ಜೊತೆಗೆ ಬಹುಮಾನ, ಪುರಸ್ಕಾರಗಳೂ ಲಭಿಸುತ್ತವೆ. ಇದರಿಂದಾಗಿಯೇ ಪರಮಾಣು ಸ್ಫೋಟವನ್ನು ಕೊಂಡಾಡಲು ವಿಜ್ಞಾನಿಗಳು ನೂಕುನುಗ್ಗಲು ನಡೆಸಿದರು; ವ್ಯವಸ್ಥೆ ಹೇಳುವ ದೇಶಪ್ರೇಮ ಪ್ರದರ್ಶಿಸಿಬಿಟ್ಟರು. ಅದೃಷ್ಟವಶಾತ್ ಅಭಿಪ್ರಾಯಭೇದ ವ್ಯಕ್ತಪಡಿಸಿ ದವರು ಇದ್ದರು, ಅವರ ಸಂಖ್ಯೆ ಪ್ರಾರಂಭದ ಅಬ್ಬರದ ನಂತರ ಹೆಚ್ಚಿತು ಕೂಡಾ.

ಭಾರತೀಯ ವಿಜ್ಞಾನದ ದಿಕ್ಕು ಯಾವುದಿರಬೇಕೆಂದು ನೋಡುವಾಗ, ಚರ್ಚೆ ಪ್ರಾರಂಭವಾಗಬೇಕಾದ್ದು ದೇಶದ ಬಡತನದ ಕುರಿತು. ೧೯೫೧ ರಲ್ಲಿ ಭಾರತದಲ್ಲಿ ಬಡವರ ಸಂಖ್ಯೆ ೧೬೪ ದಶಲಕ್ಷ ಇದ್ದದ್ದು, ೧೯೭೩-೭೪ರ ವೇಳೆಗೆ ೩೧೨ ದಶಲಕ್ಷಕ್ಕೆ ಏರಿದೆ. ೧೯೫೦-೫೧ ಮತ್ತು ೭೩-೭೪ರ ಅವಧಿಯಲ್ಲಿ ಬಡತನದ ಇಳಿಮುಖತೆ ವರ್ಷಕ್ಕೆ ಶೇ. ೧ ರಷ್ಟಿದೆ. ೩ರಲ್ಲಿ ಒಬ್ಬ ಭಾರತೀಯ ಹೊಟ್ಟೆಗಿಲ್ಲದೆ ಮಲಗುತ್ತಾನೆ. ಅರ್ಧದಷ್ಟು ಜನ ಓದಲಾರರು, ಬರೆಯಲಾರರು. ಮಾನವ ಬಡತನ ಸೂಚ್ಯಾಂಕ ಶೇ. ೩೭ರಷ್ಟಿದೆ. ಇದು ಜೀವಿತಾವಧಿ (೪೦ ವರ್ಷಕ್ಕೆ ಮೊದಲೇ ಸಾಯುವವರ



ಪ್ರಮಾಣ ಶೇ. ೧೯.೪), ಜ್ಞಾನ (ಶೇ. ೪೮.೮ ಮಂದಿ ಅನಕ್ಷರಸ್ಥರು) ಮತ್ತು ಬದುಕಿನ ಮಟ್ಟ (ಶೇ. ೧೯ ರಷ್ಟು ಮಂದಿಗೆ ಕುಡಿಯುವ ನೀರು ಲಭ್ಯವಿಲ್ಲ, ಶೇ. ೧೫ರಷ್ಟು ಜನರಿಗೆ ಆರೋಗ್ಯ ಸೇವಾ ಸೌಲಭ್ಯ ದೊರೆತಿಲ್ಲ ಮತ್ತು ಶೇ. ೫೩ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ) ಇವುಗಳ ಒಟ್ಟಾರೆ ಫಲ. ಭಾರತ ಅತೀ ಬಡ ದೇಶಗಳಲ್ಲೊಂದು ದೇಶ. ಈ ಶಾಪದಿಂದ – ಸಂತುಲಿತ ಅಭಿವೃದ್ಧಿಯ ನೆರವಿನಿಂದ ಹೊರಬರಬಹುದೇ ಹೊರತು ಪರಮಾಣು ಸ್ಫೋಟದಿಂದಲ್ಲ.

ಇದು ಭಾರತೀಯ ವಿಜ್ಞಾನ ಹಿಡಿಯಬೇಕಾದ ದಾರಿ. ಇದರ ಬದಲು ಭಾರತೀಯ ವಿಜ್ಞಾನ ಮತ್ತು ಭಾರತೀಯರ ಸಮಸ್ಯೆಗಳ ನಡುವೆ ಸಂಪರ್ಕವೇ ಇಲ್ಲದಂತಾಗಿದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ ಮೀಸಲಿಟ್ಟಿರುವ ಹಣದಲ್ಲಿ ೨/೩ ಭಾಗ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ಬಾಹ್ಯಾಂತರಿಕ್ಷ ಇಲಾಖೆ ಮತ್ತು ಅಣುಶಕ್ತಿ ಇಲಾಖೆಗೆ ಹೋಗುತ್ತಿದೆ. ಉಳಿದದ್ದರಲ್ಲಿ ಹೆಚ್ಚುಪಾಲು ಕೈಗಾರಿಕಾ ಸಂಶೋಧನೆಗಳಿಗೆ ಹೋಗುತ್ತದೆ; ಇವು ಉನ್ನತ ವರ್ಗದವರ ಬೇಡಿಕೆಯನ್ನು ತೀರಿಸುವಂತಹವು. ಭಾರತೀಯ ಸಂಶೋಧನೆಯು ಮಿಲಿಟರಿ ಹಾಗೂ ಉನ್ನತ ವರ್ಗದ ಅಗತ್ಯಗಳನ್ನು ತನ್ನ ಆದ್ಯತೆಯನ್ನಾಗಿಸಿಕೊಂಡಿದೆಯೇ ಹೊರತು, ಬಹುಜನರ ಅಗತ್ಯಗಳನ್ನಲ್ಲ.

ವಿಜ್ಞಾನದ ಈ ವಿರೂಪ ಆಶ್ಚರ್ಯ ಹುಟ್ಟಿಸುವಂಥದ್ದಲ್ಲ. ದೇಶ ಅಪಾರ ಬಡತನದ ಸಾಗರದ ಮಧ್ಯೆ ಶ್ರೀಮಂತಿಕೆಯ ಸಣ್ಣ ದ್ವೀಪಗಳಿಂದ ಆಗಿದೆ. ಇದನ್ನು ವೈರುಧ್ಯದ ಸಮಾಜ ಎನ್ನಬಹುದು. ಶೇ. ೧೦ ರಿಂದ ೧೫ ರಷ್ಟಿರುವ ಶ್ರೀಮಂತ, ಬಲಾಢ್ಯರ ಗುಂಪು ಅಪಾರ ಬಡತನದ, ರಾಜಕೀಯವಾಗಿ ದುರ್ಬಲರ ಗುಂಪಿನ ಮಧ್ಯೆ ಜೀವಿಸುತ್ತಿದೆ. ಬಡವರ ಮಾನವ ಹಕ್ಕುಗಳ ಉಲ್ಲಂಘನೆ ನಡೆದಿದೆ. ವಿಜ್ಞಾನಿಗಳು ವಿಜ್ಞಾನವು ತಟಸ್ಥ ಮತ್ತು ನೈತಿಕತೆಯ ಪ್ರಶ್ನೆಗೆ ಹೊರತಾದದ್ದು ಎಂದು ನೆವ ಹೇಳಿ ಈ ತಪ್ಪು ಹಾದಿಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ತ್ಯಾಗಮಯಿ, ಪ್ರಾಮಾಣಿಕ ಮತ್ತು ಧ್ಯೇಯನಿಷ್ಠ ಅಬ್ದುಲ್ ಕಲಾಂ ಅವರ ಈ ಹೇಳಿಕೆ ನೋಡಿ: ''ನಾನೊಬ್ಬ ಇಂಜಿನಿಯರ್. ನನ್ನ ರಾಕೆಟ್‌ನಿಂದ ಹೂವುಗಳನ್ನು ಹಂಚುವುದೂ ಸಾಧ್ಯವಿದೆ''.

ವಿಜ್ಞಾನಿ ಮತ್ತು ಆತ ಅಧ್ಯಯಿಸುವ ವಿಷಯದ ನಡುವಣ ಸಂಬಂಧವನ್ನು ವಿವರಿಸುವ ಎರಡು ಅಂಶಗಳಿಂದಾಗಿ ಈ ತಾಟಸ್ಥ್ಯ ಮತ್ತು ಅನೈತಿಕತೆ ತಲೆ ಎತ್ತಿದೆ. ಮೊದಲಿಗೆ, ವಿಜ್ಞಾನಿ ತನ್ನ ಅಧ್ಯಯನದ ವಿಷಯದಿಂದ, ಆ ವಸ್ತು ಬದುಕಿದ್ದರೂ ಅದರಿಂದ ದೂರವಾಗಬೇಕು, ಪ್ರತ್ಯೇಕಗೊಳ್ಳಬೇಕು. ಇನ್ನೊಂದು, ಆತ ವಿಶ್ಲೇಷಣೆ ಮಾಡುವಾಗ ಭಾವನಾತ್ಮಕವಾಗಿ ಸ್ಪಂದಿಸಬಾರದು, ಮೌಲ್ಯಗಳ ಬಗ್ಗೆ ಯೋಚಿಸ

ಬಾರದು. ಇದರಿಂದಾಗಿ ವಿಜ್ಞಾನಕ್ಕೆ ವಸ್ತುನಿಷ್ಠತೆ ಬರುತ್ತದೆ. ಆಧುನಿಕ ವಿಜ್ಞಾನ ಎರಡು ಟಿಸಿಲನ್ನು ಒಳಗೊಂಡಿದೆ. ವಸ್ತು ಮತ್ತು ವಿಷಯದ ಪ್ರತ್ಯೇಕತೆ ಹಾಗೂ ಭಾವನೆ ಮತ್ತು ಅನಿಸಿಕೆಗಳಿಂದ ಆಲೋಚನೆ ಮತ್ತು ವಿಶ್ಲೇಷಣೆಯ ಪ್ರತ್ಯೇಕತೆ. ಆದರೆ ಮೊದಲನೇ ಟಿಸಿಲು ಮನುಷ್ಯನೂ ಸೇರಿದಂತೆ ಅಧ್ಯಯನದ ವಸ್ತುಗಳನ್ನು ಪದಾರ್ಥಗಳಾಗಿಸಿಬಿಡುತ್ತದೆ. ಎರಡನೆಯದು ವಸ್ತುಗಳ ಕುರಿತು ಭಾವನೆಯನ್ನು ಪರಿತ್ಯಜಿಸಿಬಿಡುತ್ತದೆ. ವಿಜ್ಞಾನದ ಅನೈತಿಕತೆಯು ಹೊಮ್ಮಿರುವುದು ಪದಾರ್ಥದಿಂದ ವಸ್ತುವಿನ ಪ್ರತ್ಯೇಕತೆ ಮತ್ತು ಭಾವನೆ, ಅನಿಸಿಕೆ ಹಾಗೂ ಮೌಲ್ಯಗಳನ್ನು ಹೊರತಾಗಿಸಿರುವುದರಿಂದ. ಮನುಷ್ಯನೂ ಸೇರಿದಂತೆ ಅಧ್ಯಯನದ ವಸ್ತು ಪದಾರ್ಥವಾದಾಗ, ಮನುಷ್ಯರು ನಿರ್ಜೀವಿಗಳಾಗಿ, ವಿಜ್ಞಾನವು ಹಿಂಸೆ, ಶೋಷಣೆ ಹಾಗೂ ಕೆಡುಕಿನ ಹತಾರವಾಗಿಬಿಡುತ್ತದೆ. ಅದ್ದರಿಂದ ಭಾರತದಲ್ಲಿ ವಿಜ್ಞಾನ ಮತ್ತು ಅನೈತಿಕತೆಯ ನಡುವಿನ ಅಗಲಿಕೆ ಹೆಚ್ಚು ಆಳಕ್ಕೆ ಹೋಗಿದೆ.

ಈ ನೈತಿಕ ತೊಳಲಾಟಕ್ಕೊಂದು ದಾರಿ ಇದೆ. ವಿಜ್ಞಾನಿ ಮತ್ತು ಅಧ್ಯಯನ ವಸ್ತುವಿನ ಸಂಬಂಧವು ಪ್ರಾರಂಭಿಕ ಅಗಲಿಕೆಯ ನಂತರ ಸಂಯೋಗದಲ್ಲಿ ಕೊನೆಯಾಗಬೇಕು. ವಿಶ್ಲೇಷಣೆಯ ಸಮಯದಲ್ಲಿನ ಭಾವನಾರಾಹಿತ್ಯತೆ, ವಿಶ್ಲೇಷಣೆಯ ನಂತರ ಭಾವನೆಗಳಿಗೆ ದಾರಿಮಾಡಿಕೊಡಬೇಕು. ವಿಜ್ಞಾನಿಗಳ ಕಾರ್ಯವಿಧಾನಕ್ಕೆ ನೈತಿಕತೆಯ ಬೇಲಿಹಾಕಬೇಕು. ಇಲ್ಲದೇ ಹೋದಲ್ಲಿ ವಿಜ್ಞಾನ ಹಿಂಸೆ, ಶೋಷಣೆ ಮತ್ತು ಕೆಡುಕಿಗೆ ದಾರಿಮಾಡಿಕೊಡುತ್ತದೆ. ವಿಜ್ಞಾನ ತಟಸ್ಥ ಮತ್ತು ಅನೈತಿಕವಾಗಿರಬಾರದು. ಅದು ಬಡಜನರ ಹಕ್ಕುಗಳ ಕುರಿತಂತೆ ಮೌಲ್ಯಗಳ ಜೊತೆ ಹಾಸುಹೊಕ್ಕಾಗಿರಬೇಕು.

ಈ ದೃಷ್ಟಿಯಲ್ಲಿ ನೋಡಿದಲ್ಲಿ, ಪರಮಾಣು ಸ್ಫೋಟ ಮತ್ತು ಶಸ್ತ್ರೀಕರಣ ಕುರಿತ ಸರ್ಕಾರದ ನಿಲುವಿನಲ್ಲಿ ಯಾವುದೇ ಜೀವಪರ ಮೌಲ್ಯಗಳಿಲ್ಲ. ಇರುವ ಮೌಲ್ಯಗಳೆಲ್ಲ ಜೀವನಾಶಿ. 'ಜೈವಿಜ್ಞಾನ್' ಘೋಷಣೆ ಅಣು ಆಕ್ರಮಣದಿಂದ ಸಾಯಬಹುದಾದ ಲಕ್ಷಾಂತರ ಜನರ ಸಾವಿಗೆ ಕಾರಣವಾಗಬಲ್ಲ ವಿಜ್ಞಾನದ ಬೆನ್ನು ತಟ್ಟುವ ಪ್ರಯತ್ನ. ಈ ಘೋಷಣೆಯ ಹಿಂದೆ ಭಾರತೀಯ ವಿಜ್ಞಾನವನ್ನು ಮಿಲಟರೀಕರಣ ಮಾಡುವ ಸರ್ಕಾರದ ಹುನ್ನಾರವಿದೆ. ಭಾರೀ ಸಾವಿನ ಹತ್ಯಾರವಾಗಿ ವಿಜ್ಞಾನವನ್ನು ಬಳಸುವ ಬಗ್ಗೆ ಉಬ್ಬರ ಎಬ್ಬಿಸಿರುವ ಸರ್ಕಾರ, ವಿಜ್ಞಾನ ಮತ್ತು ಕೆಡುಕಿನ ನಡುವಣ ಸಂಬಂಧವನ್ನು ಶ್ಲಾಘಿಸಿದಂತಾಗಿದೆ. ವಿಜ್ಞಾನ ಮತ್ತು ನೈತಿಕತೆಯ ನಡುವಿನ ಸಂಬಂಧವನ್ನು ಪುನರ್‌ಸ್ಥಾಪಿಸಬೇಕಾಗಿದೆ.

ದೇಶದ ಭದ್ರತೆ, ಕಿಲೋಟನ್ ಸಾಮರ್ಥ್ಯ, ಸಾವಿನ ಅನುಪಾತವೇ ಮೊದಲಾದ



ಸ್ಥೂಲನೋಟಗಳ ಬದಲು, ಮನುಷ್ಯರು ಮತ್ತು ಅವರ ಹಕ್ಕುಗಳ ಬಗೆಗಿನ ಸೂಕ್ಷ್ಮ ನೋಟ ಬೇಕಾಗಿದೆ. ನಾವು ಸಂಖ್ಯೆ, ಸಂಖ್ಯಾಶಾಸ್ತ್ರದ ಬದಲು ಮಕ್ಕಳು, ಪ್ರೇಮಿಗಳು, ದಂಪತಿಗಳು, ಸ್ನೇಹಿತರು, ಬಹುಮುಖ್ಯವಾಗಿ ತುಳಿಯಲ್ಪಟ್ಟವರನ್ನು ನೋಡ ಬೇಕಾಗಿದೆ. ಅಣುಸ್ಫೋಟ ಮತ್ತು ಶಸ್ತ್ರೀಕರಣದ ಭೀತಿ ಭಾರತೀಯ ವಿಜ್ಞಾನದ ಗಂಭೀರ ದೋಷವನ್ನು ಹೊರಗೆಡವಿದೆ. ಅದು ಮಿಲಿಟರಿ ಮತ್ತು ಉನ್ನತ ವರ್ಗದ ಆಶೋತ್ತರಗಳಿಗೆ ಸ್ಪಂದಿಸುತ್ತಿದೆಯೇ ಹೊರತು ಬಹುಸಂಖ್ಯಾತ ಭಾರತೀಯರ ಸಮಸ್ಯೆಗಳ ಬಗ್ಗೆ ಯೋಚಿಸುತ್ತಿಲ್ಲ ಎನ್ನುವುದನ್ನು ತೋರಿಸಿಕೊಟ್ಟಿದೆ. ರಾಜ್ಯ ಮತ್ತು ನಾಗರೀಕ ಸಮಾಜದ ನಡುವೆ ಸಮತೋಲ ಕಾಯ್ದುಕೊಳ್ಳುವ ಬದಲು, ಭಾರತೀಯ ವಿಜ್ಞಾನವು ರಾಜ್ಯದ ಗುಲಾಮನಾಗಿ ಬಿಟ್ಟಿದೆ. ವಿಜ್ಞಾನವು ಬುದ್ಧ ಮತ್ತು ಮಹಾತ್ಮಾ ಗಾಂಧಿ ಬಿಟ್ಟುಹೋದ ಮಾನವೀಯ ಮೌಲ್ಯಗಳನ್ನು ಧಿಕ್ಕರಿಸಿದೆ. ವಿಜ್ಞಾನ ನೀತ್ಯತೀತ ಮತ್ತು ತಟಸ್ಥ ಎಂದು ನೆವ ಹೇಳಿ ಹಿಂಸೆ, ಸಾವು, ಕೆಡುಕಿನ ಹತಾರವಾಗಿದೆ. ಪರಮಾಣು ಸ್ಫೋಟದ ನಂತರ ಬಹುಪಾಲು ಭಾರತೀಯ ವಿಜ್ಞಾನಿಗಳು ಸರ್ಕಾರದ ನಿಲುವನ್ನು ಬೆಂಬಲಿಸಿದರು. ಪರಿಪ್ರೇಕ್ಷ ವೈವಿಧ್ಯದ ಸ್ವಾತಂತ್ರ್ಯವನ್ನು ಅವರು ಪ್ರದರ್ಶಿಸಲಿಲ್ಲ. ಹೀಗಿರುವಾಗ ಭಾರತದ ವಿಜ್ಞಾನಕ್ಕೆ ಭವಿಷ್ಯವೆಂಬುದಿದೆಯೇ ?

ಇದೆ, ಅದನ್ನು ಅಣುಸ್ಫೋಟದ ವಿರುದ್ಧ ಎದ್ದ ಅಭಿಪ್ರಾಯಭೇದದಲ್ಲಿ ಕಾಣಬಹುದು. ಈ ಅಭಿಪ್ರಾಯಭೇದವುಳ್ಳವರೆಲ್ಲ ಒಟ್ಟಾದರೆ, ವಿಜ್ಞಾನದ ಗುಣವಿಶೇಷ ಬದಲಾಗುವ ಸಾಧ್ಯತೆ ಇದೆ. ಆಗ ಭಾರತದ ಬಡತನವನ್ನು ದುರ್ಬಲರನ್ನು ವಿಜ್ಞಾನ ಪ್ರತಿನಿಧಿಸಿದಂತಾಗುತ್ತದೆ. ಅಭಿಪ್ರಾಯ ಭೇದದಿಂದಾಗಿ ಭಾರತೀಯ ವಿಜ್ಞಾನ ಶ್ರೀಮಂತಗೊಳ್ಳುತ್ತದೆ. ಗಾಂಧಿ, ಬುದ್ಧರ ಪರಂಪರೆಗೆ ಗೌರವ ಸಲ್ಲಿಸಿದಂತಾಗುತ್ತದೆ. ಅಣ್ವಸ್ತ್ರ ಸ್ಫೋಟ ಮುಗಿದು, ಶಸ್ತ್ರೀಕರಣ ಕಾರ್ಯಸೂಚಿ ಇಂದು ಚಾಲನೆಯಲ್ಲಿದೆ. ಭಾರತೀಯ ವಿಜ್ಞಾನಿಗಳು ಆದಷ್ಟೂ ಬೇಗನೆ, ರಾಜಕೀಯ ಹಿತಾಸಕ್ತಿಗಳು ಅಣ್ವಸ್ತ್ರ ಮತ್ತು ಶಸ್ತ್ರಾಸ್ತ್ರ ಕಾರ್ಯಕ್ರಮವನ್ನು ಬಳಸಿಕೊಳ್ಳುವುದನ್ನು ತಡೆಯಬೇಕು. ಪ್ರಜಾಪ್ರಭುತ್ವದ ಸವಕಳಿಯನ್ನು ವಿರೋಧಿಸಬೇಕು. ಬಡಜನರ ಸಮಸ್ಯೆಯನ್ನು ಬಗೆಹರಿಸಲು ವಿಜ್ಞಾನಿಗಳ ಜಾಣ್ಮೆಯನ್ನು ಬಳಸುವ ಬದಲು ಜೀವವಿರೋಧಿ ಕೆಲಸಗಳಿಗೆ ಬಳಸುವುದನ್ನು ತಡೆಯಬೇಕು. ನಮ್ಮ ನೆರೆಹೊರೆಯವರೊಡನೆ ಶಸ್ತ್ರಾಸ್ತ್ರ ಪೈಪೋಟಿಯನ್ನು ವಿರೋಧಿಸಬೇಕು. ಜಾಗತಿಕ ನಿಶ್ಶಸ್ತ್ರೀಕರಣಕ್ಕಾಗಿ ಕೈಗೂಡಿಸಬೇಕು. ಇದೆಲ್ಲಕ್ಕಿಂತ ಮುಖ್ಯವಾಗಿ ಮುಂದಿನ ಶತಮಾನದಲ್ಲಿ ಬಹುಸಂಖ್ಯಾತ ಬಡಜನರಿಗೆ ಉತ್ತಮ ಬದುಕನ್ನು ಕೊಡಮಾಡುವತ್ತ ತಮ್ಮ ಗಮನ ಹರಿಸಬೇಕು.

ವಿಜ್ಞಾನಿಗಳು ಅಣುಬಾಂಬ್‌ನ ಆಘಾತದ ಬಗ್ಗೆ ಜನರಲ್ಲಿ ಎಚ್ಚರ ಹುಟ್ಟಿಸ

ಬೇಕು. ದೆಹಲಿ, ಮುಂಬೈ, ಬೆಂಗಳೂರಿನಂತಹ ನಗರಗಳ ಮೇಲೆ ಬಾಂಬ್ ಸ್ಫೋಟದಿಂದಾಗುವ ಪರಿಣಾಮವನ್ನು ಅಧ್ಯಯಿಸಿ, ಜನರಿಗೆ ಮಾಹಿತಿ ಪೂರೈಸಬೇಕು. ಅಣು ಕಾರ್ಯಕ್ರಮಕ್ಕಾಗಿ ಸರ್ಕಾರ ವೆಚ್ಚ ಮಾಡುತ್ತಿರುವ ಹಣದ ಮೊತ್ತವನ್ನು ಬಹಿರಂಗಗೊಳಿಸಬೇಕು. ವ್ಯವಸ್ಥೆ ತನ್ನ ಸಾಧನೆ ಬಗ್ಗೆ ಕೊಚ್ಚಿಕೊಂಡಾಗ, ಅದನ್ನು ಪರಿಶೀಲಿಸುವ ಸ್ವತಂತ್ರ ಚಿಂತಕರ ಗುಂಪೊಂದನ್ನು ರೂಪಿಸಬೇಕು. ಗುಟ್ಟು ಸ್ವತಂತ್ರದ ಉಸಿರು ಕಟ್ಟಿಸುತ್ತದೆ, ಶ್ರೇಷ್ಠತೆಯನ್ನು ಸವೆಸುತ್ತದೆ ಮತ್ತು ತಪ್ಪುಗಳಿಗೆ (ಕೆಲವೊಮ್ಮೆ ಸುಳ್ಳಿಗೆ) ಕಾರಣವಾಗುತ್ತದೆ. ಅಣುಶಕ್ತಿಯ ವೆಚ್ಚ ಕುರಿತಂತೆ ನಡೆಸಿದ ಸ್ವತಂತ್ರ ಅಧ್ಯಯನಗಳಿಂದಾಗಿ ಅಣುಶಕ್ತಿ ಇಲಾಖೆಯ ಲೆಕ್ಕಾಚಾರದಲ್ಲಿನ ಗಂಭೀರ ತಪ್ಪುಗಳು ಬಹಿರಂಗಗೊಂಡಿವೆ. ಭಾರತೀಯ ವಿಜ್ಞಾನದ ದಿಕ್ಕು-ದೆಸೆಯನ್ನು ಪುನರ್‌ರೂಪಿಸುವ ಹೊಣೆ ವಿಜ್ಞಾನಿಗಳ ಮೇಲಿದೆ. ಮೂಲಭೂತ ಸಂಶೋಧನೆಗೆ ಒಟ್ಟು ಖರ್ಚಿನ ಶೇ. ೧೦ ರಿಂದ ೧೫ರಷ್ಟನ್ನು ಕೊಡಲೇಬೇಕು. ಅದರ ಮೇಲೆ ಕಠಿಣ ಗುಣ ನಿಯಂತ್ರಣ ಮತ್ತು ಶ್ರೇಷ್ಠತೆಯ ಶೋಧದ ನಿಯಮ ಹೇರಬೇಕು. ನಿಜವಾದ ದೋಷಿ ಅನ್ವಯಿಕ ಸಂಶೋಧನೆ. ಅದು ಸಂಶೋಧನೆ - ಅಭಿವೃದ್ಧಿಯ ಬಹುಪಾಲು ಹಣ ನುಂಗುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿ ದೇಶದ ಸಮಸ್ಯೆಗಳನ್ನು ಬಗೆಹರಿಸುವೆಡೆ ಗಮನ ಹರಿಸಬೇಕು. ಭಾರತೀಯ ಸಮಾಜವು ಶಕ್ತಿವಂತರು, ಉನ್ನತ ವರ್ಗದವರು ಮತ್ತು ಬಹುಸಂಖ್ಯಾತ ದುರ್ಬಲರಿರುವ ಸಮಾಜವೆನ್ನುವುದನ್ನು ಮರೆಯಬಾರದು. ಭವಿಷ್ಯದ ಕಾಳಜಿ ಇರುವ ಎಲ್ಲರೊಡನೆ ಶಾಂತಿಕಾರ್ಯಕರ್ತರು, ಅಭಿವೃದ್ಧಿ ಕಾರ್ಯಕರ್ತರು, ಪರಿಸರವಾದಿಗಳು, ಸ್ತ್ರೀಯರು, ದಲಿತರು, ವಿಜ್ಞಾನಿಗಳು ಕೈಗೂಡಿಸಬೇಕಾದ ಅಗತ್ಯವಿದೆ.

ಗಾಂಧಿ ಹೇಳಿದ ಚಿರಮಂತ್ರವನ್ನು ಮರೆಯಬಾರದು: '' ಅತೀ ಬಡವನಾದ, ಅಸಹಾಯಕನ ಮುಖವನ್ನು ನೆನೆಸಿಕೊಳ್ಳಿ. ನೀವು ತೆಗೆದುಕೊಳ್ಳುತ್ತಿರುವ ಕ್ರಮದಿಂದ ಆತನಿಗೇನಾದರೂ ಉಪಯೋಗವಿದೆಯೋ ಎಂದು ಪ್ರಶ್ನಿಸಿಕೊಳ್ಳಿ. ಅದರಿಂದ ಆತನಿಗೇನಾದರೂ ಉಪಯೋಗವಾಗುವುದೇ? ಆತನ ಜೀವನ ಮತ್ತು ಘನತೆಯ ಮೇಲೆ ಆತ ತನ್ನ ನಿಯಂತ್ರಣವನ್ನು ಪುನರ್ ಸ್ಥಾಪಿಸುವಲ್ಲಿ ಅದು ನೆರವಾಗುವುದೇ?'' ವಿಜ್ಞಾನಿಗಳ ಕೆಲಸ ಕಟ್ಟಕಡೆಯವನ ಬದುಕಿನಲ್ಲಿ ಬದಲಾವಣೆ ತರುವಂಥದ್ದಾಗಿರಬೇಕು.

(ಸೌಜನ್ಯ ಪಿಯುಸಿಎಲ್ ಬುಲೆಟಿನ್, ಮೇ ೨೦೦೦)

# ಪು.ಲ : ಒಂದು ನೆನಪು

ಜಿ.ಪಿ. ದೇಶಪಾಂಡೆ
ಕನ್ನಡಕ್ಕೆ: ನಟರಾಜ ಹೊನ್ನವಳ್ಳಿ

ಅವರಿಗೆ ಆಗ ಎಂಭತ್ತೆರಡು; ಗುಣವಾಗದ ಖಾಯಿಲೆಯಿಂದ ಬಳಲುತ್ತಿದ್ದರೂ ಅವರ ಸಾವು ಸಹಜವಾಗಿ, ವಯಸ್ಸಿಗನುಗುಣವಾಗೇ ಇತ್ತು. ಆದರೂ ಮಹಾರಾಷ್ಟ್ರೀಯನ್ನರಲ್ಲೇ ಹೆಚ್ಚುಜನ ಅವರು 'ಅಮರ' ಎಂದು ತಿಳಿದುಕೊಂಡದ್ದೂ ಕೂಡ ಸತ್ಯವಾಗಿತ್ತು. ಪು.ಲ. (ಮರಾಠಿ ಅಂಕಿತ) ಎಂದು ಪ್ರೀತಿಯಿಂದ ಕರೆಯುತ್ತಿದ್ದ ಸಹಸ್ರಾರು ಜನ ಓದುಗರೂ ರಂಗಕರ್ಮಿಗಳೂ ಸಂಗೀತ ಪ್ರೇಮಿಗಳೂ ಅವರನ್ನು 'ಅನಾದಿ' ಮತ್ತು 'ಅನಂತ' ದೆಡೆಗೆ ಕೊಂಡೊಯ್ದಿದ್ದರು ( ಆದಿ ಮತ್ತು ಅಂತ್ಯ ವಿಲ್ಲದವರೆಂದು). ಸುಮಾರು ಜನಕ್ಕೆ ಅವರು ಎಲ್ಲಿ, ಹೇಗೆ ಹುಟ್ಟಿದರು ಎಂದೂ ಕೂಡ ಗೊತ್ತಿರಲಿಲ್ಲ. ಕೆಲವು ಜನ ಅವರು ಸಾಯುವುದೇ ಇಲ್ಲ ಎಂದೂ ಕೂಡಾ ನಂಬಿದ್ದರು. ಅದು ಘಟಿಸಿದೆ, ಅವರು ಈಗ ನಮ್ಮೊಡನೆ ಇಲ್ಲ.ಜನಪ್ರಿಯವಾದ 'ಅಹೇ ಅಪರಿಹಾರ್ಯ ತಾರಿ ಗಮಾತೇ ಇದಾಸ್' (ಅದು ಅನಿವಾರ್ಯ ಎಂದು ಗೊತ್ತಿದೆ ಆದರೆ ದುಃಖದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ) ಎಂಬ ಸಾಲನ್ನು ಒಂದು ಬದಲಾವಣೆಯಿಂದ ಬಳಸಬಹುದು.

ನಿಜವಾಗಿಯೂ ಅವರು ಏನು? ವಿದೂಷಕನೇ, ನಾಟಕಕಾರನೇ, ಸಿನೇಮಾ ನಿರ್ದೇಶಕನೇ, ನಟನೇ, ರಂಗಭೂಮಿಯ ನಿರ್ದೇಶಕನೇ, ಹಾರ್ಮೋನಿಯಂ ವಾದಕನೇ, ಮೀನಿನ ರುಚಿಗೆ ಮಾರುಹೋದಷ್ಟೇ ಸಹಜವಾಗಿ ಸಂಗೀತದಲ್ಲೂ ಅಪಾರ ಆಸಕ್ತಿ ಇರುವವನೇ ಅಥವಾ ಇದೆಲ್ಲವೂ ಒಬ್ಬನೇ ಆಗಿದ್ದವನೇ? ಭಗವದ್ಗೀತೆಯ ಹತ್ತನೇ ಅಧ್ಯಾಯದಲ್ಲಿ ಭಗವಂತ ತನ್ನನ್ನು ಹಲವಾರು ರೂಪಗಳಲ್ಲಿ ವರ್ಣಿಸಿಕೊಳ್ಳುತ್ತಾನೆ; ಅವನು ಪಾಂಡವರಲ್ಲಿ ಅರ್ಜುನ, ಕವಿಜನಗಳಲ್ಲಿ ಉಷಾನ, ಹೀಗೆ. ಈ ಅಧ್ಯಾಯವನ್ನು ವಿಭೂತಿಯೋಗ ಎಂದು ಕರೆಯುತ್ತಾರೆ. ಪು.ಲ. ರವರ ಹಲವಾರು ಅವತಾರಗಳನ್ನು ವರ್ಣಿಸಲು ಭಗವದ್ಗೀತೆಗೆ ಸಾದೃಶ್ಯವಿರುವ ಹೊಸ ಅಧ್ಯಾಯವೇ

ಬೇಕಾಗುತ್ತದೆ. ಆದರೆ ಅದು ಅತ್ಯಂತ ಕಷ್ಟವಾದ ಕೆಲಸ.

ಸಾವಿರದ ಒಂಬೈನೂರ ನಲವತ್ತಾರು ಅಥವಾ ಆ ಸರಿಸುಮಾರು ದಿವಸಗಳಲ್ಲಿ ಬರೋಡದಿಂದ ಪ್ರಕಟವಾಗುತ್ತಿದ್ದ 'ಅಭಿರುಚಿ' ಪತ್ರಿಕೆ ಪು.ಲ. ರವರ ಮೊದಲ ಬರಹಗಳನ್ನು ಪ್ರಕಟಿಸಿತು. ಅಲ್ಲಿಂದ ಐವತ್ತು ವರ್ಷಗಳವರೆಗೆ ಪು.ಲ. ನಿರಂತರವಾಗಿ ಬರೆಯುತ್ತಾ ಹೋದರು , ನಿಲ್ಲಿಸದೆ. ಅವರೇ ಅವರ ಬಗ್ಗೆ ನೋಡಿಕೊಂಡಿರುವ ಹಾಗೆ— ಸಂತರಾಮದಾಸ (೧೭ನೇ ಶತಮಾನ) ವಿನೋದ ಪ್ರವೃತ್ತಿಗೆ ವಿರುದ್ಧವಾಗಿ – ತಾವ್ಲಾ ಅವಾದೇ ವಿನೋದ (ತಿಳಿಗೇಡಿತನದ ಹಾಸ್ಯ) – ಎಂದು ಅಧಿಕೃತವಾದ ತೀರ್ಪು ನೀಡಿದನು . ಪು.ಲ. ಈ ಮಟ್ಟದ ಹಾಸ್ಯ ಪ್ರವೃತ್ತಿಯನ್ನು 'ರಸಿಕ' ನ ಮಟ್ಟಕ್ಕೇರಿಸಿದರು. 'ಬತಾತ್ಯಾಚೀ ಚಾಳ್', 'ವ್ಯಕ್ತಿ ಆಣೀ ವಲ್ಲೀ', (೧೯೬೫ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದೆ) 'ವಾರ್‍ಯಾವರ್ಚೀ ವರಾತ್', 'ಗುಣಗಾಯೀಣ್ ಅವಾದಿ', 'ಅಪೋರ್ವೈ' ಇನ್ನೂ ಮುಂತಾದವು ಇವರ ಪುಸ್ತಕಗಳು. ಒಂದೊಂದು ಪುಸ್ತಕಗಳಲ್ಲೂ ಹಲವಾರು ವಿಷಯಗಳಿವೆ. ಈ ಪುಸ್ತಕಗಳಲ್ಲಿ ಮೊದಲಿಂದ ಕಡೆಯವರೆಗೂ ನಲವತ್ತು - ಐವತ್ತರ ದಶಕದ ಮಹಾರಾಷ್ಟ್ರವೇ ಕಾಣಿಸುತ್ತದೆ. ಅವರು ಯೂರೋಪಿಗೆ ಹೋದರೂ (ಅಪೂರ್ವೈ ಪುಸ್ತಕದಲ್ಲಿ) ಇಡೀ ಮಹಾರಾಷ್ಟ್ರವೇ ಇವರ ಜೊತೆಹೋದಹಾಗಿದೆ. ಹಾಗಾದರೆ ಈ ಪುಸ್ತಕ ಏನು? ಯೂರೋಪಿನ ಬಗ್ಗಯೇ ಅಥವಾ ಕೆಳಮಧ್ಯಮ ವರ್ಗದ ಮಹಾರಾಷ್ಟ್ರೀಯನ್ನರ ಹಾಗೂ ಅವರ ಸಂಭ್ರಮ, ಉತ್ಸವ ಆಚರಣೆಗಳನ್ನು ಕುರಿತು ಅವರ ಪ್ರಪಂಚದ ದೃಷ್ಟಿಯೇ? ಅದೇನೆಂದು ಹೇಳಲು ಈಗ ಸಾಧ್ಯವಿಲ್ಲ. ನನಗೆ ತಿಳಿದುದರ ಮಟ್ಟಿಗೆ ಈ ಪುಸ್ತಕಗಳ ತುಂಬಾ ಅವರ ವಿನೋದ ಪ್ರವೃತ್ತಿ ಹಾಗೂ ಹರಿತ ದೃಷ್ಟಿಕೋನ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಬರಹಗಳ ಪ್ರಕಾರಗಳಲ್ಲೇ 'ಬತಾತ್ಯಾಚೀ ಚಾಳ್', ಒಂದು ಸಮರ್ಥ ಉದಾಹರಣೆ.

ಈ ಕಲ್ಪಿತವಾದ 'ಚಾಳ್' – ವಠಾರ – ಗಿರಿಗಾಂವ್‌ನ ಕೆಲವು ಭಾಗಗಳಲ್ಲಿವೆ. ಇದು ಹಲವಾರು ಜಾತಿಗಳ ಕೆಳಮಧ್ಯಮ ವರ್ಗದ ಮಹಾರಾಷ್ಟ್ರೀಯನ್ನರ ಪ್ರಪಂಚ. ಜೊತೆಗೆ ಅವರ ಸಣ್ಣತನಗಳೂ ಹಾಗೂ ಉದಾರತೆ, ಜಗಳಗಂಟಿತನ ಹಾಗೂ ಹೊಂದಿಕೊಳ್ಳುವ ಸಮುದಾಯಪ್ರಜ್ಞೆ, ಪರಸ್ಪರ ಕೊಡುಕೊಳ್ಳುವಿಕೆ ಹಾಗೂ ಅಸಹ್ಯವಾದ ವ್ಯಕ್ತಿತ್ವವಾದ, ಇವೆಲ್ಲವೂ ಇದೆ, ಜೊತೆಗೆ ಇನ್ನೂ ಏನೇನೋ. ಈ ಪುಸ್ತಕ 'ಚಾಳ್' ನಲ್ಲಿ ನಶಿಸುತ್ತಿರುವ ಬೋನ್ಸಾಯ್ ಥರದ ನಾಯಕನನ್ನೂ ಹಿಡಿದಿಡುತ್ತದೆ. ಐವತ್ತರ ದಶಕದಲ್ಲಿ ನಗರೀಕೃತ ಮಹಾರಾಷ್ಟ್ರೀಯನ್ನರು ಗಾಂಧಿಯನ್ನು ಮರೆತುಬಿಟ್ಟಿದ್ದರು. ಅವರು ಯಾವಾಗಲೂ ನಿಜವಾಗಿಯೂ ಜ್ಞಾಪಿಸಿಕೊಳ್ಳಲಾರರು. ಗಾಂಧಿಯನ್ನು ಹೋಲುವ ಅಲ್ಪಪ್ರಮಾಣದ ಗಾಂಧೀವಾದಿ



'ಚಾಳ್' ನಲ್ಲಿ ಹುಟ್ಟತೊಡಗಿದ. ಮುಂದೆ ಐವತ್ತರ ದಶಕದ ಮಧ್ಯಭಾಗದಲ್ಲಿ ಪು.ಲ. ದೇಶಪಾಂಡೆ ಅವರ ಮುಖ್ಯನಾಟಕ 'ತುಜೇ ಅಹೇ ತುಜಾಪಸೀ' ಯಲ್ಲಿ ಗಾಂಧಿ ಪೂರ್ಣ ಪ್ರಮಾಣದ ಪಾತ್ರವಾಗಿ ಹೊರ ಹೊಮ್ಮಿದರು. ಈ ನಾಟಕದಿಂದ 'ಚಾಳ್'ನ ವರೆಗೆ ಗಾಂಧಿ 'ಸಾಮಾನ್ಯ' ನಾಗಿ ಮತ್ತು 'ಅಣಕ'ವಾಗಿ ಚಿತ್ರಿತವಾದರು. ಆದರೆ ಈ ಎರಡೂ ಗಾಂಧಿಗಳು (ನಾಟಕ ಮತ್ತು ಚಾಳ್‌ನಲ್ಲಿ) ಸಂಬಂಧಿಗಳು. ಈ ಅನ್ಯೋನ್ಯ ರಕ್ತಸಂಬಂಧದ ದೃಷ್ಟಿಕೋನವೇ ಕೆಳಮಧ್ಯಮ ವರ್ಗದ ಮಹಾರಾಷ್ಟ್ರೀಯನ್ನರಲ್ಲಿ ಗಾಂಧಿಯನ್ನು ಜನಪ್ರಿಯಕೊಳಿಸಿತು. ಜನಪ್ರಿಯತೆ ಪು.ಲ. ರವರಲ್ಲಿತ್ತು. ಪ್ರಾಯಶಃ ಈ ಜನಪ್ರಿಯತೆಯೇ 'ಗಾಂಧೀವಾದ ಮತ್ತು ಗಾಂಧಿವಾದಿ' ಇವೆರಡನ್ನೂ ಅನ್ವೇಷಿಸಿಕೊಂಡಿರಬೇಕು – ಆಧುನಿಕ ಕಾವ್ಯ ಮತ್ತು ಕವಿಯಲ್ಲಿರುವಂತೆ. ಈ ಜನಪ್ರಿಯವಾದ ಇತಿಹಾಸದ ವಿರುದ್ಧ ಅವಹೇಳನವಾಗಲೀ, ದ್ವೇಷಿಸುವ ಗುಂಪನ್ನಾಗಲೀ ಪುಷ್ಟೀಕರಿಸಲಿಲ್ಲ; ತಮ್ಮ ಸಮಕಾಲೀನ ಲೇಖಕರಲ್ಲಾಗಿರುವಂತೆ. ಇದು ಅವರ ಬರಹಗಾರನಿಗೆ ಅವರೇ ಕೊಟ್ಟುಕೊಂಡಿದ್ದ ಸಮರ್ಪಣೆ ಎನ್ನಬಹುದು. ನಿಜವಾಗಿ, ಅವರಲ್ಲಿದ್ದ ಪ್ರದರ್ಶಕ ಈ ವ್ಯತ್ಯಾಸವನ್ನು ಸಮರ್ಥವಾಗಿ ಅರ್ಥೈಸಿ ಕೊಂಡಿದ್ದ. ಹಾಗೇ ಅವರು ಮಾರ್ಡೇಕರ್‌ರವರ ಕಾವ್ಯವನ್ನು ವಾಚಿಸಿ, ಚಿತ್ರಿಸಿದ ರೀತಿಯನ್ನು ಹಲವಾರು ವರ್ಷಗಳ ಕಾಲ ನೆನಪಿಸಿಕೊಳ್ಳುವ ಹಾಗೆ ಮಾಡಿದೆ, ಅಥವ ಮಾಡಿತ್ತು. ಕಾವ್ಯವನ್ನು ಸೂಕ್ಷ್ಮವಾಗಿ ವಾಚಿಸುವುದರ ಜೊತೆಗೇ ಆ ಕವಿಯನ್ನು ಕುರಿತ 'ವಿಡಂಬನೆ' ಯನ್ನು ಒಬ್ಬನಲ್ಲೇ ಕಾಣುವುದು ಅತ್ಯಂತ ಕಷ್ಟವಾದದ್ದು. ಒಂದು ಹಂತದಲ್ಲಿ ನೀವು ಯಾವುದನ್ನು ಕುರಿತು ಅಣಕ ಮಾಡುತ್ತಿರುತ್ತೀರೋ, ಇನ್ನೊಂದು ಹಂತದಲ್ಲಿ ಅದನ್ನೇ ತೀಕ್ಷ್ಣವಾಗಿ ಜನಗಳಿಗೆ ಅದರ ಶ್ರೇಷ್ಠತೆಯ ಕುರಿತಾಗಿಯೂ ಅರ್ಥೈಸುತ್ತಿರುತ್ತೀರ. ಒಬ್ಬ ವಿನೋದಗಾರ ಅಥವ ವಿದೂಷಕ ಶ್ರೇಷ್ಠವಾದುದನ್ನೂ, ಮತ್ತು ಇವತ್ತಿನ ಸದ್ಯದ ಸಾಮಾಜಿಕ ತುರ್ತನ್ನೂ ತರ್ಕಿಸುತ್ತಿರುತ್ತಾನೆ.

ಯಾಕೆ ಪು.ಲ. ಬರ್ನಾರ್ಡ್ ಷಾ ಮತ್ತು ಬ್ರೆಕ್ಟ್‌ನ ಕಡೆಗೆ ತಿರುಗಿದರು ಎಂಬುದನ್ನೂ ವಿವರಿಸಬೇಕಾಗುತ್ತದೆ. ಅವರನ್ನು ಅನುವಾದಿಸುವುದು ಅಥವಾ ರೂಪಾಂತರಿಸುವುದಷ್ಟೇ ಪು.ಲ.ರವರ ಸಂವೇದನೆಗೆ ಸಾಕಾಗುತ್ತಿರಲಿಲ್ಲ, ಬದಲಾಗಿ ಅವರಿಬ್ಬರನ್ನೂ ಪು.ಲ. ಅನುಸೃಷ್ಟಿಸಿದರು. ಇದರಿಂದ ಒಟ್ಟಂದದ ಫಲಿತಾಂಶವೆಂದರೆ 'ಷಾ' ಷಾ ಆಗಿ ಉಳಿಯಲಿಲ್ಲ; ಬ್ರೆಕ್ಟ್ ಕೂಡ ಅಷ್ಟೇ. ಅದು ಸರೀನಾ ಅಥವ ತಪ್ಪಾ? ಅದನ್ನು ಸದ್ಯಕ್ಕೆ ಹೇಳಲಾರೆ. ವಿಡಂಬಿಸುವುದಕ್ಕೆ ಹದಿನಾರನೇ ಶತಮಾನದ ಕಾವ್ಯವನ್ನೂ ಮತ್ತು ಅದರ 'ಚಾಕೂರಾಜ ಮ್ಯಾಕ್' ನಂಥ ಪ್ರಪಂಚವನ್ನೂ ಏತಕ್ಕೆ ಆಯ್ಕೆ ಮಾಡ್ಕೋತಾನೇ? ಈ ಪ್ರಶ್ನೆಗಳಿಗೆ ಉತ್ತರಿಸುವುದು ಬಹಳ ಕಷ್ಟ. ಅವರ ಈ

ಅನುಸೃಷ್ಟಿಯಿಂದಾಗಿ ನಾಟಕಕ್ಕಾದ ಶಕ್ತಿಯನ್ನು ಅಲ್ಲಗಳೆಯಲಾಗುವುದಿಲ್ಲ. ಅವೆಲ್ಲ ರಂಗಭೂಮಿಯ ಸೃಷ್ಟಿಗಳು. ಒಬ್ಬ ನಾಟಕಕಾರನಿಂದ ಇದಕ್ಕಿಂತಲೂ ಹೆಚ್ಚಿನದೇನನ್ನು ನಿರೀಕ್ಷಿಸ ಲಾಗುತ್ತದೆ.

ಸಂಗೀತ ಕುರಿತ ಅವರ ಸಂವೇದನೆ ನಿಜಕ್ಕೂ ಆಶ್ಚರ್ಯಕಾರಕವಾದದ್ದು. ಮಹಾರಾಷ್ಟ್ರೀಯರನ್ನು ಕುಮಾರಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್‌ರವರ ಸಂಗೀತದ ಬಗ್ಗೆ ತಿಳಿವು ಮೂಡಿಸಿ, ಸವಿಯುವಹಾಗೆ ಮಾಡಿದ್ದರ ಸಿಂಹಪಾಲು ಪು.ಲ. ಅವರಿಗೇ ಸೇರುತ್ತದೆ. ಇಂಥ ವಿಷಯಗಳಲ್ಲಿ ನೇರವಾದ ಹಾಗೂ ಸಾಂದರ್ಭಿಕ ಸಂಬಂಧಗಳನ್ನು ಸ್ಥಾಪಿಸಲು ಕಷ್ಟವಾಗುತ್ತದೆ. ಆದರೆ, ಕುಮಾರ ಗಂಧರ್ವ, ಮಲ್ಲಿಕಾರ್ಜುನ ಮನ್ಸೂರ್, ಕಿಶೋರಿ ಅಮೋನ್ಕರ್ ಮುಂತಾದವರನ್ನು ಕುರಿತ ಬರಹಗಳಿಂದಲೇ ಹಲವಾರು ಜನ ಕವಿಗಳು ಬಂದಿದ್ದು. ಅದೇನೇ ಇರಲಿ, ಹೆಚ್ಚು ಮುಖ್ಯವಾದದ್ದೆಂದರೆ, ಹೆಚ್ಚೂ ಕಮ್ಮಿ ಎಲ್ಲಾ ಬರಹಗಾರರು, ಪು.ಲ. ರವರು ಈ ಮೇಲಿನ ಸಂಗೀತಗಾರರನ್ನು ಕುರಿತು ಬರೆದ ಮೇಲೆಯೇ ಮಿಕ್ಕವರೆಲ್ಲ ಬರದದ್ದೂ ಎನ್ನುವುದು ಹೆಚ್ಚು ಸತ್ಯ. 'ಬಂದಿಶ್' ನ ಒಂದು ಸಾಲೇ ಇವರ ಕಾವ್ಯಸಂಪುಟಕ್ಕೆ ಹೆಸರಾಗಿ ಒದಗಿಬಂತು. ಇವೆಲ್ಲ ಏನು ತೋರಿಸುತ್ತದೆಂದರೆ, ಮಹಾರಾಷ್ಟ್ರೀಯನ್ನರು ಸಂಗೀತ ಸಂವೇದನೆಗೆ ಅರ್ಪಿಸಿಕೊಂಡ ಅಥವ ಅವರಿಗೆ ಆ ವಿಷಯದಲ್ಲಿ ಜ್ಞಾನೋದಯ ಮೂಡಿದಕಾಲವಾಗಿ ಕಾಣಿಸುತ್ತದೆ. ಈ ತರಹದ ಜ್ಞಾನೋದಯ ಮಾಡಿದವರ ಬಗ್ಗೆ ಯೋಚಿಸಿದ ಕೂಡಲೇ ಕೇಶವರಾವ್ ಭೋಲೇ ಮನಸ್ಸಿಗೆ ಬಂದುಬಿಡುತ್ತಾರೆ. ಅವರು ಮೊದಲಿಗರಾದರೆ ಪು.ಲ. ಎರಡನೆಯವರು ಅಥವಾ ನಂತರದ ಸ್ಥಾನ.

ಮರಾಠಿ ಸಿನೇಮಾದಲ್ಲಿ 'ಗುಲಾಚಾಗಣಪತಿ' ಉತ್ಕೃಷ್ಟವಾದ ಸಿನೇಮಾ ಇರಬಹುದು. ಆದರೆ ದುರದೃಷ್ಟವಶಾತ್ ಈ ಸಿನೇಮಾ ವಿಮರ್ಶಾ ಪ್ರಶಂಸೆಯನ್ನು ಪಡೆದುಕೊಳ್ಳಲಿಲ್ಲ. 'ತುಕಾರಾಮ್' (ಪ್ರಭಾತ್ ಕಂಪನಿಯವರು ತೆಗೆದ ಸಿನೇಮಾ) ನಂಥ ಸಿನೇಮಾದ ಮೇಲೆ ಪುಸ್ತಕಗಳೂ, ಒಂದಷ್ಟು ಒಳ್ಳೆಯ ಲೇಖನಗಳೂ ಬಂದಿವೆ. ಆದರೆ ನಾನು ನೋಡಿದ ಪು.ಲ.ರವರ ಸಿನೇಮಾದಷ್ಟು ಅತ್ಯುತ್ತಮವಾಗಿಲ್ಲ. ಪು.ಲ. ರವರ ಸಿನೇಮಾದಲ್ಲಿ ಎಲ್ಲವೂ ಅವರೇ ಆಗಿದ್ದರು – ಕಥೆ, ಚಿತ್ರಕಥೆ, ಸಂಭಾಷಣೆ, ಸಂಗೀತ, ನಿರ್ದೇಶನ ಹಾಗೂ ಮುಖ್ಯವಾದ ಪಾತ್ರ ಎಲ್ಲವೂ ಪು.ಲ. ದೇಶಪಾಂಡೆ ಯಿಂದಲೇ ಆಗಿದ್ದವು. ಈ ಸಿನೇಮಾ ಅತ್ಯುತ್ತಮವಾಗಿರುವುದಕ್ಕೆ ಪು.ಲ. ರವರ ಬಹುಮುಖತ್ವವಷ್ಟೇ ಅಲ್ಲ ಬದಲಾಗಿ ಅವರ ಎಂದಿನ ಓರೆಕೋರೆಯಾಗಿರುವ ಕೆಳಮಧ್ಯಮ ವರ್ಗದ ಕನಸುಗಳೂ ಕೂಡ ಅದರೊಳಗಿತ್ತು ಎಂಬುದೂ ಮುಖ್ಯ.



ಮಾರ್ಡೇಕರ್ ರವರ ಕಾವ್ಯ (ಸರಿಸುಮಾರು ಪು.ಲ.ರ ಸಿನೇಮಾ ಬಂದ ಕಾಲದಲ್ಲೇ) 'ಗಣಪತಿವಾಣಿ' ಯಲ್ಲಿ ಒಬ್ಬ ಸಣ್ಣ ವ್ಯಾಪಾರಿಯ – ಒಣಗಿದ ಹಣ್ಣು, ಸಾಂಬಾರು ಜೀನಸುಗಳನ್ನು ಮಾರುವವ – ಚಿತ್ರಬರುತ್ತದೆ. ಅವನು ಜೀರ್ಣಾವಸ್ಥೆಗೆ ಬಂದಿರುವ ತನ್ನ ಮನೆಯ ನೆಲದ ರಿಪೇರಿಯ ಬಗ್ಗೆ ಕನಸುಕಾಣುತ್ತಿರುತ್ತಾನೆ. ಸಿನೇಮಾ ಮತ್ತು ಕಾವ್ಯದ ವ್ಯಾಪ್ತಿಯ ದೃಷ್ಟಿಯಿಂದ ಎರಡಕ್ಕೂ ಸಮಾನತೆಯಿದೆ. ಅದು ಬಿಟ್ಟರೆ ಎರಡೂ ಬೇರೆಯದೇ ರೀತಿಯದು. ಆದರೆ ಎರಡೂ (ಸಿನೇಮಾ ಮತ್ತು ಕಾವ್ಯ) ವ್ಯಕ್ತಿಯನ್ನು ಭಾವನಾತ್ಮಕ ಪ್ರಪಂಚದಿಂದ ಹೊರಗೆಸೆಯುವ ಕ್ಷಣವನ್ನೂ ಜೊತೆಗೆ ಅವನಿಗೆ ಯಾವುದೇ ರೀತಿಯ ಕಿಂಚಿತ್ ಭವಿಷ್ಯ ಕೂಡ ಇಲ್ಲದ ಸ್ಥಿತಿಯನ್ನೂ ಹಿಡಿದಿಡುತ್ತದೆ. ಅಂತೆಯೇ 'ಗಣಪತಿವಾಣಿ' ಯನ್ನು ನಿರೀಕ್ಷಿಸುವ ಧೈರ್ಯದ ಹೊಸ ಪ್ರಪಂಚವೂ ಇಲ್ಲ, ಅವನು ಎಂದಿನಿಂದಲೂ ಕಾಯುತ್ತಲೇ ಕೂತಿದ್ದಾನೆ. ಕನಿಷ್ಟ ಪಕ್ಷ 'ಗಾಡೋ' (Godot)ಗಾಗಿ ಕೂಡಾ ಅಲ್ಲ.

ಪು.ಲ.ರವರಲ್ಲಿ ಹಿಂದಿನದರ ನೆನಪು – ಸ್ಮೃತಿ – ಗಾಢವಾಗಿದೆ. ಇವರ ಸಮಕಾಲೀನ ಬರಹಗಾರರಲ್ಲಿ ಅನೇಕರು ನಲವತ್ತು - ಐವತ್ತರ ದಶಕದಲ್ಲಿನ ಮೌಲ್ಯವನ್ನೂ, ಪು.ಲ.ರವರ ತೊಡಗಿಕೊಳ್ಳುವ ಗುಣವನ್ನೂ ಅರ್ಥಮಾಡಿ ಕೊಳ್ಳಲಾರರು. ನಾನೂ ಸಹ ಅರ್ಥಮಾಡಿಕೊಳ್ಳಲಾರೆ. ಆದರೂ ಅವರ ಬರಹಗಳು ಕೆಲವು ಕಾಲ, ಕೆಲವು ಕಾರಣಗಳಿಗೆ ನನ್ನನ್ನು ಪ್ರಚೋದಿಸಿದ್ದುದು ಉಂಟು. ಅದನ್ನೀಗ ವಿಶದೀಕರಿಸಲಾರೆ. ಆದರೆ ಒಬ್ಬ ಬರಹಗಾರ ಇದಕ್ಕಿಂತ ಹೆಚ್ಚಿಗೆ ಇನ್ನೇನನ್ನು ಅಪೇಕ್ಷೆ ಪಡುತ್ತಾನೆ ಅಥವ ಪಡೆಯುತ್ತಾನೆ.

ಅವರೊಂದು ಮೂರ್ತಿಯಾಗಿದ್ದರು. ಮೂರ್ತಿತ್ವದ ಸ್ಥಾನ-ಮಾನಕ್ಕೇರಲು 'ವಿದೂಷಕ' ರಲ್ಲೇನಿರುತ್ತದೆ ಎಂದು ನಾನು ಯಾವಾಗಲೂ ಅಚ್ಚರಿಪಟ್ಟಿದ್ದೇನೆ. ನಮಗದು ಗೊತ್ತಾಗುವುದು ಸಾಧ್ಯವಿಲ್ಲ.

ಮಹಾಭಾರತದ ಸೌಪ್ತಿಕ ಪರ್ವದಲ್ಲಿ ಒಂದು ಸಾಲಿದೆ : 'ವಿಧಿಗಿಂತ ಮನುಷ್ಯನ ಸಾಧನೆ ದೊಡ್ಡದೇನಲ್ಲ' ಎಂದು. ಹೆಚ್ಚು ಜನ ಮಹಾರಾಷ್ಟ್ರೀಯನ್ನರು ಪು.ಲ. ತರಹದವರ ಬರವಣಿಗೆಯ ಬಗ್ಗೆ – 'ನೋಡಿ, ಸಾಧನೆ ವಿಧಿಗಿಂತಲೂ ದೊಡ್ಡದು' ಎಂದು ವಾದಿಸುತ್ತಾರೆ. ಸೌಪ್ತಿಕ ಪರ್ವಕ್ಕೆ ನಿಶ್ಚಿತವಾಗಿ ವಸ್ತುತಃ ಮಾಡುವ ಮೂರ್ತಿಯ ಬಗ್ಗೆ ಗೊತ್ತೇ ಇಲ್ಲ.

(ಕೃಪೆ: ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ)

# ವಸಂತ ಪಯಣದಲ್ಲಿ 'ಮಾಸ್ತಿ' ಮತ್ತು 'ನಾನು'

ಚನ್ನಕೇಶವ

ಕೆ.ವಿ.ಅಕ್ಷರ ಮತ್ತು ನಾನು ಇಬ್ಬರೂ ಸೇರಿ ಗೋಪಾಲಕೃಷ್ಣ ಅಡಿಗರ ಕಾವ್ಯವನ್ನು ಒಂದು ರಂಗಸಾಧ್ಯತೆಯ ಮೂಲಕ ಏಕವ್ಯಕ್ತಿ ರಂಗ ಪ್ರಸ್ತುತಿಯನ್ನಾಗಿ ಸಿದ್ಧಪಡಿಸಿದ ಮೇಲೆ ಹನ್ನೆರಡು ಪ್ರದರ್ಶನಗಳನ್ನು ನೀಡಿದೆವು. ನಂತರ ನಾಟಕಕ್ಕೆ ಸಂಗೀತ ಒದಗಿಸುತಿದ್ದ ಶ್ರೀಧರ ಮತ್ತು ಬೆಳಕಿನ ನಿರ್ವಹಣೆಯನ್ನು ಮಾಡುತ್ತಿದ್ದ ಅನಿಲಕುಮಾರ ಇಬ್ಬರೂ ೯೯ರ ನೀನಾಸಮ್ ತಿರುಗಾಟತಂಡದಲ್ಲಿದ್ದುದರಿಂದ ಮತ್ತೆ ಮತ್ತೆ ಪ್ರದರ್ಶನ ನೀಡಲು ಸಾಧ್ಯವಾಗಿರಲಿಲ್ಲ. ಹಾಗಾಗಿ ತಿರುಗಾಟದ ಪ್ರದರ್ಶನಗಳ ಜೊತೆಗೇ ಕೆಲವು ಊರುಗಳಲ್ಲಿ ಪ್ರದರ್ಶನ ನೀಡಿದ್ದೆವು. ನಂತರ ಪ್ರಸ್ತುತಿಯ ಎಲ್ಲಾ ಸಂಗೀತದ ಭಾಗಗಳನ್ನು ಧ್ವನಿಮುದ್ರಿಸಿಕೊಂಡು ನಾನೊಬ್ಬನೇ ಮತ್ತು ಇನ್ನೊಬ್ಬ ಸಹಾಯಕರ ನೆರವಿನಿಂದ ಪ್ರದರ್ಶನವನ್ನು ಮಾಡಬಹುದಾಗಿದ್ದರೂ (ಹಾಗೆ ಒಂದೆರಡು ಪ್ರದರ್ಶನ ಮಾಡಿದ್ದೆ ಕೂಡ) ಹಾಗೆ ಮಾಡಲು ಕಷ್ಟಸಾಧ್ಯ ವಾಗುತ್ತಿತ್ತು. ಕಾರಣವು ತಾಂತ್ರಿಕವಾದ ಸಮಸ್ಯೆಯದ್ದೇ ಎಂಬಂತೆ ಕಂಡರೂ ಕೇವಲ ಅದಷ್ಟೆ ಆಗಿರಲಿಲ್ಲ. ಅಭಿನಯ ಮಾಡುತ್ತಿದ್ದದ್ದು ನಾನೊಬ್ಬನೇ ಆಗಿದ್ದರೂ ಬಹುಪಾಲು ಪ್ರದರ್ಶನಗಳಲ್ಲಿ ಶ್ರೀಧರ, ಅನಿಲ, ಅಚ್ಯುತ, ದಿಗ್ವಿಜಯ, ಜೋಸೆಫ್ ಅಥವಾ ನರೇಶ ಹೀಗೆ ಮೂರು ಜನರಂತೂ ಖಂಡಿತಾ ಜೊತೆಗಿದ್ದು ಕೆಲಸ ಮಾಡುತ್ತಿದ್ದುದರಿಂದ 'ನಾನು' ಒಂದು ಚಿಕ್ಕ ಮತ್ತು ಬಹಳ ಆತ್ಮೀಯವಾದ 'ತಂಡ'ವಾಗಿ ಬೆಳೆಯುತ್ತಿತ್ತು. ನಾವುಗಳು ಒಟ್ಟಾಗಿ ಕೆಲಸ ಮಾಡುವಾಗ, ಪ್ರದರ್ಶನ ಮುಗಿಸಿ ಒಂದೆಡೆ ಕುಳಿತು ಊಟ ಮಾಡುವಾಗ – ಮುಂದೆ ಇದೇರೀತಿ ಒಂದು ಚಿಕ್ಕ ತಂಡವಾಗಿ ಕೆಲಸ ಮಾಡುವ, ಇಡಿಯ ನಮ್ಮ ಶಕ್ತಿಯನ್ನು, ಆಸಕ್ತಿಯನ್ನು ನಾಟಕಾಭಿನಯಕ್ಕೆ ಕೊಟ್ಟುಕೊಳ್ಳುವ, ಶ್ರಮವನ್ನು ಹಂಚಿಕೊಳ್ಳುವ ಆಕಾಂಕ್ಷೆಯೊಂದು ನಮ್ಮೊಳಗಿದ್ದದ್ದು ನಮ್ಮ ಸಂತೋಷದ ಮಾತುಗಳಲ್ಲಿ ಆಗಾಗ ಹೊರಬರುತ್ತಿತ್ತು. ಹಾಗಾಗಿ 'ಏಕವ್ಯಕ್ತಿ ಪ್ರದರ್ಶನ' ಕೂಡ ಮೂರ್ನಾಲ್ಕು ಜನರ ಒಂದು ತಂಡದ ಪ್ರದರ್ಶನವೇ ಆಗಿತ್ತು. ಹಾಗಾಗಿ ಮೂಲ



ತಂಡವಿಲ್ಲದೆ ಪ್ರದರ್ಶನ ಕೊಡುವುದು ಏನನ್ನೋ ಕಳೆದುಕೊಂಡಂತೆನಿಸುತ್ತಿತ್ತು.

೯೯ರ ತಿರುಗಾಟ ಮುಗಿಯಿತು. ಶ್ರೀಧರನ ಸಂಗೀತದೊಂದಿಗೇ ಅನಿಲನ ಬೆಳಕಿನ ವಿನ್ಯಾಸದೊಂದಿಗೇ ಆ ಪ್ರದರ್ಶನವನ್ನು ತಿಪಟೂರಿನಲ್ಲಿ ನೀಡುವ ಅವಕಾಶ ಬಂತು. ಆ ವೇಳೆಗೆ ನಟರಾಜ ಹೊನ್ನವಳ್ಳಿಯವರು ತಿಪಟೂರಿನ ಪ್ರೌಢಿಯೂ ತಂಡದ ಐದು ಜನ ನಟ-ನಟಿಯರುಗಳಿಗೆ ದಿ.ಮಾಸ್ತಿವೆಂಕಟೇಶ ಅಯ್ಯಂಗಾರರ ಮೂರು ಪ್ರಮುಖ ಕಥೆಗಳಾದ 'ವೆಂಕಟಶಾಮಿಯ ಪ್ರಣಯ, ಜ್ಯೋಗ್ಯೋರ ಅಂಜಪ್ಪನ ಕೋಳಿಕಥೆ ಮತ್ತು ವೆಂಕಟಿಗನ ಹೆಂಡತಿ' ಇವುಗಳನ್ನು ರಂಗದಮೇಲೆ ಆಡಲಾಗುವ ವಾಚಿಕ ವಿನ್ಯಾಸ 'ಮಾಸ್ತಿಕಥೆ-ಮೂರು' ಪ್ರದರ್ಶನವನ್ನು ಸಿದ್ಧಪಡಿಸಿ ಕೆಲವೆಡೆ ಪ್ರದರ್ಶನ ನೀಡಿದ್ದರು. ಈ ಎರಡೂ ಪ್ರದರ್ಶನಗಳನ್ನು ಸೇರಿಸಿ ಒಟ್ಟು ನಾಲ್ಕು ಪ್ರದರ್ಶನಗಳನ್ನು ತಿಪಟೂರಿನಲ್ಲಿ ನೀಡಲು ನಿರ್ಧರಿಸಿದೆವು.

'ಮಾಸ್ತಿಕಥೆ-ಮೂರು' ಮತ್ತು 'ನಾನು' ಪ್ರದರ್ಶನಗಳು ತಿಪಟೂರಿನಲ್ಲಿ ನಡೆಯುವ ಆ ನಾಲ್ಕು ದಿನಗಳಲ್ಲಿ ನೀನಾಸಮ್ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದ ಸುಮಾರು ಹದಿನೈದು ಜನ ನಾವು ಗೆಳೆಯ-ಗೆಳತಿಯರು, ಅಲ್ಲಿ ಅಕಸ್ಮಾತ್ತಾಗಿ ಕಲೆತಿದ್ದೆವು. ಇದು ನಮ್ಮ ಆ ಪ್ರದರ್ಶನಗಳಿಗೆ ಒಂದು ವಿಶೇಷ ಸ್ಫೂರ್ತಿಯನ್ನು ನೀಡಿದ್ದು , ಆ ಪಡೆದ ಸ್ಫೂರ್ತಿ ಈ ಎರಡೂ ನಾಟಕಗಳ ಪ್ರತ್ಯೇಕ ತಂಡಗಳು ಒಂದು ತಂಡವಾಗಿ ಪ್ರವಾಸ ಕೈಗೊಳ್ಳಲು ಸಹಾಯಕವಾಯ್ತು. ಪ್ರದರ್ಶನ ಮುಗಿಯುವ ವೇಳೆಗಾಗಲೇ ಎರಡೂ ಪ್ರಸ್ತುತಿಗಳನ್ನು ಸೇರಿಸಿ ಹತ್ತುದಿನಗಳ ಪ್ರವಾಸ ಮಾಡಲು ನಿರ್ಧರಿಸಿದೆವು. ಆ ಹತ್ತುದಿನಗಳು ಕಡೆಗೆ ಇಪ್ಪತ್ತುದಿನಗಳಾದವು – ಹೀಗೆ 'ವಸಂತ ಪಯಣ'ವಾಯಿತು.

'ವಸಂತ ಪಯಣ'ದ ಬಗ್ಗೆ ಇದಿಷ್ಟೆ ಹೇಳುವುದು ನನ್ನ ಉದ್ದೇಶವಲ್ಲ. ಇಷ್ಟೇ ಹೇಳುವುದಾಗಿದ್ದಿದ್ದರೆ ನಾನು ಹೀಗೆ ಬರೆದುಕೊಳ್ಳುವ ಅಗತ್ಯವೇ ಇರಲಿಲ್ಲ. ಬೇರೆ ಬೇರೆ ಕಾರಣಗಳಿಗೆ ಸಿದ್ಧಪಡಿಸಲಾಗಿದ್ದ ಈ ಪ್ರಸ್ತುತಿಗಳನ್ನು ಕೇವಲ ಪ್ರದರ್ಶನ ಮಾಡುವ ತಂಡ ಮಾತ್ರವಾಗಿ 'ವಸಂತ ಪಯಣ' ಆದದ್ದು ಅನ್ನಿಸುತ್ತಿದ್ದರೆ, ಅದು ಅಲ್ಲ. ಅದು ಕೇವಲ ಈ ಪ್ರದರ್ಶನಗಳ ಕಾರಣಕ್ಕಾಗಿಯೇ ಹೊರಟಿದ್ದ ತಂಡಮಾತ್ರವೂ ಅಲ್ಲ. ಈ ಪ್ರದರ್ಶನಗಳಿಗೆ ನಮ್ಮ ಸಾಮರ್ಥ್ಯವನ್ನೆಲ್ಲಾ ಬಳಸಿ, ವೃತ್ತಿನಿಷ್ಠ ಶಿಸ್ತಿನಿಂದ ಪ್ರದರ್ಶನಗಳನ್ನು ನೀಡಲೇಬೇಕೆಂಬುದೂ ನಮ್ಮ ಧ್ಯೇಯವಾಗಿದ್ದಿತ್ತು. ಅದಲ್ಲದೆ, ಅಷ್ಟೇ ಮುಖ್ಯವಾಗಿ – ನಾವು ಎಂಟು ಜನ ನಟ-ನಟಿಯರು ರಂಗಭೂಮಿಯಲ್ಲಿ ಕೆಲಸ ಮಾಡುತ್ತಿರುವವರಾಗಿ, ಮತ್ತೂ ಅದರಲ್ಲೆ ಕೆಲಸಮಾಡುವ ನೈತಿಕ ಮತ್ತು ಆರ್ಥಿಕವಾದ ಬೆಂಬಲ, ಚೈತನ್ಯವನ್ನು ಸ್ವತಃ ಕಂಡುಕೊಳ್ಳಬೇಕಾಗಿರುವುದು. ತಂಡದ

ಅಷ್ಟೂ ಸದಸ್ಯರು ನಾವು ನೀನಾಸಮ್ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿಯನ್ನು ಪಡೆದಿರುವವರು. ಮತ್ತು ನೀನಾಸಮ್ ತಿರುಗಾಟಗಳಲ್ಲಿ ಹಲವಾರು ವರ್ಷಗಳಿಂದ ನಟರಾಗಿ, ಸಂಗೀತ, ಬೆಳಕು ಹಾಗೂ ವಿನ್ಯಾಸದ ವಿಭಾಗಗಳಲ್ಲಿ ಕೆಲಸಮಾಡಿದ ಅನುಭವ ಹೊಂದಿರುವವರು; ಈಗಲೂ ಬೇರೆ ಬೇರೆ ಊರುಗಳಲ್ಲಿ, ಬೇರೆ ಬೇರೆ ಸಂಸ್ಥೆಗಳೊಡನೆ ಪ್ರಮುಖವಾಗಿ ರಂಗಭೂಮಿಯ ಕೆಲಸವನ್ನು ಮಾಡುತ್ತಿರುವವರು. ನಿಜಕ್ಕೂ ಅದನ್ನೇ ಮಾಡಬೇಕೆಂದಿರುವವರು.

ಯಾವುದೇ ಸರ್ಕಾರಿ ಅಥವಾ ಇತರ ಸಾಂಸ್ಥಿಕ ಸವಲತ್ತುಗಳಿಗೆ ಹೆಚ್ಚು ಅವಲಂಬಿತನಾಗದೆ ಕೇವಲ ರಂಗಭೂಮಿಯ ಕೆಲಸದಲ್ಲಿ ಮಾತ್ರ ಶಿಸ್ತಿನಿಂದ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಕೆಲಸ ಮಾಡಬೇಕೆನ್ನುವವನಿಗೆ; ಪ್ರಸ್ತುತ ನಮ್ಮ ವ್ಯವಸ್ಥೆಯಲ್ಲಿ ನಾನಾ ಸಮಸ್ಯೆಗಳಿರುವುದು ನಿಜ, ಆದರೆ – ಅದು ಅಸಾಧ್ಯವಾದದ್ದೇನೂ ಖಂಡಿತಾ ಅಲ್ಲ. ಹಾಗೆ ಕೆಲಸಮಾಡುತ್ತಿರುವ ಅನೇಕರು ನಮ್ಮೊಳಗಿದ್ದಾರೆ. ಹಾಗೆ ಇರಬೇಕೆನ್ನುವವನಿಗೆ ವಿಶೇಷವಾದ ಎದೆಗಾರಿಕೆ, ಆತ್ಮಸ್ಥೈರ್ಯ ಇರಬೇಕೆನ್ನುವುದನ್ನು ಒಪ್ಪಿಕೊಂಡು ಇದನ್ನು ಮುಂದುವರಿಸುತ್ತೇನೆ.

ನಾನು ೧೯೮೪ರ ತಿರುಗಾಟ ತಂಡದಲ್ಲಿ ನಟನಾಗಿ ಪ್ರವಾಸದಲ್ಲಿದ್ದಾಗ – ಬಿಡುವಿನ ವೇಳೆಗಳಲ್ಲಿ ನಾನು ಮತ್ತು ಜೊತೆಗೆ ಕೆಲವು ಸ್ನೇಹಿತರುಗಳು ಸೇರಿಕೊಂಡು ತಿರುಗಾಟದ ನಂತರ ಯಾರ್‍ಯಾರು ಏನೇನು ಮಾಡುತ್ತಾರೆ ಮತ್ತು ರಂಗಭೂಮಿಯಲ್ಲೇ ಕೆಲಸ ಮಾಡುವುದಿದ್ದರೆ ಎಲ್ಲಿಂದ? ಹೇಗೆ? ಮತ್ತು ಯಾಕೆ ಕೆಲಸಮಾಡ ಬೇಕೆಂಬುದರ ಬಗ್ಗೆ ಬಹಳಷ್ಟು ಗೊಂದಲ, ಅನಿಸಿಕೆಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುತ್ತಿದ್ದೆವು. ಅವುಗಳಲ್ಲಿ ಹೆಚ್ಚು ಕಡಿಮೆ ಒಂದು ತಲೆಮಾರಿನವರುಗಳಾದ ನಾವು ಒಂದೆಡೆ ಸೇರಿ ಹೇಗೆ ನಾಟಕದ ಕೆಲಸ ಮಾಡಬೇಕೆಂಬ ಜಿಜ್ಞಾಸೆ ನಮ್ಮೆಲ್ಲರಲ್ಲೂ ಇತ್ತು. ಆದರೆ ರಂಗಭೂಮಿಯಲ್ಲಿ ಈಗಿನ್ನೂ ಎಲ್ಲವನ್ನೂ ಕಾಣುತ್ತಿರುವ, ಆದರೆ ಎಲ್ಲ ಹೊಸ ಹೊಸದಾದದ್ದನ್ನು ನಿರ್ಮಿಸಬೇಕೆಂದುಕೊಳ್ಳುವ ನಮಗೆ, ನಾವಿನ್ನೂ ನಮ್ಮ ನಮ್ಮ ಕಾರ್ಯಕ್ಷೇತ್ರಗಳಲ್ಲಿ ಅಧ್ಯಯನದಿಂದ, ಅನುಭವದಿಂದ ಬಹಳಷ್ಟು ಅರಿವನ್ನು ಪಡೆಯಬೇಕಾಗಿದೆ ಎನ್ನುವುದು ಅಷ್ಟೊಂದು ನಿಖರವಾಗಿ ಗೊತ್ತಾಗುತ್ತಲೇ ಇರಲಿಲ್ಲ. ಈಗಲೂ ನಾವು ಬಹಳಷ್ಟು ಮಂದಿ ಯುವಕ-ಯುವತಿಯರು ರಂಗಭೂಮಿಯಲ್ಲಿ ಕೆಲಸ ಮಾಡುವವರಾಗಿ ನಮ್ಮ 'ನಿರ್ದಿಷ್ಟ ಕಾರ್ಯಕ್ಷೇತ್ರ' ಯಾವುದೆಂದು ಗುರುತಿಸಿಕೊಳ್ಳುವುದು ಬಹಳ ಅಗತ್ಯ. ಮತ್ತು ಅದಕ್ಕೆ ಬೇಕಾದ ಅಧ್ಯಯನ ಹಾಗೂ ಅಭ್ಯಾಸದ ಕೊರತೆಯನ್ನು ತುಂಬಿಕೊಳ್ಳುತ್ತಾ ಹೋಗುವುದು ಅನಿವಾರ್ಯ.

ನಾನು ತಿರುಗಾಟದಲ್ಲಿದ್ದಾಗ, ತಿಪಟೂರಿನ ಮಿತ್ರರೊಟ್ಟಿಗಿದ್ದಾಗ ಮತ್ತು 'ನಾನು'



ಪ್ರದರ್ಶನಗಳನ್ನು ಮಾಡುತ್ತಿದ್ದ ವೇಳೆಗಳಲ್ಲಿ ನನ್ನ ಜೊತೆಯವರೊಟ್ಟಿಗೆ ಆಗಾಗ ಮನಸ್ಸಿನಲ್ಲಿದ್ದದ್ದನ್ನ ಹಂಚಿಕೊಂಡದ್ದರ ಮೊತ್ತ– ನಾವು ಎಂಟು ಜನ ಸೇರಿ 'ವಸಂತ ಪಯಣ' ಮಾಡಲು ಸಾಧ್ಯವಾಗಿದೆಯೆಂದೇ ನನ್ನ ಭಾವನೆ.

'ಮಾಸ್ತಿಕಥೆ-ಮೂರು' ಪ್ರಯೋಗದಲ್ಲಿ ಮೊದಲು ಉಗಮಶ್ರೀನಿವಾಸ್, ಮಂಜುನಾಥ ಪಿ., ಸುಷುಮಾ ಜಿ.ಕೆ., ಹಳ್ಳಿಸುರೇಶ್, ಮಲ್ಲಿಕಾರ್ಜುನ ಮತಿಘಟ್ಟ, ಬೆಳಕಿನ ವ್ಯವಸ್ಥೆಗಾಗಿ ಪ್ರದೀಪ್.ಬಿ.ಇ.ಇದ್ದರು. 'ವಸಂತ ಪಯಣ'ಕ್ಕಾಗಿ ತಾಲೀಮು ನಡೆಸುವ ಹೊತ್ತಿಗೆ ತಂಡದಲ್ಲಿ ಕೊಂಚ ಮಾರ್ಪಾಟಾಗಿ ಅಚ್ಯುತಕುಮಾರ ಮತ್ತು ಅನಿಲಕುಮಾರ ಸೇರ್ಪಡೆಯಾದರು.

ಪಯಣಕ್ಕೆ ಮೊದಲು ನಿರ್ದೇಶಕ ರಘುನಂದನ ಅವರ ನಿರ್ದೇಶನದ ಮೂರು ದಿನಗಳ ಕಾಲ ಏರ್ಪಡಿಸಲಾಗಿದ್ದ ಶಿಬಿರದಲ್ಲಿ– ವಿಶೇಷವಾಗಿ ನಾವು ಎಂಟು ಜನರಲ್ಲಿ ಇರುವ ನಟನೆಯ ಪ್ರಮುಖ ಸಮಸ್ಯೆಗಳು, ಅದರ ಕಾರಣಗಳನ್ನು ಆಧರಿಸಿ ನಟನೆಯ-ನಟರ ಮೂಲಭೂತ ತಯಾರಿಯ ಕುರಿತು ಪ್ರಾಯೋಗಿಕವಾಗಿ ಪಯಣಕ್ಕೆ ಪೂರ್ವ ತಯಾರಿಯನ್ನು ಮಾಡಿಕೊಂಡೆವು.

ನಮ್ಮ ಎರಡು ಪ್ರದರ್ಶನಗಳು ತಲಾ ಐವತ್ತೈದು ನಿಮಿಷಗಳ ಅವಧಿಯುಳ್ಳವಾಗಿದ್ದು, ಹತ್ತು ನಿಮಿಷಗಳ ವಿರಾಮವೂ ಸೇರಿ ಎರಡು ಗಂಟೆಗಳ ಪ್ರದರ್ಶನ ಆದಾಯ್ತು. ನಾಟಕ ಆಡಿಸುವವರು ಎರಡೂ ಪ್ರದರ್ಶನಗಳು ಸೇರಿ ೩೫೦೦-೦೦ರೂಗಳ ಸಹಾಯಧನ, ಪ್ರದರ್ಶನಕ್ಕೆ ಬೇಕಾದ ಜಾಗದ ವ್ಯವಸ್ಥೆ ಮತ್ತು ಒಂದು ರಾತ್ರಿ ನಾವು ಉಳಿಯುವ ವ್ಯವಸ್ಥೆಯನ್ನು ಮಾಡಬೇಕಿತ್ತು. ಉಳಿದ ಬೆಳಕಿನ, ಮತ್ತಿತರ ಎಲ್ಲವನ್ನೂ ನಾವೇ ಕೊಂಡೊಯ್ದಿದ್ದೆವು. ವಸಂತ ಪಯಣವು ಕೇವಲ ತುಮಕೂರು, ಕೋಲಾರ, ಬೆಂಗಳೂರು, ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಿಗಷ್ಟೇ ಸೀಮಿತವಾಗಿತ್ತು. ಪ್ರಾರಂಭದ ನಮ್ಮ ಒಟ್ಟೂ ವ್ಯವಸ್ಥೆಯಲ್ಲಿನ ಯಾವುದೇ ತೊಂದರೆಗಳ ಮಧ್ಯೆ ಪ್ರದರ್ಶನದ ಗುಣಮಟ್ಟ ಕುಂಠಿತವಾಗಬಾರದೆನ್ನುವುದು ನಮ್ಮ ಮಾರ್ಗವಾಗಿತ್ತು. ಜೊತೆಗೆ ಮೊದಲ ಬಾರಿಗೆ ನಾಟಕದಲ್ಲಿ ನಾವುಗಳೇ ಅಭಿನಯಿಸುವವರಾಗಿ ಇಡಿಯ ಜವಾಬ್ದಾರಿಯನ್ನೂ ಸಂಪೂರ್ಣ ನಾವುಗಳೇ ಹೊತ್ತುಕೊಳ್ಳುವುದು ಹೊಸ ತರಹದ ಅನುಭವವಾಯ್ತು.

ಇಂದು ದೂರದರ್ಶನದಂತಹ ಉದ್ಯಮದಲ್ಲಿ ರಂಗಭೂಮಿಯ ನಟ, ನಿರ್ದೇಶಕ, ತಾಂತ್ರಿಕ ವಿನ್ಯಾಸಕರು ಹೀಗೆ ಅನೇಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಟರುಗಳಿಗೆ ಈ ಮಾಧ್ಯಮಗಳಿಂದಾಗಿ ಸ್ವಲ್ಪ ಬೇಡಿಕೆಯೂ ಬಂದಿದೆ. ಇದರಿಂದಾಗಿ ಹಲವಾರು ರಂಗಕರ್ಮಿಗಳು ಅಲ್ಪ ಸ್ವಲ್ಪ ಹಣವನ್ನೂ ಕಾಣುತ್ತಿದ್ದಾರೆ.

ಹಾಗಾದರೆ, ನಾಟಕವೊಂದನ್ನೇ ವೃತ್ತಿಯಾಗಿಸಿಕೊಂಡು ಬದುಕಬೇಕೆನ್ನುವವರ ಅಸ್ತಿತ್ವವೇನು ? ಒಂದಂತೂ ನಿಜ. ಇತರ ಕಲಾ ಶ್ರದ್ಧೆಗಳಾದ ಸಂಗೀತ, ನೃತ್ಯ, ಶಿಲ್ಪ, ಚಿತ್ರಕಲೆಗಳಲ್ಲಿ ಕಲಾವಿದರು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಾ, ಬದುಕುವ ಮಾರ್ಗವನ್ನು ಕಂಡುಕೊಳ್ಳಲು ಬೇಕಾದ ಅಭ್ಯಾಸ ಕ್ರಮ, ವ್ಯವಸ್ಥೆ ನಮ್ಮಲ್ಲಿ ಹೆಚ್ಚಿದೆ. ಆದರೆ ರಂಗಭೂಮಿಯ ಕಲಾವಿದನಿಗೆ ತೆರೆದ ಅವಕಾಶಗಳು ಕಡಿಮೆ. ಅಲ್ಲಿ ಕಲೆ ವೈಯಕ್ತಿಕ ನೆಲೆಯಲ್ಲಿ ಸಾಧಿಸಲು ಸಾಧ್ಯವಾದರೆ ಇಲ್ಲಿ ರಂಗಭೂಮಿಯಲ್ಲಿ ನಾಲ್ಕಾರು ಜನ ಸೇರಿಯೇ ಆ ಕೆಲಸವಾಗಬೇಕು. ಅನ್ಯ ಶಿಸ್ತಿನ ಕಲೆಗಳಂತೆ ನಾವುಗಳೂ ಸತತ ಅಭ್ಯಾಸಕ್ಕೆ ಮಹತ್ವ ನೀಡಬೇಕಿದೆ. ಏಕೆಂದರೆ ಅನೇಕ ರಂಗಕರ್ಮಿಗಳಿಗೆ ನಾಟಕದ ಕೆಲಸವೆಂದರೆ ಕೇವಲ ತಮ್ಮ ಬುದ್ಧಿವಂತಿಕೆಯನ್ನು ಮೆರೆಯುವ, ಕೌಶಲವನ್ನು ತೋರಿಸುವ ಕೆಲಸವಾಗಿದೆ. ಅನ್ಯ ಕಲೆಗಳಲ್ಲಿ ಇದು ಇಲ್ಲವೆನ್ನಲಾಗದಿದ್ದರೂ, ಅಲ್ಲಿ ಕವಿ-ಕಲಾವಿದ ತನ್ನ ಕ್ಷೇತ್ರದಲ್ಲಿ ಕೃಷಿಮಾಡುತ್ತಾ ಬದುಕಿನ ಅರಿವನ್ನು ಪಡೆವಂತೆ, ನೀಡುವಂತೆ ತನ್ನ ಬದುಕನ್ನು ರಂಗಕಾರ್ಯದ ಮೂಲಕ ಹೊಸತಾಗಿ ಕಾಣುವ ಸಾಧ್ಯತೆ ರಂಗಕರ್ಮಿಯೊಬ್ಬನಿಗೆ ಕಡಿಮೆ. ಕಾರಣ ಮುಖ್ಯವಾಗಿ ನಾಟಕವನ್ನು ಕಟ್ಟುವ ಕ್ರಿಯೆಯಲ್ಲಿ ಈಗ ಪ್ರಮುಖವಾಗಿ ಕಾಣುತ್ತಿರುವ ಕಾರ್ಯನಿಷ್ಠತೆ, ಸತತ ಅಭ್ಯಾಸ ಇವುಗಳ ಕೊರತೆ. ಅಭಿನಯ, ನಿರ್ದೇಶನ, ವಿನ್ಯಾಸ ಮುಂತಾದವುಗಳು ಕೇವಲ ಅಲಂಕಾರಗಳಾಗಿ, ಕೌಶಲಗಳಾಗಿರುವವರೆಗೂ ರಂಗಭೂಮಿ ಇಂದಿನ ವಾಣಿಜ್ಯ ಚಲನಚಿತ್ರಗಳಿಗಿಂತ ಹೆಚ್ಚಿನ ಕೆಲಸ ಮಾಡಲಾರದು.

ನಮ್ಮಲ್ಲಿ ಬಹಳಷ್ಟು ರಂಗಕರ್ಮಿಗಳಿಗೆ ರಂಗಭೂಮಿಯ ಕೆಲಸದಲ್ಲೇ ತೊಡಗಿಸಿಕೊಳ್ಳುವ ಶ್ರದ್ಧೆಯಿದ್ದರೂ, ಅವರು ಅದರಲ್ಲೂ ನಟರು ತಿರುಗಾಟದಂತಹ ರೆಪರ್ಟರಿಗಳನ್ನೋ ಇಲ್ಲ ತಮ್ಮ ತಮ್ಮ ಊರಿನಲ್ಲಿ ದೊರೆಯುವ ಅವಕಾಶಗಳಿಂದಷ್ಟೆ ತೃಪ್ತರಾಗಬೇಕು. ಒಟ್ಟು ಪರಿಸ್ಥಿತಿಯಲ್ಲಿ ಅವಕಾಶಗಳೇನೂ ತಾವಾಗಿಯೇ ಯಾರನ್ನೂ ಕರೆಯುವುದಿಲ್ಲ. ನಾವು-ನಾವುಗಳೇ ನಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುತ್ತಾ ನಮ್ಮ ಅವಕಾಶಗಳನ್ನು ನಾವೇ ಕಂಡುಕೊಳ್ಳುವ ಅಗತ್ಯ ಖಂಡಿತಾ ಇದೆ. ಇಲ್ಲದಿದ್ದರೆ, ನಮ್ಮ ಅಧೀರತೆಯನ್ನು ಆಳುವುದಕ್ಕೆ ಇತರ ಅನೇಕ ಸಮ್ಮೋಹನ ಮಾಧ್ಯಮಗಳು ಅವಕಾಶಗಳನ್ನು ಚೆಲ್ಲಿ ಕೂತಿವೆ.

ಈ ನಿಟ್ಟಿನಲ್ಲಿ ನಾವು ಕೈಗೊಂಡ 'ವಸಂತ ಪಯಣ' ನಾವು ಎಂಟು ಜನ ನಟ-ನಟಿಯರಿಗೆ ರಂಗಭೂಮಿಯ ಒಂದು ಕನಸು ಕಾಣಲಿಕ್ಕೆ ಸಹಾಯಕವಾಗಿದೆ.

ಇಪ್ಪತ್ತು ಪ್ರದರ್ಶನಗಳಿಂದ ಸಂಗ್ರಹಗೊಂಡ ೪೩,೦೦೦ರೂಗಳನ್ನು ನಾವು ಖರ್ಚುಗಳ ಜೊತೆಯಲ್ಲಿ ಸಮನಾಗಿ ಹಂಚಿಕೊಂಡಿದ್ದೇವೆ. ಪ್ರೊಸೀನಿಯಮ್



ಮಾದರಿಯಲ್ಲದ, ಬಹಳ ಸಮೀಪದಿಂದ ಕಡಿಮೆ ಪ್ರೇಕ್ಷಕರಷ್ಟೇ ವೀಕ್ಷಿಸಲು ಸಾಧ್ಯವಾಗುವ, ಯಾವುದೇ ವಿಶಾಲವಾದ ಒಂದು ಕೊಠಡಿಯಲ್ಲಿ ಪ್ರದರ್ಶಿಸಲು ಸಾಧ್ಯವಾಗುವಂತೆ ವಿನ್ಯಾಸಗೊಂಡಿರುವ ನಮ್ಮ ಪ್ರಯೋಗಗಳನ್ನು ಇಪ್ಪತ್ತು ದಿನಗಳಲ್ಲಿ ಸುಮಾರು ೩೫೦೦ ಜನ ಪ್ರೇಕ್ಷಕರು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಜನರಿಗೆ ರಂಗಭೂಮಿಯ ಅನಿವಾರ್ಯ ಎಂದಿನಿಂದಲೂ ಇದೆ, ಈಗಲೂ ಇದೆ. ಆ ಕೆಲಸಕ್ಕೆ ಸಿಗುವ ಪ್ರೋತ್ಸಾಹ ಈಗಲೂ ಸಿಗುತ್ತಿದೆ. ಹಾಗೆ ನೋಡಿದರೆ ಒಂದೇ ಕ್ಷೇತ್ರದಲ್ಲಿದ್ದುಕೊಂಡು ಶಿಸ್ತಿನಿಂದ ನಾಟಕದ ಕೆಲಸವನ್ನಷ್ಟೇ ಮಾಡಬಲ್ಲ, ಮಾಡಿದ ಕೆಲಸದಿಂದ ಸರಿಯಾದ ಫಲಪಡೆಯಬಲ್ಲ ಕಾರ್ಯದಕ್ಷತೆಯುಳ್ಳವರೇ ಕಡಿಮೆಯಾಗುತ್ತಿದ್ದಾರೆ. ಮೈ-ಮನಸ್ಸುಗಳನ್ನು ಸಂಪೂರ್ಣ ನಮ್ಮ ಕೆಲಸದಲ್ಲಿ ತೊಡಗಿಸಿಕೊಂಡರೆ ಫಲ ಖಂಡಿತಾ ದೊರೆಯುತ್ತದೆ. ಇದಕ್ಕೆ ನಾವೇ ಯೋಜಿಸಿ ಪ್ರಯೋಗಿಸಿದ 'ವಸಂತ ಪಯಣ'ದ ಒಂದು ಚಿಕ್ಕ ಯಶಸ್ಸೇ ಸಾಕ್ಷಿ.

ಮತ್ತು, ಇದು ಕೇವಲ ಒಂದು ಪ್ರಯತ್ನ, ಕೇವಲ ಒಂದು ಮಾರ್ಗ, ಒಂದು ಸಾಧ್ಯತೆಯಷ್ಟೆ.

**ಪ್ರಕಟಣೆ**

ಈ ವರ್ಷದಿಂದ ಅಕ್ಷರ ಪ್ರಕಾಶನವು **ಬಿ.ಎಂ.ಶ್ರೀ. ಕಾವ್ಯಪ್ರಶಸ್ತಿ** ಎಂಬ ಪುರಸ್ಕಾರವನ್ನು ಕೊಡಲು ಆರಂಭಿಸಿದೆ. ಶ್ರೀಮತಿ ಕಮಲಾ ಬಾಲುರಾವ್ ಮತ್ತು ಶ್ರೀ ಶಾ. ಬಾಲುರಾವ್ ಅವರು ಇಟ್ಟ ಇಡುಗಂಟಿನಿಂದ ಈ ಪ್ರಶಸ್ತಿಯನ್ನು ಕೊಡಲಾಗುತ್ತಿದ್ದು ಅಕ್ಷರ ಪ್ರಕಾಶನವು ಈ ಪ್ರಶಸ್ತಿಯ ನಿರ್ಧಾರ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದೆ. ಈ ಪ್ರಶಸ್ತಿಯು ಪ್ರಸ್ತುತ ವರ್ಷದಲ್ಲಿ ಪ್ರಕಟವಾದ **ಹೊಸ ಬರಹಗಾರ ರೊಬ್ಬರ ಮೊದಲ ಕವನಸಂಗ್ರಹಕ್ಕೆ** ಮೀಸಲಾಗಿದೆ.

೧೯೯ನೆಯ ಸಾಲಿನ ಈ ಪ್ರಶಸ್ತಿಯನ್ನು **ಶ್ರೀಮತಿ. ಎಂ.ಆರ್. ಭಗವತಿ ಅವರ 'ಏಕಾಂತದ ಮಳೆ' ಕವನಸಂಗ್ರಹಕ್ಕೆ** ಕೊಡುವುದೆಂದು ತಜ್ಞರ ಸಮಿತಿಯು ನಿರ್ಣಯಿಸಿದ್ದು ಇದನ್ನು ಇದೇ ಅಕ್ಟೋಬರ್ ೨೦ರಂದು ಶಿವಮೊಗ್ಗ ಜಿಲ್ಲೆ ಹೆಗ್ಗೋಡಿನಲ್ಲಿ ನಡೆಯುವ ನೀನಾಸಮ್ ಸಂಸ್ಕೃತಿ ಶಿಬಿರದ ಸಂದರ್ಭದಲ್ಲಿ ನೀಡಲಾಗುತ್ತಿದೆ. ಅಂದು ಕನ್ನಡದ ಹಿರಿಯ ಬರಹಗಾರರೊಬ್ಬರು ಈ ಪ್ರಶಸ್ತಿ ಪತ್ರವನ್ನೂ ರೂ. ೫೦೦೦ ನಗದು ಬಹುಮಾನವನ್ನೂ ವಿಜೇತರಿಗೆ ಅರ್ಪಿಸುತ್ತಾರೆ.

# ಕಿನ್ನರ ಮೇಳ – ಹತ್ತರ ಹೆಜ್ಜೆ

ಮಕ್ಕಳ ರಂಗಭೂಮಿಯ ಕುರಿತು ಗಂಭೀರ ಚಿಂತನೆ ಹಾಗೂ ಪ್ರಯೋಗಗಳನ್ನು ನಡೆಸುವ ಹಂಬಲ ಹೊತ್ತು ೧೯೯೦ರಲ್ಲಿ ಕಿನ್ನರಮೇಳ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ನೀನಾಸಮ್ ತಿರುಗಾಟದ ಮಕ್ಕಳ ನಾಟಕ ಪ್ರಯೋಗಗಳು, ಚಿಣ್ಣಬಣ್ಣ ತಂಡದ ವಿನ್ಯಾಸ ಮುಂತಾದವು ಕಿನ್ನರಮೇಳದ ಹುಟ್ಟಿಗೆ ಪ್ರೇರಣೆ ನೀಡಿದವು. ಸಾಗರ ತಾಲ್ಲೂಕಿನ ತುಮರಿ ಎಂಬ ಪುಟ್ಟಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡ ಈ ಸಂಸ್ಥೆ –ಮಕ್ಕಳಿಗೆ ಆರೋಗ್ಯಕರ ರಂಜನೆ ಕೊಡುವುದರ ಜೊತೆಗೆ, ಅವರಲ್ಲಿ ಹೊಸಬಗೆಯ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸುವುದು, ಅವರ ವ್ಯಕ್ತಿತ್ವ ಹಾಗೂ ಕಲ್ಪನಾ ಶಕ್ತಿಯನ್ನು ವಿಸ್ತಾರಗೊಳಿಸುವುದು, ನಾಟಕದ ಮೂಲಕ ಪಠ್ಯ ಶಿಕ್ಷಣ ನೀಡುವುದು ಮುಂತಾದ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.

ಕಿನ್ನರಮೇಳ ರೆಪರ್ಟರಿಯು ದೊಡ್ಡವರು ಮಕ್ಕಳಿಗಾಗಿ ಅಭಿನಯಿಸುವ ರಂಗತಂಡ. ಹನ್ನೆರಡು ಜನ ವೇತನ ಪಡೆಯುವ ಪೂರ್ಣಾವಧಿ ನಟರನ್ನೊಳಗೊಂಡ ತಂಡ ಪ್ರತಿವರ್ಷ ಮಕ್ಕಳಿಗಾಗಿ ಒಂದು ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಇನ್ನೊಂದು – ಹೀಗೆ ಎರಡು ಹೊಸ ನಾಟಕಗಳನ್ನು ತಯಾರಿಸಿಕೊಂಡು ಪ್ರದರ್ಶನ ನೀಡುತ್ತದೆ. ಶಾಲಾ ಅವಧಿಯಲ್ಲಿ ಹಗಲುಹೊತ್ತು ಮಕ್ಕಳಿದ್ದಲ್ಲಿಗೇ ಹೋಗಿ ಎಲ್ಲೆಂದರಲ್ಲಿ ಪ್ರದರ್ಶನ ನೀಡುವುದು ತಂಡದ ವೈಶಿಷ್ಟ್ಯ. ಪ್ರತಿವರ್ಷ ರಾಜ್ಯದ ಸುಮಾರು ೧೦ ಜಿಲ್ಲೆಗಳಲ್ಲಿ ಸಂಚರಿಸುವ ಈ ತಂಡ, ಸರಾಸರಿ ೧೫೦ ಪ್ರದರ್ಶನಗಳನ್ನು ನೀಡುತ್ತದೆ. ಮತ್ತು ಸುಮಾರು ಎಪ್ಪತ್ತೈದು ಸಾವಿರ ಪ್ರೇಕ್ಷಕರು ನಾಟಕಗಳನ್ನು ವೀಕ್ಷಿಸುತ್ತಾರೆ.

ರಂಗಮುಖೇನ ಶಿಕ್ಷಣ ಶಿಬಿರ ಯೋಜನೆ – ಮಕ್ಕಳಿಗಾಗಿ ಶಾಲೆಗಳಲ್ಲಿ ನಡೆಸುವ ರಂಗಕಾರ್ಯಾಗಾರ. ಮೂರು ಜನ ರಂಗತಜ್ಞರನ್ನೊಳಗೊಂಡ ರಂಗಶಿಕ್ಷಣ ಘಟಕವು ಶಾಲೆಗಳಲ್ಲಿ ನಾಲ್ಕು ವಾರಗಳ ಕಾಲ ನಾಟಕ ಶಿಬಿರಗಳನ್ನು ನಡೆಸುತ್ತದೆ. ಈ ಶಿಬಿರಗಳಲ್ಲಿ ಮಕ್ಕಳಿಗಾಗಿ ಒಂದು ಪೂರ್ಣಾವಧಿ ನಾಟಕ ಮತ್ತು ಎರಡು ಪಠ್ಯನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಾಗುತ್ತದೆ. ಪ್ರತಿವರ್ಷ ಇಂತಹ ೪-೬ ಕಾರ್ಯಾಗಾರಗಳನ್ನು ಬೇರೆ ಬೇರೆ ಶಾಲೆಗಳಲ್ಲಿ ನಡೆಸಲಾಗುತ್ತದೆ.

ಮಕ್ಕಳ ರಂಗಭೂಮಿಗಾಗಿ ದುಡಿಯುತ್ತಿರುವ ರಂಗತಂಡಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಪ್ರತಿವರ್ಷ ತುಮರಿಯಲ್ಲಿ ೩-೫ ದಿನಗಳ ಮಕ್ಕಳ ನಾಟಕೋತ್ಸವವನ್ನು ನಡೆಸಲಾಗುತ್ತದೆ. ಕೇವಲ ನಾಟಕಗಳಷ್ಟೇ ಅಲ್ಲದೆ, ಮಕ್ಕಳ ಯಕ್ಷಗಾನ, ಗೊಂಬೆ ಆಟ ಮುಂತಾದ ಪ್ರಕಾರಗಳೂ ಕೂಡಾ ಈ ಉತ್ಸವದಲ್ಲಿ ಪ್ರದರ್ಶಿಸಲ್ಪಡುತ್ತವೆ. ಸಂಪನ್ಮೂಲಗಳನ್ನು ನೋಡಿಕೊಂಡು ಮಕ್ಕಳ ರಂಗಭೂಮಿಯ ಕುರಿತು ವಿಚಾರಸಂಕಿರಣ, ಶಾಲಾ ಶಿಕ್ಷಕರುಗಳಿಗಾಗಿ ನಾಟಕ ಶಿಬಿರ – ಮುಂತಾದ ಕಾರ್ಯಕ್ರಮಗಳನ್ನೂ ಸಂಸ್ಥೆಯು ನಡೆಸುತ್ತದೆ. ಇದೀಗ ಹತ್ತು ವರ್ಷಗಳು ತುಂಬಿದ ಕಿನ್ನರಮೇಳ ಸಂಸ್ಥೆಯು ತನ್ನ ನಿರಂತರವಾದ ಚಟುವಟಿಕೆಗಳಿಂದಾಗಿ ರಾಷ್ಟ್ರವ್ಯಾಪಿ ಆಸಕ್ತರ ಗಮನ ಸೆಳೆದುಕೊಂಡಿದೆ.

ಹತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ದಶಮಾನದ ವಿಶೇಷ ಕಾರ್ಯಕ್ರಮವೊಂದನ್ನು ನಡೆಸುತ್ತಿದೆ. ಸಂಸ್ಥೆಯು ಕಳೆದ ಹತ್ತು ವರ್ಷಗಳಲ್ಲಿ ಪ್ರಯೋಗಿಸಿದ ೨೮ ನಾಟಕಗಳಲ್ಲಿ ಆರು ನಾಟಕಗಳನ್ನು ಆಯ್ದುಕೊಂಡು, ರಾಜ್ಯದ ಪ್ರಮುಖ ಸಾಂಸ್ಕೃತಿಕ ಕೇಂದ್ರಗಳಲ್ಲಿ ಐದು ದಿನಗಳ ನಾಟಕೋತ್ಸವವನ್ನು ಏರ್ಪಡಿಸುವುದು – ಈ ಕಾರ್ಯಕ್ರಮ. ಇದರ ಮೂಲಕ ತನ್ನ ಚಟುವಟಿಕೆಗಳ ಪುನರವಲೋಕನ ಮಾಡಿಕೊಳ್ಳುವುದರ ಜೊತೆಗೆ, ಈ ವರೆಗೆ ಮಕ್ಕಳಿಗಷ್ಟೇ ಪರಿಚಿತವಾಗಿದ್ದ ತನ್ನ ಚಟುವಟಿಕೆಯನ್ನು ರಂಗಭೂಮಿಯ ಮುಖ್ಯ ಪ್ರೇಕ್ಷಕರಿಗೂ ಪರಿಚಯಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಪ್ರಸ್ತುತ ನಾಟಕೋತ್ಸವದಲ್ಲಿ ಆಡುವ ನಾಟಕಗಳು – 'ಸೂರ್ಯಬಂದ' (ರಚನೆಃ ವೈದೇಹಿ, ನಿಃ ಕೆ.ಜಿ. ಕೃಷ್ಣಮೂರ್ತಿ), 'ಮಿಸ್ ಪಾಯಿಂಟ್' (ರಚನೆಃ ಕೆ. ಮಧುಕರ, ನಿಃ ನಾರಾಯಣ ಪಾಂಡುರಂಗಿ), 'ದಂಡಿಯಾತ್ರೆ' (ರಚನೆ; ನಿಃ ಕೆ.ಜಿ. ಕೃಷ್ಣಮೂರ್ತಿ), 'ಪುಷ್ಪರಾಣಿ' (ರಚನೆಃ ಚಂದ್ರಶೇಖರ ಕಂಬಾರ, ನಿಃ ಕೆ.ಜಿ. ಕೃಷ್ಣಮೂರ್ತಿ), 'ಹಕ್ಕಿಹಾಡು' (ರಚನೆಃ ವೈದೇಹಿ, ನಿಃ ಕೃಷ್ಣಮೂರ್ತಿ ಕವತ್ತಾರ್). 'ಸಿರಿಸಂಪಿಗೆ' (ರಚನೆಃ ಚಂದ್ರಶೇಖರ ಕಂಬಾರ, ನಿಃ ಕೆ.ಜಿ. ಕೃಷ್ಣಮೂರ್ತಿ) ಮತ್ತು 'ಚಕ್ರವ್ಯೂಹ' (ನಿಃ ಕೆ.ಜಿ. ಮಂಜುನಾಥ, ಪ್ರಸ್ತುತಿಃಸಾಕೇತ ಕಲಾವಿದರು.)

ಕಿನ್ನರಮೇಳದ ರೂವಾರಿ ಶ್ರೀ ಕೆ.ಜಿ. ಕೃಷ್ಣಮೂರ್ತಿಯವರು ಇದೇ ವರ್ಷ– ರಾಷ್ಟ್ರೀಯ ನಾಟಕ ಶಾಲೆಯ ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಹಾಗೂ ಕೇರಳ ಸಂಗೀತ ನಾಟಕ ಅಕಾಡೆಮಿಯ ನೆರವಿನಲ್ಲಿ – ಕೇರಳದಲ್ಲೂ ಇದೇ ಮಾದರಿಯಲ್ಲಿ 'ನಾಟಕ ಯಾತ್ರೆ' ಎಂಬ ರಂಗಘಟಕವನ್ನು ರೂಪಿಸಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅದನ್ನು ಕಿನ್ನರಮೇಳದ ಹತ್ತರ ಹೆಜ್ಜೆಯಲ್ಲಿ ಒಂದಾಗಿ ಪರಿಗಣಿಸಬಹುದಾಗಿದೆ.

ಸದ್ಯ ಕಿನ್ನರಮೇಳವು ತನ್ನ ಮುಂದಿನ ತಿರುಗಾಟಕ್ಕಾಗಿ ಶೂದ್ರಕನ 'ಮೃಚ್ಛಕಟಿಕ' ಮತ್ತು ಷೇಕ್ಸ್‌ಪಿಯರ್ ನಾಟಕ ಆಧರಿತ 'ರಾಬಿನ್ ಹುಡ್' ಎಂಬ ನಾಟಕಗಳ ತಯಾರಿ ನಡೆಸುತ್ತಿದೆ.

# ನೀನಾಸಮ್ ಚಟುವಟಿಕೆಗಳು

## ನೀನಾಸಮ್ ರಂಗಶಿಕ್ಷಣ ಕೇಂದ್ರ

ನೀನಾಸಮ್ ರಂಗಶಿಕ್ಷಣ ಕೇಂದ್ರದ ೨೧ನೇ ಶೈಕ್ಷಣಿಕ ವರ್ಷವು ಜುಲಾಯಿ ೧೫ರಂದು ಪ್ರಾರಂಭವಾಯಿತು. ಈ ವರ್ಷ ೬ಮಂದಿ ಹುಡುಗಿಯರು ಸೇರಿದಂತೆ ಒಟ್ಟು ೧೮ ಮಂದಿ ರಂಗಪ್ರಶಿಕ್ಷಣಕ್ಕೆ ಆಯ್ಕೆಯಾಗಿ ಸೇರಿದ್ದಾರೆ. ದೈನಂದಿನ ಪಾಠಪ್ರವಚನಗಳ ಜೊತೆಗೆ ವರ್ಷದ ಮೊದಲಿಗೇ ಕೆಲವು ವಿಶೇಷ ಕಮ್ಮಟಗಳನ್ನು ಹಮ್ಮಿಕೊಳ್ಳಲಾಗಿದೆ. ಶ್ರೀ ನಟರಾಜ ಹೊನ್ನವಳ್ಳಿಯವರ ನಿರ್ದೇಶನದಲ್ಲಿ ಕನ್ನಡ ಸಣ್ಣಕತೆಗಳ ಅಧ್ಯಯನ ಹಾಗೂ ಅವುಗಳಲ್ಲಿ ಆಯ್ದ ಕತೆಗಳನ್ನು ಆಧರಿಸಿ ನಾಟಕ ತಯಾರಿಯ ಕಮ್ಮಟ ನಡೆಯುತ್ತಿದೆ. ನ್ಯೂಯಾರ್ಕ್ ವಿಶ್ವವಿದ್ಯಾನಿಲಯದ ಶ್ರೀ ಟೆರ್ರಿ ನಿಕರ್‌ಬಾಕರ್ ಅವರು ಮೂರು ದಿನಗಳ ನಟನಾಶಿಬಿರವೊಂದನ್ನು ನಡೆಸಿಕೊಟ್ಟಿದ್ದಾರೆ. ಈ ನಡುವೆ ನೀನಾಸಮ್ ಪ್ರಯೋಗಿಸಿದ ಸಂಸರ 'ಮಂತ್ರಶಕ್ತಿ' ನಾಟಕವನ್ನು ಹಾಗೂ ಹಲವು ಉಪಯುಕ್ತ ವಿಡಿಯೊ ದಾಖಲೆಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿ ಚರ್ಚೆ ನಡೆಸಿದ್ದಾರೆ.

## ನೀನಾಸಮ್ ಪ್ರತಿಷ್ಠಾನ

ಆಗಸ್ಟ್ ದಿನಾಂಕ ೨೬ ಮತ್ತು ೨೭ ರಂದು ನೀನಾಸಮ್ ಶ್ರಾವಣ ಉಪನ್ಯಾಸ ಕಾರ್ಯಕ್ರಮಗಳು ನಡೆದವು. ಪ್ರಸಿದ್ಧ ವಿದ್ವಾಂಸರಾದ ಪ್ರೊ। ಟಿ.ಆರ್. ಎಸ್. ಶರ್ಮ, ಮೈಸೂರು – ಇವರು ಈ ವಿಶೇಷ ಉಪನ್ಯಾಸಗಳನ್ನು ನಡೆಸಿಕೊಟ್ಟರು. ಪ್ರಸ್ತುತ ಬಿರ್ಲಾ ಪ್ರತಿಷ್ಠಾನದ ಫೆಲೋ ಆಗಿ ಪ್ರಾಚೀನ ಭಾರತದ ನಾಗರಿಕತೆಗಳಲ್ಲಿ ನಡೆದ 'ಸಾಂಸ್ಕೃತಿಕ ಮುಖಾಮುಖಿ'ಯನ್ನು ಕುರಿತು ಅಭ್ಯಾಸ ನಡೆಸುತ್ತಿರುವ ಪ್ರೊ. ಶರ್ಮ ಅವರು ದೆಹಲಿ, ಆಲ್ಬೆರ್ಟಾ, ಆಲ್ಜೀರಿಯಾಗಳಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ದುಡಿದವರು. ಭಾಷೆ ಮತ್ತು ಸಾಂಸ್ಕೃತಿಕ ಸಿದ್ಧಾಂತಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಿದವರು. ಅವರು ಇಲ್ಲಿ ನಡೆಸಿಕೊಟ್ಟ ಮೂರು ಉಪನ್ಯಾಸಗಳ ವಿಷಯಗಳು – ಭಾಷೆಯ ತಾತ್ವಿಕತೆ, ಭಾಷೆಯನ್ನು ಸಿದ್ಧಾಂತೀಕರಿಸುವ ಭಾರತೀಯ ಮತ್ತು ಪಾಶ್ಚಾತ್ಯ ಮಾರ್ಗಗಳು, ಈಚಿನ ಪಶ್ಚಿಮದ ಸಾಹಿತ್ಯದ ಸಿದ್ಧಾಂತಗಳು, ಅವುಗಳ ತಾತ್ವಿಕ ಹಿನ್ನೆಲೆ ಮತ್ತು ನಮ್ಮ ಸಾಹಿತ್ಯ ಜಿಜ್ಞಾಸೆಗೆ ಅವುಗಳಿಂದ ಆಗಬಹುದಾದ ಪ್ರಯೋಜನಗಳು. ಸೆಪ್ಟೆಂಬರ್ ೯ ಮತ್ತು ೧೦ರಂದು ಗದಗದಲ್ಲಿ ಸ್ಥಳೀಯ ಸಾಹಿತ್ಯ ಪರಿಷತ್ತು ಹಾಗೂ ನೀನಾಸಮ್ ಪ್ರತಿಷ್ಠಾನ ಸಹಯೋಗದೊಂದಿಗೆ 'ಕಾವ್ಯ ಸಹೃದಯತೆ' ಯ ಶಿಬಿರ ನಡೆಯಲಿದೆ.



## ನೀನಾಸಮ್‌ನ 'ಮಂತ್ರಶಕ್ತಿ' ಪ್ರಯೋಗ

೧೯೪೯ರಲ್ಲಿ ಒಂದು ಸ್ಥಳೀಯ ಹವ್ಯಾಸಿ ರಂಗತಂಡವಾಗಿ ಪ್ರಾರಂಭವಾದ ನೀನಾಸಮ್ ಈಗ ರಂಗಶಿಕ್ಷಣ ಕೇಂದ್ರ, ತಿರುಗಾಟ ಮುಂತಾಗಿ ಹಲವು ಶಾಖೆಗಳಲ್ಲಿ ವಿಸ್ತರಿಸಿ ಬೆಳೆದುಕೊಂಡಿದೆ. ಇವೆಲ್ಲದರ ನಡುವೆಯೂ ಸ್ಥಳೀಯ ರಂಗಾಸಕ್ತ ಸಮೂಹದೊಂದಿಗೆ ಆಗಾಗ ನಾಟಕಗಳನ್ನು ಆಡುತ್ತಲೇ ಬಂದಿದೆ– ಷಾಜಹಾನ್, ಸಂಗ್ಯಾ ಬಾಳ್ಯಾ, ಘಾಸೀರಾಮ್ ಕೊತ್ವಾಲ್, ಚೋಮನ ದುಡಿ, ಒಂದು ಲೋಕ ಕಥೆ, ಹ್ಯಾಮ್ಲೆಟ್, ಜೋಕುಮಾರಸ್ವಾಮಿ – ಮುಂತಾಗಿ. ಈ ಸ್ಥಳೀಯ ರಂಗಾಸಕ್ತರ ತಂಡವೇ ನೀನಾಸಮ್ ಸಂಸ್ಥೆಯ ಎಲ್ಲಾ ಚಟುವಟಿಕೆಗಳಿಗೂ ಬೆನ್ನೆಲುಬಾಗಿ ನಿಂತಿದೆ.

೨೦೦೦ನೇ ವರ್ಷ ಹೊಸ ಶತಮಾನ - ಸಹಸ್ರಮಾನಗಳ ಹೊಸತಿಲು. ಈ ಸಂದರ್ಭದಲ್ಲಿ ನೀನಾಸಮ್ ತಂಡವು ಸಂಸರ 'ಮಂತ್ರಶಕ್ತಿ' ಯನ್ನು ತನ್ನ ಹೊಸ ಪ್ರಯೋಗಕ್ಕೆ ಆರಿಸಿಕೊಂಡಿತು. ಸಂಸರ ನಾಟಕಗಳು ಇದುವರೆಗೂ ಪ್ರಯೋಗಕ್ಕೆ ಸುಲಭವಾಗಿ ಒದಗಿಬಂದದ್ದಿಲ್ಲ. ಅದಕ್ಕೆ ಕಾರಣ – ಸಂಸರು ತಮ್ಮ ನಾಟಕಗಳಿಗಾಗಿ ಸೃಷ್ಟಿಸಿಕೊಂಡ ಕ್ಲಿಷ್ಟವಾದ ಭಾಷೆ ಹಾಗೂ ಅವರ ಸಂಕೀರ್ಣವಾದ ರಂಗಪರಿಕಲ್ಪನೆ. ಅವರ ನಾಟಕಗಳು ಅಸಂಖ್ಯಾತ ಪಾತ್ರವೈವಿಧ್ಯಗಳಿಂದ ಇಡಿಕಿರಿದುಕೊಂಡಿದ್ದು ಅಲ್ಲಿಯ ಸನ್ನಿವೇಶಗಳು ಗತಕಾಲದ ಕಥಾನಕಗಳ ಮೂಲೆಮೂಲೆಗಳಿಂದ ಶೋಧಿಸಿ ಎತ್ತಿಕೊಂಡಿರುವ ತಿರುವು, ಒಳಸಂಚು, ಸಂಘರ್ಷಗಳಿಂದ ದಟ್ಟವಾಗಿರುತ್ತವೆ. ಅವರು ತಮ್ಮ ನಾಟಕಗಳಲ್ಲಿ ಕೊಡುವ ರಂಗನಿರ್ದೇಶನಗಳು ಪುರಾಣದ ವರ್ಣನೆಗಳಂತೆ ಚಿತ್ರಲೇಖನಗಳಂತೆ ರಂಗದಮೇಲೆ ದೃಶ್ಯೀಕರಿಸಲಿಕ್ಕೆ ಅಸಾಧ್ಯವೆನ್ನುವ ಹಾಗೆ ಕಾಣಿಸಿಕೊಳ್ಳುತ್ತವೆ. ಇಂಥ ಕ್ಲಿಷ್ಟತೆ, ಸಾಂದ್ರತೆ ಮತ್ತು ಸಂಕೀರ್ಣತೆಗಳ ಉತ್ತುಂಗದ ಉದಾಹರಣೆಯೆನ್ನಬಹುದಾದದ್ದು 'ಮಂತ್ರಶಕ್ತಿ'.

ಇಂಥದೊಂದು ಕೃತಿಯನ್ನು ತನ್ನೆಲ್ಲ ಮಿತಿಗಳ ನಡುವೆಯೂ ರಂಗಕ್ಕೆ ತರಲು ಪ್ರಯತ್ನಿಸಬೇಕು ಮತ್ತು ಆ ಮೂಲಕ ತಂಡದ ಅಭಿನಯ ಮತ್ತು ಪ್ರಯೋಗ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕು ಎಂಬ ಆಶಯದಿಂದ ಈ ನಾಟಕವನ್ನು ಆರಿಸಿಕೊಳ್ಳಲಾಯಿತು. ಮೊದಲು ಶ್ರೀ ನೀ.ನಾ.ಮಧ್ಯಸ್ಥರ ನೆರವಿನಿಂದ ಪಠ್ಯದ ಸಾಹಿತ್ಯಾತ್ಮಕ ಅಧ್ಯಯನ ನಡೆಸಲಾಯಿತು. ಅನಂತರ ಕೆ.ವಿ.ಅಕ್ಷರ ಅವರ ನಿರ್ದೇಶನದಲ್ಲಿ ತಾಲೀಮು ನಡೆಸಿ ಆಗಸ್ಟ್ ೧೯ ಮತ್ತು ೨೦ರಂದು ಪ್ರದರ್ಶಿಸಲಾಯಿತು. ಮೂರು ತಲೆಮಾರಿನ ಸುಮಾರು ೪೨ ಮಂದಿ ಹಿರಿ- ಕಿರಿಯ ಸ್ಥಳೀಯ ಕಲಾವಿದರು ಈ ಪ್ರಯೋಗದಲ್ಲಿ ಪಾಲ್ಗೊಂಡರು.

**ಮಾತುಕತೆ ೫೫**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೬೫೬೪೬

ಖಾಸಗಿ ಪ್ರಸಾರದ ತ್ರೈ ಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಶವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು

ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ಆಗಸ್ಟ್ ೨೦೦೦ ವರ್ಷ ಹದಿನಾಲ್ಕು ಸಂಚಿಕೆ ಮೂರು**

೧. ನೀನಾಸಮ್ ಸಂಸ್ಕೃತಿ ಶಿಬಿರ ೨೦೦೦/ ನೀನಾಸಮ್ ತಿರುಗಾಟ ೨೦೦೦ ಪುಟ ೧

೨. ತಂತ್ರಜನ್ಯ ನಾಗರಿಕತೆ ಮತ್ತು ಸಂಸ್ಕೃತಿ ಒಂದು ವೈಜ್ಞಾನಿಕ ನಿರ್ವಾಣ
ಮೂಲ ರಷ್ಯನ್: ವ್ಯಾಷೆಸ್ಲೆವ್ ಸ್ಟಿಯೋಸಿನ್,
ಇಂಗ್ಲಿಷ್: ಡಾ.ಹೆಲೆನ್ ಪೆಟ್ರೋವ್‌ಸ್ಕಿ, ಕನ್ನಡಕ್ಕೆ : ಪುಟ್ಟು ಕುಲಕರ್ಣಿ, ಪುಟ ೩

೩. ಅಣ್ವಸ್ತ್ರೀಕರಣ, ಮಾನವಹಕ್ಕು ಮತ್ತು ನೈತಿಕತೆ
ಡಾ. ಅಮೂಲ್ಯ ಕೆ.ಎನ್. ರೆಡ್ಡಿ ಅನು: ಮಾಧವ ಐತಾಳ ಪುಟ ೨೧

೪. ಪು.ಲ : ಒಂದು ನೆನಪು / ಜಿ.ಪಿ. ದೇಶಪಾಂಡೆ, ಅನು: ನಟರಾಜ ಹೊನ್ನವಳ್ಳಿ ಪುಟ ೩೪

೫. ವಸಂತಪಯಣದಲ್ಲಿ 'ಮಾಸ್ತಿ' ಮತ್ತು 'ನಾನು' / ಚನ್ನಕೇಶವ ಪುಟ ೩೯

೬. ಕಿನ್ನರ ಮೇಳ – ಹತ್ತರ ಹೆಜ್ಜೆ ಪುಟ ೪೫

೭. ನೀನಾಸಮ್ ಚಟುವಟಿಕೆಗಳು ಪುಟ ೪೭

**MAATHUKATHE** AUGUST 2000 (YEAR 14 ISSUE 3)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

**ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ**
(ಡಾ.ಡಿ.ಆರ್. ನಾಗರಾಜ್) ರೂ. ೧೨೦

**ಸಂಗೀತ ಸಂವಾದ**
(ಭಾಸ್ಕರ್ ಚಂದಾವರ್ಕರ್-ಅನು: ವೈದೇಹಿ) ರೂ. ೧೦೦

**ಮಹಾತ್ಮ**
(ನಾಟಕ / ಮುಕುಂದರಾವ್ - ಅನು: ಕೆ.ವಿ. ಸುಬ್ಬಣ್ಣ) ರೂ. ೫೦

**ಒಂಟಿ ಧ್ವನಿ**
(ಬರಹಗಳು - ಡಾ. ನಿ. ಮುರಾರಿ ಬಲ್ಲಾಳ) ರೂ. ೧೨೦

**ವೈದ್ಯ ವೈವಿಧ್ಯ**
(ವೈದ್ಯಕೀಯ ಬರಹಗಳು-ಡಾ. ಎಚ್.ಎಸ್. ಮೋಹನ್) ರೂ. ೮೦

**ಮಹಾಮಾಯಿ**
(ನಾಟಕ - ಚಂದ್ರಶೇಖರ ಕಂಬಾರ) ರೂ. ೬೦

**ಸಕ್ಕರೆ ಗೊಂಬೆ**
(ನಾಟಕ - ವಿವೇಕ ಶಾನಭಾಗ) ರೂ. ೫೫

**ಎರಡು ರಷ್ಯನ್ ನೀಳ್ಗತೆಗಳು**
(ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) ರೂ. ೫೫

**ರಂಗಪ್ರಯೋಗ**
(ಅಭಿನಯ, ರಂಗತಂತ್ರ ಮತ್ತು ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) ರೂ.೨೦೦

**ಬಹುಮುಖ** (ಅಕ್ಷರ ಚಿಂತನ ಮಾಲೆ -
ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ) ರೂ. ೫೫

**ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ -
ರಾಮಚಂದ್ರ ಗುಹಾ, ಅನು: ಮಾಧವ ಐತಾಳ) ರೂ. ೭೫

**ಹೊಸ ಪ್ರಕಟಣೆಗಳು**

**ರಂಗದಲ್ಲಿ ಅಂತರಂಗ**
(ಸ್ತಾನಿಸ್ಲಾವ್‌ಸ್ಕಿಯ ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್ ಅನುವಾದ: ಕೆ.ವಿ. ಸುಬ್ಬಣ್ಣ) ರೂ. ೧೬೦

**ಅಮ್ಮಚ್ಚಿಯೆಂಬ ನೆನಪು**
(ಕಥೆಗಳು - ವೈದೇಹಿ) ರೂ. ೮೦

**ಸಿಂಗಾರೆವ್ವ ಮತ್ತು ಅರಮನೆ**
(ಕಾದಂಬರಿ-ಮರುಮುದ್ರಣ- ಚಂದ್ರಶೇಖರ ಕಂಬಾರ) ರೂ. ೮೫

**ಕಾರಂತ ಚಿಂತನ**
(ಕಡಲಾಚೆಯ ಕನ್ನಡಿಗರಿಂದ ಕಾರಂತರ ಕುರಿತ ಬರಹಗಳು) ರೂ. ೧೫೦